ಮಂಗಳವಾರ, ಆಗಸ್ಟ್ 31, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 243 | ಪುಟ 12

www.prajavani.net


/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಮನಸ್ಸು ಶಾಂತವೂ ಜಾಗೃತವೂ ಮತ್ತು ಪೂರ್ಣತೃಪ್ತವೂ ಆಗಿದ್ದಾಗ ಅದು ಲೇಸರ್ ಕಿರಣವಾಗುತ್ತದೆ. ಇದಕ್ಕೆ ನೆರವಾಗುತ್ತದೆ ಧ್ಯಾನಸಾಧನೆ.



ಸಂಖ್ಯೆ-ಸುದ್ದಿ

ಪರೀಕ್ಷೆಯೂ ಹೆಚ್ಚು ಪ್ರಕರಣವೂ ಹೆಚ್ಚು

30 ಬಾರಿ ಡ್ರಗ್ಸ್ ಖರೀದಿಸಿದ್ದ 'ಆರ್‌ಟಿಒ ಎಫ್‌ಡಿಎ' 6

ಪರಿಹಾರ ನಿರೀಕ್ಷೆಯಲ್ಲಿ ಅಸಂಘಟಿತ ಕಾರ್ಮಿಕರು 6

ಸೆನ್ಸೆಕ್ಸ್	ನಿಫ್ಟಿ	₹/$
56,889 ▲	16,931 ▲	73.29 ▲

400 ಜನರ ಮಿತಿಗೆ ಒಳಪಟ್ಟು ಕಲ್ಯಾಣ ಮಂಟಪ ತೆರೆಯಲು ಒಪ್ಪಿಗೆ

6–8ನೇ ತರಗತಿ ಸೆ.6ಕ್ಕೆ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ದೃಢ ಪ್ರಮಾಣ ದರ ಶೇಕಡ 2ಕ್ಕಿಂತ ಕಡಿಮೆ ಇರುವ ಎಲ್ಲ ತಾಲ್ಲೂಕುಗಳಲ್ಲೂ ಆರರಿಂದ ಎಂಟನೇ ತರಗತಿ ವಿದ್ಯಾರ್ಥಿಗಳಿಗೆ ಸೆಪ್ಟೆಂಬರ್ 6ರಿಂದ ಭೌತಿಕ ತರಗತಿಗಳನ್ನು ಆರಂಭಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ರಾಜ್ಯದ 38,040 ಶಾಲೆಗಳಲ್ಲಿ ಆರರಿಂದ ಎಂಟನೇ ತರಗತಿಯ 31.36 ಲಕ್ಷ ವಿದ್ಯಾರ್ಥಿಗಳಿದ್ದಾರೆ. 1.52 ಲಕ್ಷ ಶಿಕ್ಷಕರು ಈ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೋವಿಡ್ ದೃಢಪ್ರಮಾಣ ದರ ಶೇ 2ಕ್ಕಿಂತ ಹೆಚ್ಚಿರುವ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಶಾಲೆಗಳನ್ನು ಆರಂಭಿಸದಿರಲು ನಿರ್ಧರಿಸಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಸೋಮವಾರ ನಡೆದ ಉನ್ನತ ಮಟ್ಟದ ಸಭೆಯ ಬಳಿಕ ತೀರ್ಮಾನಗಳನ್ನು ಪ್ರಕಟಿಸಿದ ಕಂದಾಯ ಸಚಿವ ಆರ್.ಅಶೋಕ, 'ಪ್ರತಿ ತರಗತಿಯ ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಭಜಿಸಿ, ದಿನ ಬಿಟ್ಟು ದಿನ ತರಗತಿ ನಡೆಸಲಾಗುವುದು. ಸೋಮವಾರದಿಂದ ಶುಕ್ರವಾರದವರೆಗೆ ತರಗತಿಗಳು ನಡೆಯಲಿವೆ. ಶನಿವಾರ ಮತ್ತು ಭಾನುವಾರ ತರಗತಿ ಕೊಠಡಿಗಳನ್ನು ಸ್ಯಾನಿಟೈಸ್ ಮಾಡಲಾಗುವುದು' ಎಂದರು.

ಒಂಬತ್ತನೇ ತರಗತಿಯಿಂದ ದ್ವಿತೀಯ ಪಿಯುವರೆಗಿನ ವಿದ್ಯಾರ್ಥಿಗಳಿಗೆ ವಾರದಲ್ಲಿ ಆರು ದಿನ ತರಗತಿ ನಡೆಸಲಾಗುತ್ತಿದೆ. ಆದರೆ, 6 ರಿಂದ ಎಂಟನೇ ತರಗತಿ ವಿದ್ಯಾರ್ಥಿಗಳಿಗೆ ಐದೇ ದಿನ ತರಗತಿಗಳನ್ನು ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಒಂದು ತಿಂಗಳ ಬಳಿಕ ಪರಿಸ್ಥಿತಿ ಅವಲೋಕಿಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಕಲ್ಯಾಣ ಮಂಟಪಕ್ಕೆ ಅನುಮತಿ: ಕಲ್ಯಾಣ ಮಂಟಪಗಳಲ್ಲಿ ಮದುವೆ ಮತ್ತಿತರ ಸಮಾರಂಭ ನಡೆಸಲು ಅನುಮತಿ ನೀಡಲಾಗಿದೆ. ಗರಿಷ್ಠ 400 ಜನರ ಮಿತಿಗೆ ಒಳಪಟ್ಟು, ಶೇಕಡ 50ರಷ್ಟು ಜನರಿಗೆ ಅವಕಾಶ ಕಲ್ಪಿಸಿ ಸಭೆ, ಸಮಾರಂಭಗಳನ್ನು ನಡೆಸಲು ಒಪ್ಪಿಗೆ ನೀಡಲಾಗುವುದು ಎಂದು ಪ್ರಕಟಿಸಿದರು.

ನಾಲ್ಕು ಜಿಲ್ಲೆಗಳಲ್ಲಿ ವಾರಾಂತ್ಯದ ಕರ್ಫ್ಯೂ: ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿ ಭಾಗದ ಎಲ್ಲ ಜಿಲ್ಲೆಗಳು ಮತ್ತು ಕೋವಿಡ್ ದೃಢಪ್ರಮಾಣ ದರ ಶೇ 2ಕ್ಕಿಂತ ಹೆಚ್ಚಿರುವ ಎಲ್ಲ ಜಿಲ್ಲೆಗಳಲ್ಲೂ ವಾರಾಂತ್ಯದ ಕರ್ಫ್ಯೂ ಇತ್ತು. ಇನ್ನು ಮುಂದೆ ದಕ್ಷಿಣ ಕನ್ನಡ, ಕೊಡಗು, ಹಾಸನ, ಉಡುಪಿ ಜಿಲ್ಲೆಗಳಲ್ಲಿ ಮಾತ್ರ ವಾರಾಂತ್ಯದ ಕರ್ಫ್ಯೂ ಜಾರಿಯಲ್ಲಿಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಉಡುಪಿ, ಚಿಕ್ಕಮಗಳೂರು, ಹಾಸನ, ಕೋಲಾರ, ಶಿವಮೊಗ್ಗ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಕೋವಿಡ್ ದೃಢ ಪ್ರಮಾಣ ದರ ಶೇ 1.5ಕ್ಕಿಂತ ಕೆಳಕ್ಕೆ ಇಳಿದಿದೆ. ಈ ಜಿಲ್ಲೆಗಳಲ್ಲಿ ಕೆಲವು ನಿರ್ಬಂಧಗಳನ್ನು ಸಡಿಲಿಸಲು ನಿರ್ಧರಿಸಲಾಗಿದೆ. ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ನಿರ್ಬಂಧಗಳು ಯಥಾಸ್ಥಿತಿಯಲ್ಲಿ ಮುಂದುವರಿಯಲಿವೆ ಎಂದರು.

14 ವಿದ್ಯಾರ್ಥಿಗಳಿಗಷ್ಟೇ ಕೋವಿಡ್: ಶಾಲೆ ಆರಂಭಿಸಲಾಗಿರುವ ಕಡೆಗಳಲ್ಲಿ ತರಗತಿಗೆ ಹಾಜರಾದ ವಿದ್ಯಾರ್ಥಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕೋವಿಡ್ ಸೋಂಕು ಹರಡಿಲ್ಲ. 6,472 ವಿದ್ಯಾರ್ಥಿಗಳ ಗಂಟಲು ಮತ್ತು ಮೂಗಿನ ದ್ರವದ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿತ್ತು. 14 ವಿದ್ಯಾರ್ಥಿಗಳಲ್ಲಿ ಮಾತ್ರ ಕೋವಿಡ್ ದೃಢಪಟ್ಟಿದೆ ಎಂದರು.

ಒಂಬತ್ತನೇತರಗತಿಯಿಂದದ್ವಿತೀಯ ಪಿಯುವರೆಗಿನ ಭೌತಿಕ ತರಗತಿಗಳಿಗೆ ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಖಾಸಗಿ ಶಾಲಾ, ಕಾಲೇಜುಗಳಲ್ಲಿ ಹಾಜರಾತಿ ಕಡಿಮೆ ಇದೆ. ಶುಕ್ರವಾರ ಒಟ್ಟು ಶೇ 64.12ರಷ್ಟು ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಿದ್ದರು ಎಂದರು.

ಗಣೇಶೋತ್ಸವ: ಸೆ.5ಕ್ಕೆ ನಿರ್ಧಾರ



ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ನೀಡಬೇಕೆಂಬ ಬೇಡಿಕೆ ಕುರಿತು ಸೆಪ್ಟೆಂಬರ್ 5ರಂದು ಮತ್ತೆ ಉನ್ನತಮಟ್ಟದ ಸಭೆ ನಡೆಸಿ, ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಚಿವ ಆರ್.ಅಶೋಕ ತಿಳಿಸಿದರು.

ಕೋವಿಡ್ ಮೂರನೇ ಅಲೆ ಬರುವ ಸಾಧ್ಯತೆ ಇದೆ ಎಂಬ ಮುನ್ನೆಚ್ಚರಿಕೆ ಇದೆ. ಈ ಕಾರಣದಿಂದ ಗಣೇಶೋತ್ಸವದ ವಿಚಾರದಲ್ಲಿ ಸರ್ಕಾರ ಎಚ್ಚರಿಕೆಯ ಹೆಜ್ಜೆಗಳನ್ನು ಇಡಬೇಕಿದೆ. ಈ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿದ್ದು, ಮತ್ತೆ ಸಭೆ ನಡೆಸಲು ತೀರ್ಮಾನಿಸಲಾಯಿತು ಎಂದರು.

ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ- ಧಾರವಾಡ, ಚಿತ್ರದುರ್ಗ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಬೃಹತ್ ಪ್ರಮಾಣದಲ್ಲಿ ಸಾರ್ವಜನಿಕ ಗಣೇಶೋತ್ಸವ ಆಚರಿಸಲಾಗುತ್ತದೆ. 30 ಸ್ಥಳಗಳಲ್ಲಿ 50,000 ಜನರು ಸೇರುತ್ತಿದ್ದರು. ಅವರೆಲ್ಲರೂ ನಿರ್ಬಂಧ ಸಡಿಲಿಸಬೇಕೆಂಬ ಬೇಡಿಕೆ ಇಟ್ಟಿದ್ದಾರೆ ಎಂದು ಹೇಳಿದರು. 'ಗಣೇಶೋತ್ಸವ ಆಚರಣೆ ಭಾವನಾತ್ಮಕ ವಿಚಾರ. ಈ ಕಾರಣದಿಂದ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ಗಣೇಶೋತ್ಸವ ಆಚರಿಸುವ ಸಂಘ, ಸಂಸ್ಥೆಗಳ ಪ್ರತಿನಿಧಿಗಳ ಜತೆ ಸಮಾಲೋಚನೆ ನಡೆಸಿ ವರದಿ ನೀಡಲು ಜಿಲ್ಲಾಧಿಕಾರಿಗಳು ಮತ್ತು ಎಸ್‌ಪಿಗಳಿಗೆ ಸೂಚಿಸಲಾಗಿದೆ. ವರದಿ ಪಡೆದ ಬಳಿಕ, ಕೋವಿಡ್ ಪರಿಸ್ಥಿತಿ ಆಧರಿಸಿ ಮತ್ತೊಮ್ಮೆ ಚರ್ಚೆ ನಡೆಸಲಾಗುವುದು' ಎಂದರು.

ಗಣೇಶೋತ್ಸವದ ವಿಚಾರದಲ್ಲಿ ಒಳ್ಳೆಯದಾಗಲಿದೆ. ಸಾರ್ವಜನಿಕರ ಹಿತದೃಷ್ಟಿಯನ್ನು ಗಮನದಲ್ಲಿ ಇರಿಸಿಕೊಂಡು ಎಷ್ಟು ನಿರ್ಬಂಧ ಸಡಿಲಿಸಲು ಸಾಧ್ಯ ಎಂಬುದನ್ನು ತೀರ್ಮಾನಿಸಲಾಗುವುದು. ಷರತ್ತುಬದ್ಧ ಅನುಮತಿ ನೀಡಲು ಚಿಂತನೆ ನಡೆದಿದೆ. ಸರ್ಕಾರ ಸಕಾರಾತ್ಮಕವಾಗಿ ಯೋಚಿಸುತ್ತಿದೆ ಎಂ ದರು.ಕೇರಳದಲ್ಲಿ ಓಣಂ ಆಚರಣೆಗೆ ಅವಕಾಶ ನೀಡಿದ್ದರಿಂದ ಕೋವಿಡ್ ಜಾಸ್ತಿಯಾಗಿದೆ ಎಂಬ ಅಭಿಪ್ರಾಯವಿದೆ. ಈ ಬಗ್ಗೆ ತಜ್ಞರು, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರ ಸಲಹೆ ಪಡೆಯಲಾಗುವುದು ಎಂದರು.

- ಕೇರಳದಿಂದ ಬರುವವರಿಗೆ ಒಂದು ವಾರ ಸಾಂಸ್ಥಿಕ ಕ್ವಾರಂಟೈನ್
- ರಾತ್ರಿ ಕರ್ಫ್ಯೂ ರಾತ್ರಿ 9ರಿಂದ ಬೆಳಿಗ್ಗೆ 5ರವರೆಗೆ ಯಥಾಸ್ಥಿತಿ
- 2,912 ಗ್ರಾ. ಪಂ.ಗಳ ವ್ಯಾಪ್ತಿಯಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಶೂನ್ಯ

ಪದಕಗಳ ಹೂಮಳೆ ಅವನಿ, ಸುಮಿತ್ ದಾಖಲೆ



ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಸೋಮವಾರ ಪದಕಗಳ ಹೂಮಳೆ. ತಲಾ ಎರಡು ಚಿನ್ನ ಮತ್ತು ಬೆಳ್ಳಿ, ಒಂದು ಕಂಚು ದೇಶದ ಕ್ರೀಡಾಪಟುಗಳು ಗೆದ್ದುಕೊಂಡರು. ವಿಶ್ವ ದಾಖಲೆ ಸಮಗಟ್ಟಿದ ಅವನಿ ಲೇಖರಾ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಮಹಿಳೆ ಎನಿಸಿಕೊಂಡರು. ಸುಮಿತ್ ಅಂಟಿಲ್ ತಮ್ಮದೇ ವಿಶ್ವ ದಾಖಲೆ ಮುರಿದರು. ದೇವೇಂದ್ರ ಜಜಾರಿಯ ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿದರು.

ಪದಕ ವಂಚಿತ ವಿನೋದ್: ವರ್ಗೀಕರಣಕ್ಕೆ ಸಂಬಂಧಿಸಿದ ವಿವಾದದಿಂದಾಗಿ ವಿನೋದ್ ಕುಮಾರ್ ಅವರಿಗೆ ಪದಕ ನೀಡದೇ ಇರಲು ನಿರ್ಧರಿಸಲಾಯಿತು. ಅವರು ಭಾನುವಾರ ಡಿಸ್ಕಸ್ ಥ್ರೋದಲ್ಲಿ ಕಂಚು ಗೆದ್ದಿದ್ದರು.

ಶೂಟಿಂಗ್

ವಿಭಾಗ ಎಸ್‌ಎಚ್–1	ಸ್ಕೋರು
ಅವನಿ ಲೇಖರಾ -ಚಿನ್ನ	249.6

ಡಿಸ್ಕಸ್ ಥ್ರೋ

ವಿಭಾಗ ಎಫ್–56	ದೂರ
ಯೋಗೇಶ್ ಕಥೂನಿಯ -ಬೆಳ್ಳಿ	44.38 ಮೀ

ದೇವೇಂದ್ರ ಜಜಾರಿಯ

ಜಾವೆಲಿನ್ ಥ್ರೋ

ವಿಭಾಗ ಎಫ್–46	ದೂರ
ದೇವೇಂದ್ರ ಜಜಾರಿಯ- ಬೆಳ್ಳಿ	64.35 ಮೀ
ಸುಂದರ್ ಸಿಂಗ್- ಕಂಚು	64.01 ಮೀ

ಜಾವೆಲಿನ್ ಥ್ರೋ

ವಿಭಾಗ ಎಫ್–64	ದೂರ
ಸುಮಿತ್ ಅಂಟಿಲ್ - ಚಿನ್ನ	68.55 ಮೀ

ಸುಂದರ್ ಸಿಂಗ್ ಗುರ್ಜರ್

ವಿವರ ಪುಟ 12

ಶೌಚಗುಂಡಿಯಲ್ಲಿ ಸಾವು: ಡಿ.ಸಿಗಳ ಖುದ್ದು ಹಾಜರಿಗೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರ ಮತ್ತು ಕಲಬುರ್ಗಿ ಜಿಲ್ಲೆಯಲ್ಲಿ ಶೌಚಗುಂಡಿಯಲ್ಲಿ ಉಸಿರುಗಟ್ಟಿ ಮೃತಪಟ್ಟ ಪ್ರಕರಣದ ವಿಚಾರಣೆ ವೇಳೆ ಎರಡೂ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಅಕ್ಟೋಬರ್ 4 ರಂದು ಖುದ್ದು ಹಾಜರಿರುವಂತೆ ಹೈಕೋರ್ಟ್ ಆದೇಶಿಸಿದೆ.

2021ರ ಜನವರಿಯಲ್ಲಿ ಕಲಬುರ್ಗಿ ಮತ್ತು ಜೂನ್‌ನಲ್ಲಿ ರಾಮನಗರದಲ್ಲಿ ಶೌಚಗುಂಡಿಯಲ್ಲಿ ಪೌರ ಕಾರ್ಮಿಕರು ಬಿದ್ದು ಮೃತಪಟ್ಟಿದ್ದರು. ಈ ಪ್ರಕರಣಗಳಲ್ಲಿ ಮಲಹೊರುವ ಪದ್ಧತಿ ನಿಷೇಧ ಮತ್ತು ಪುನರ್ವಸತಿ ಕಾಯ್ದೆ 2013ರ ಸೆಕ್ಷನ್ 13ರ ನಿಬಂಧನೆಗಳನ್ನು ಪಾಲನೆ ಮಾಡಿರುವ ಬಗ್ಗೆ ವಿವರ ಸಲ್ಲಿಸಲು ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ ತಿಳಿಸಿದೆ.



ಮೃತರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರ ಪಾವತಿಸಲಾಗಿದೆ ಎಂದು ಸರ್ಕಾರ ಮಾಹಿತಿ ನೀಡಿತು. 'ಸೆಕ್ಷನ್ 13ರ ಅಡಿಯಲ್ಲಿ ಸೂಚಿಸಿರುವಂತೆ ಪುನರ್ವಸತಿ ಯೋಜನೆಯಡಿ ಮೃತರ ಕುಟುಂಬಕ್ಕೆ ಮನೆ ನಿರ್ಮಾಣಕ್ಕೆ ನೆರವು, ಜೀವನೋಪಾಯಕ್ಕೆ ಕೌಶಲ ತರಬೇತಿ, ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಬೇಕಾಗುತ್ತದೆ. ₹10 ಲಕ್ಷ ಪರಿಹಾರ ನೀಡಿರುವುದನ್ನು ಬಿಟ್ಟರೆ ಸರ್ಕಾರ ಬೇರೆ ಏನನ್ನೂ ಮಾಡಿದಂತೆ ಕಾಣಿಸುತ್ತಿಲ್ಲ' ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿತು.

'ಪುನರ್ವಸತಿ ಸೌಕರ್ಯ ಕಲ್ಪಿಸುವುದು ಆಯಾ ಜಿಲ್ಲಾಧಿಕಾರಿಗಳ ಹೊಣೆ. ಮುಂದಿನ ವಿಚಾರಣೆ ವೇಳೆ ಅವರು ಹಾಜರಾಗಬೇಕು. ಒಂದು ವೇಳೆ ಅನುಸರಣಾ ಪತ್ರ ಸಲ್ಲಿಸಿದರೆ ಅವರ ಉಪಸ್ಥಿತಿಗೆ ವಿನಾಯಿತಿ ನೀಡಲಾಗುವುದು' ಎಂದು ಪೀಠ ಹೇಳಿತು.

'ಈ ಕಾಯ್ದೆಯ ಅನುಷ್ಠಾನ ಮತ್ತು ಅದರ ಬಗ್ಗೆ ಜಾಗೃತಿ ಮೂಡಿಸುವ ಜವಾಬ್ದಾರಿಯೂ ಜಿಲ್ಲಾಧಿಕಾರಿಗಳದ್ದೇ ಆಗಿದೆ. ಪೌರ ಕಾರ್ಮಿಕರಿಗೆ ಸುರಕ್ಷತಾ ಸಲಕರಣೆ ಒದಗಿಸಿರುವ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು ವಿವರ ಸಲ್ಲಿಸಬೇಕು. ಜಿಲ್ಲಾಧಿಕಾರಿಗಳು ನಿರ್ಲಕ್ಷ್ಯ ವಹಿಸಿದರೆ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಬೇಕಾಗುತ್ತದೆ' ಎಂದೂ ಪೀಠ ಎಚ್ಚರಿಕೆ ನೀಡಿತು.

ತಳಿ ರೂಪಾಂತರ, ಹರಡುವಿಕೆಯ ವೇಗ ಎರಡೂ ಹೆಚ್ಚು

ಲಸಿಕೆಗೆ ನಿಲುಕದ ಕೋವಿಡ್ ಹೊಸ ತಳಿ ಆಫ್ರಿಕಾದಲ್ಲಿ ಪತ್ತೆ

ನವದೆಹಲಿ (ಪಿಟಿಐ): ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿಯೊಂದು ದಕ್ಷಿಣ ಆಫ್ರಿಕಾ ಮತ್ತು ಹಲವು ದೇಶಗಳಲ್ಲಿ ಪತ್ತೆಯಾಗಿದೆ. ಈ ತಳಿಯು ಇತರ ತಳಿಗಳಿಗಿಂತ ಹೆಚ್ಚು ವೇಗದಲ್ಲಿ ಹರಡುವ ಸಾಮರ್ಥ್ಯ ಹೊಂದಿದೆ. ಜತೆಗೆ, ಈಗ ಇರುವ ಯಾವುದೇ ಲಸಿಕೆಯು ಈ ತಳಿಯ ವಿರುದ್ಧ ರಕ್ಷಣೆ ನೀಡದು ಎಂಬುದು ಕಳವಳಕಾರಿ ಎಂದು ದಕ್ಷಿಣ ಆಫ್ರಿಕಾದ ಅಧ್ಯಯನವೊಂದು ಹೇಳಿದೆ.

ಸಿ.1.2 ಎಂಬ ಹೆಸರಿನ ಈ ತಳಿಯು ಮೇ ತಿಂಗಳಿನಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಮೊದಲ ಬಾರಿಗೆ ಪತ್ತೆಯಾಗಿದೆ ಎಂದು ಸಾಂಕ್ರಾಮಿಕ ರೋಗಗಳ ರಾಷ್ಟ್ರೀಯ ಸಂಸ್ಥೆ (ಎನ್‌ಐಸಿಡಿ) ಮತ್ತು ಕುಝುಲು ನ್ಯಾಟಲ್ ರೀಸರ್ಚ್ ಇನ್ನೊವೇಶನ್ ಅಂಡ್ ಸೀಕ್ವೆನ್ಸ್ ಪ್ಲಾಟ್‌ಫಾರ್ಮ್ (ಕೆಆರ್‌ಐಎಸ್‌ಪಿ) ಹೇಳಿದೆ.

ಚೀನಾ, ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊ, ಮಾರಿಷಸ್, ಇಂಗ್ಲೆಂಡ್, ನ್ಯೂಜಿಲೆಂಡ್, ಪೋರ್ಚುಗಲ್ ಮತ್ತು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಸಿ.1.2 ತಳಿ ಕಂಡುಬಂದಿದೆ ಎಂದು ಅಧ್ಯಯನ ವರದಿ ಹೇಳಿದೆ. ಸಿ.1.2 ಅತಿ ಹೆಚ್ಚು ಬಾರಿ ರೂಪಾಂತರಗೊಂಡ ತಳಿಯಾಗಿದೆ.

ಈ ತಳಿಯ ರೂಪಾಂತರದ ವೇಗವೂ ಹೆಚ್ಚಾಗಿದ್ದು, ಒಂದು ವರ್ಷದಲ್ಲಿ 41ಕ್ಕೂ ಹೆಚ್ಚು ಬಾರಿ ರೂಪಾಂತರಗೊಂಡಿದೆ. ಇತರ ತಳಿಗಳ ರೂಪಾಂತರಕ್ಕೆ ಹೋಲಿಸಿದರೆ ಇದು ದುಪ್ಪಟ್ಟು. ವೈರಾಣುವಿನ ಸಂರಚನೆಯಲ್ಲಿ ಆಗುವ ಬದಲಾವಣೆಯಿಂದಾಗಿ ದೇಹದಲ್ಲಿ ರೂಪುಗೊಂಡಿರುವ ಪ್ರತಿಕಾಯಗಳ ರಕ್ಷಣೆಯು ವ್ಯಕ್ತಿಗೆ ದೊರೆಯುವುದಿಲ್ಲ ಎಂದು ಸಂಶೋಧಕರು ಹೇಳಿದ್ದಾರೆ.

ಯುರೋಪ್: ಸಾವಿನ ಸಂಖ್ಯೆ ಹೆಚ್ಚಳ ಭೀತಿ

ಕೋಪನ್‌ಹೇಗನ್: 'ಕೋವಿಡ್ ಪ್ರಕರಣಗಳ ಹೆಚ್ಚಳ ಹಾಗೂ ಲಸಿಕೆ ಅಭಿಯಾನದ ನಿಧಾನಗತಿಯಿಂದಾಗಿ ಯೂರೋಪ್‌ನಲ್ಲಿ ಡಿ. 1ರ ವೇಳೆಗೆ ಸುಮಾರು 2.36 ಲಕ್ಷ ಮಂದಿ ಸಾವಿಗೀಡಾಗುವ ಸಾಧ್ಯತೆ ಇದೆ' ಎಂದು ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಸೋಮವಾರ ಎಚ್ಚರಿಕೆ ನೀಡಿದೆ.

'ಡೆಲ್ಟಾ ರೂಪಾಂತರ ವೈರಾಣು ಸೋಂಕು ಪ್ರಕರಣಗಳು ಹೆಚ್ಚಾಗಿದ್ದು, ಯುರೋಪಿನ ಅನೇಕ ಪ್ರದೇಶಗಳಲ್ಲಿ ಲಸಿಕೆ ಅಭಿಯಾನವು ವಿಳಂಬವಾಗುತ್ತಿದೆ. ಕಳೆದ ವಾರವೊಂದರಲ್ಲೇ ಯುರೋಪಿನಲ್ಲಿ ಕೋವಿಡ್ ಸಾವಿನ ಸಂಖ್ಯೆಯಲ್ಲಿ ಶೇ 11ರಷ್ಟು ಏರಿಕೆಯಾಗಿದೆ' ಎಂದು ಡಬ್ಲ್ಯುಎಚ್‌ಒ ನಿರ್ದೇಶಕ (ಯುರೋಪ್) ಹ್ಯಾನ್ಸ್ ಕ್ಲುಗೆ ಅಭಿಪ್ರಾಯಪಟ್ಟಿದ್ದಾರೆ.

'ಬಡರಾಷ್ಟ್ರಗಳಲ್ಲಿ, ವಿಶೇಷವಾಗಿ ಮಧ್ಯ ಏಷ್ಯಾದ ರಾಷ್ಟ್ರಗಳಲ್ಲಿ ಸೋಂಕಿನ ಪ್ರಮಾಣದ ಜತೆಗೆ ಸಾವಿನ ಸಂಖ್ಯೆಯೂ ಹೆಚ್ಚಿದೆ. ಯುರೋಪಿನಾದ್ಯಂತ ಇದುವರೆಗೆ 10 ಲಕ್ಷಕ್ಕೂ ಹೆಚ್ಚು ಮಂದಿ ಕೋವಿಡ್‌ನಿಂದ ಸಾವಿಗೀಡಾಗಿದ್ದಾರೆ. ಯುರೋಪ್‌ನ 53 ಸದಸ್ಯ ರಾಷ್ಟ್ರಗಳ ಪೈಕಿ 33 ರಾಷ್ಟ್ರಗಳಲ್ಲಿ ಎರಡು ವಾರದ ಅವಧಿಯಲ್ಲಿ ಕೋವಿಡ್ ಪ್ರಕರಣಗಳು ಶೇ 10ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ದಾಖಲಾಗಿವೆ' ಎಂದೂ ಅವರು ಮಾಹಿತಿ ನೀಡಿದರು.

'ಯುರೋಪಿನ ಅರ್ಧದಷ್ಟು ಭಾಗದ ಜನರು ಸಂಪೂರ್ಣ ಲಸಿಕೆ ಹಾಕಿಸಿಕೊಂಡಿದ್ದಾರೆ. ಆದರೂ ಈ ಪ್ರದೇಶಗಳಲ್ಲಿ ಲಸಿಕಾ ಕಾರ್ಯ ನಿಧಾನವಾಗಿದೆ. ಕಳೆದ 6 ವಾರಗಳಲ್ಲಿ ಕೆಲ ದೇಶಗಳಲ್ಲಿ ಲಸಿಕೆಯ ಕೊರತೆಯೂ ಎದುರಾಗಿದೆ. ಹಾಗಾಗಿ, ಲಸಿಕೆಯ ತಯಾರಿ ಪ್ರಮಾಣ ಹೆಚ್ಚಿಸಬೇಕು' ಎಂದು ಕ್ಲುಗೆ ಒತ್ತಾಯಿಸಿದರು.

ಸ್ಫೋಟ ಪ್ರಕರಣ: ಆರೋಪಪಟ್ಟಿ ಸಲ್ಲಿಸದ್ದಕ್ಕೆ 'ಸುಪ್ರೀಂ' ಕಿಡಿ

ನವದೆಹಲಿ(ಪಿಟಿಐ): 1993ರ ರಾಜಧಾನಿ ಎಕ್ಸ್‌ಪ್ರೆಸ್ ಮತ್ತು ಇತರ ಸರಣಿ ಸ್ಫೋಟ ಪ್ರಕರಣಗಳಿಗೆ ಸಂಬಂಧಿಸಿದಂತೆ 11 ವರ್ಷಗಳಿಂದ ಜೈಲಿನಲ್ಲಿರುವ ಆರೋಪಿ ವಿರುದ್ಧ ಆರೋಪಪಟ್ಟಿ ಸಲ್ಲಿಸದಿರುವುದಕ್ಕೆ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

'ಆರೋಪಿಯು ತಪ್ಪಿತಸ್ಥ ಅಥವಾ ದೋಷಮುಕ್ತ' ಎನ್ನುವ ಅಭಿಪ್ರಾಯ ಕೈಗೊಳ್ಳಿ ಎಂದು ಸೂಚಿಸಿದೆ.ತ್ವರಿತ ವಿಚಾರಣೆಗೆ ಆದ್ಯತೆ ನೀಡಬೇಕು ಎಂದು ಹೇಳಿರುವ ನ್ಯಾಯಾಲಯವು, ಆರೋಪಿ ಹಮೀರ್ ಉಯಿ ಉದ್ದಿನ್ ವಿರುದ್ಧ ಏಕೆ ಆರೋಪ ಪಟ್ಟಿ ಸಲ್ಲಿಸಿಲ್ಲ ಎನ್ನುವ ಬಗ್ಗೆ ಎರಡು ವಾರಗಳಲ್ಲಿ ವರದಿ ನೀಡುವಂತೆ ರಾಜಸ್ಥಾನದ ಅಜ್ಮೇರ್‌ನ ಟಾಡಾ ನ್ಯಾಯಾಲಯದ ನ್ಯಾಯಾಧೀಶರಿಗೆ ಸೂಚಿಸಿದೆ. ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಶಾ ಅವರನ್ನೊಳಗೊಂಡ ಪೀಠ ಈ ಸೂಚನೆ ನೀಡಿದೆ.

ವಿಚಾರಣೆಯ ಸಂದರ್ಭದಲ್ಲಿ ಆರೋಪಿ ಹಮೀರ್ ಉಯಿ ಉದ್ದಿನ್ ಪರ ಹಾಜರಾದ ವಕೀಲ ಶೋಯೆಬ್ ಆಲಂ, 'ಅರ್ಜಿದಾರರು 2010ರಿಂದ ಬಂಧನದಲ್ಲಿದ್ದಾರೆ' ಎಂದರು.

5ನೇ ಪುಟ ನೋಡಿ



ಕೃಷ್ಣಾಷ್ಟಮಿ ಧಾರವಾಡದ ಜೆಎಸ್‌ಎಸ್ ಶ್ರೀ ಮಂಜುನಾಥೇಶ್ವರ ಸಿಬಿಎಸ್‌ಇ ಶಾಲೆಯಲ್ಲಿ ಚಿಣ್ಣರು ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ರಾಧಾ– ಕೃಷ್ಣರ ದಿರಿಸಿನಲ್ಲಿ ಸೋಮವಾರ ಸಂಭ್ರಮಿಸಿದರು

ಪ್ರಜಾವಾಣಿ ಚಿತ್ರ: ಬಿ.ಎಂ. ಕೇದಾರನಾಥ

ಮಾಹಿತಿ ಆಯುಕ್ತರ ಹುದ್ದೆ ಭರ್ತಿ: 'ಸುಪ್ರೀಂ' ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಹಿತಿ ಆಯೋಗದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದ ಕರ್ನಾಟಕವು ಸೇರಿದಂತೆ ಹಲವು ರಾಜ್ಯಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಎಚ್ಚರಿಕೆ ನೀಡಿದೆ.

ಎರಡು ವರ್ಷಗಳ ಹಿಂದೆಯೇ ಸೂಚನೆ ನೀಡಿದರೂ ಮಾಹಿತಿ ಆಯುಕ್ತರನ್ನು ನೇಮಕ ಮಾಡಲು ರಾಜ್ಯಗಳು ವಿಫಲವಾಗಿರುವುದಕ್ಕೆ ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್ ಮತ್ತು ಕೃಷ್ಣ ಮುರಾರಿ ಅವರನ್ನೊಳಗೊಂಡ ಪೀಠ ಅಸಮಾಧಾನ ವ್ಯಕ್ತಪಡಿಸಿತು.

ಅಂಜಲಿ ಭಾರದ್ವಾಜ್ ಪ್ರಕರಣದಲ್ಲಿ 2019ರ ಫೆಬ್ರುವರಿ 15ರಂದು ನೀಡಿದ ತೀರ್ಪನ್ನು ಪಾಲಿಸದಿದ್ದಲ್ಲಿ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದು ರಾಜ್ಯಗಳಿಗೆ ಎಚ್ಚರಿಕೆಯನ್ನೂ ನೀಡಿತು. ಎಲ್ಲಾ ರಾಜ್ಯಗಳು ಬಾಕಿ ಪ್ರಕರಣಗಳು ಸೇರಿದಂತೆ ವಸ್ತುಸ್ಥಿತಿ ವರದಿಯನ್ನು ನಾಲ್ಕು ವಾರಗಳಲ್ಲಿ ಸಲ್ಲಿಸಬೇಕು ಎಂದು ಪೀಠ ಗಡುವು ನೀಡಿತು.

5ನೇ ಪುಟ ನೋಡಿ

ಒಳ ಪುಟ

'ಎಸ್‌ಸಿ, ಎಸ್‌ಟಿ ದೌರ್ಜನ್ಯ: ಪ್ರತಿ ತಿಂಗಳು ಪರಿಶೀಲನೆ' 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ತೆರವು ಕಾರ್ಯಾಚರಣೆ ಅಂತ್ಯದ ಹೊತ್ತಿಗೆ ಪ್ರತೀಕಾರ ತೀವ್ರ

ಕಾಬೂಲ್ ಮೇಲೆ ರಾಕೆಟ್ ದಾಳಿ

ಕಾಬೂಲ್ (ರಾಯಿಟರ್ಸ್): ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಹಾರಿಸಲಾದ ಐದು ರಾಕೆಟ್‌ಗಳನ್ನು ಅಮೆರಿಕದ ಕ್ಷಿಪಣಿ ತಡೆ ವ್ಯವಸ್ಥೆಯು ಹೊಡೆದು ಹಾಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಮೆರಿಕವು ಅಫ್ಗಾನಿಸ್ತಾನದಲ್ಲಿ ನಡೆಸಿದ ಅತ್ಯಂತ ದೀರ್ಘ ಯುದ್ಧದ ಕೊನೆಯ ಹಂತದಲ್ಲಿ ಇದು ನಡೆದಿದೆ. ಅಫ್ಗಾನಿಸ್ತಾನದಿಂದ ಅಮೆರಿಕದ ತೆರವು ಕಾರ್ಯಾಚರಣೆಯು ಮಂಗಳವಾರ ಪೂರ್ಣಗೊಳ್ಳಲಿದೆ.

ವಾಹನವೊಂದರಿಂದ ರಾಕೆಟ್‌ಗಳನ್ನು ಹಾರಿಸಲಾಗಿದೆ. ರಾಜಧಾನಿ ಕಾಬೂಲ್‌ನ ವಿವಿಧ ಭಾಗಗಳ ಮೇಲೆ ರಾಕೆಟ್‌ಗಳು ಬಿದ್ದಿವೆ ಎಂದು ಸುದ್ದಿ ಸಂಸ್ಥೆ ಪಜ್‌ವೊಕ್ ಹೇಳಿದೆ.

ಇಸ್ಲಾಮಿಕ್ ಸ್ಟೇಟ್ ಉಗ್ರರು ವಿಮಾನ ನಿಲ್ದಾಣದ ಮೇಲೆ ಗುರುವಾರ ನಡೆಸಿದ ದಾಳಿಯಲ್ಲಿ 180ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು. ಅವರಲ್ಲಿ ಅಮೆರಿಕದ 13 ಯೋಧರು ಇದ್ದರು. ದಾಳಿ ನಡೆಸುವ ಯತ್ನವೊಂದು ಭಾನುವಾರವೂ ನಡೆದಿತ್ತು.

ಸೋಮವಾರದ ದಾಳಿಯಿಂದ ಸಾವು ನೋವು ಆಗಿದೆಯೇ ಎಂಬ ಬಗ್ಗೆ ಯಾವುದೇ ಮಾಹಿತಿ ದೊರೆತಿಲ್ಲ. ನಾಗರಿಕರು ದಾಳಿಯಲ್ಲಿ ಬಲಿಯಾಗಿದ್ದಾರೆಯೇ ಎಂಬ ಬಗ್ಗೆ ಅಮೆರಿಕದ ಸಿಬ್ಬಂದಿ ತನಿಖೆ ನಡೆಸುತ್ತಿದ್ದಾರೆ.

ತೆರವು ಕಾರ್ಯಾಚರಣೆಯು ಅಂತಿಮಹಂತದಲ್ಲಿದ್ದು, 1,22,000 ಮಂದಿಯನ್ನು ತೆರವು ಮಾಡಲಾಗಿದೆ. ಇದರಲ್ಲಿ ವಿದೇಶಿಯರು ಮತ್ತು ಅಫ್ಗಾನಿಸ್ತಾನದಲ್ಲಿ ಮುಂದೆ ಅಪಾಯಕ್ಕೆ ಒಳಗಾಗುವ ಸಾಧ್ಯತೆ ಇದ್ದವರು ಸೇರಿದ್ದಾರೆ.

ಅಫ್ಗಾನಿಸ್ತಾನದಲ್ಲಿರುವ ಅಮೆರಿಕದ ಸಿಬ್ಬಂದಿಯ ರಕ್ಷಣೆಗೆ ಅಗತ್ಯ ಇರುವ ಎಲ್ಲವನ್ನೂ ಮಾಡುವಂತೆ ಅಧ್ಯಕ್ಷ ಜೋ ಬೈಡನ್ ಅವರು ಕಮಾಂಡರ್‌ಗಳಿಗೆ ಸೂಚಿಸಿದ್ದಾರೆ. ತೆರವು ಕಾರ್ಯಾಚರಣೆಯು ಯಾವುದೇ ಅಡ್ಡಿ ಇಲ್ಲದೆ ಮುಂದುವರಿದಿದೆ ಎಂಬುದರ ಜತೆಗೆ ಸೋಮವಾರದ ರಾಕೆಟ್ ದಾಳಿ ಮಾಹಿತಿಯನ್ನೂ ಬೈಡನ್ ಅವರಿಗೆ ನೀಡಲಾಗಿದೆ.

ತೆರವು ಕಾರ್ಯಾಚರಣೆ ಕೊನೆಯ ಹಂತಕ್ಕೆ ಬಂದಿರುವ ಈ ಹೊತ್ತಿನಲ್ಲಿ ಕಾಬೂಲ್ ವಿಮಾನ ನಿಲ್ದಾಣವು ಮತ್ತೆ ದಾಳಿಗೆ ಒಳಗಾಗುವ ಅಪಾಯ ಇದೆ. ಇಂತಹ ದಾಳಿಯ ಬಗ್ಗೆ ನಿರ್ದಿಷ್ಟ ಮಾಹಿತಿ ಇದೆ ಎಂದು ಪೆಂಟಗನ್‌ನ ವಕ್ತಾರ ಜಾನ್ ಕಿರ್ಬಿ ಸೋಮವಾರ ಹೇಳಿದ್ದಾರೆ.

ಹೊಣೆ ಹೊತ್ತ ಐಎಸ್

ರಾಕೆಟ್ ದಾಳಿಯ ಹೊಣೆಯನ್ನು ಇಸ್ಲಾಮಿಕ್ ಸ್ಟೇಟ್–ಖೊರಾಸನ್ (ಐಎಸ್–ಕೆ) ಗುಂಪು ಹೊತ್ತುಕೊಂಡಿದೆ. ಗುರುವಾರದ ದಾಳಿಯ ಹೊಣೆಯನ್ನೂ ಇದೇ ಸಂಘಟನೆ ವಹಿಸಿಕೊಂಡಿತ್ತು.

ಐಎಸ್–ಕೆ ಮತ್ತು ತಾಲಿಬಾನ್ ನಡುವೆ ದ್ವೇಷ ಇದೆ. ಈಗ ಅಫ್ಗಾನಿಸ್ತಾನದ ಸಂಪೂರ್ಣ ನಿಯಂತ್ರಣ ತಾಲಿಬಾನ್ ಕೈಯಲ್ಲಿ ಇರುವುದರಿಂದ ದೇಶಕ್ಕೆ ಐಎಸ್–ಕೆಯ ಅಪಾಯ ಎದುರಾಗಿದೆ.

ಮಂಗಳವಾರದ ಗಡುವಿನ ಕಾರಣ ಬಿರುಸಿನಿಂದ ನಡೆಯುತ್ತಿರುವ ತೆರವು ಕಾರ್ಯಾಚರಣೆಗೂ ಐಎಸ್–ಕೆ ಬಹುದೊಡ್ಡ ಅಡಚಣೆಯಾಗಿದೆ.

ಮುಖ್ಯಾಂಶಗಳು

- ವಿಮಾನ ನಿಲ್ದಾಣ ಮತ್ತೆ ದಾಳಿಗೆ ಒಳಗಾಗುವ ಅಪಾಯ: ಪೆಂಟಗನ್
- ತೆರವು ಕಾರ್ಯಾಚರಣೆ ಮಂಗಳವಾರ ಕೊನೆ

ಅಂಕಿ-ಅಂಶ

1,22,000 ಅಫ್ಗಾನಿಸ್ತಾನದಿಂದ ಈವರೆಗೆ ತೆರವು ಮಾಡಲಾದ ಜನರು

5,400 ತೆರವು ಮಾಡಲಾದ ಅಮೆರಿಕದ ಪ್ರಜೆಗಳು

ಇನ್ನಷ್ಟು ಸುದ್ದಿಗಳು 11

ಪಠ್ಯಪುಸ್ತಕ ವಿತರಣೆಗೆ ಸಮಯ ಕೇಳಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ಪೂರೈಸಲು ಸಮಯಾವಕಾಶ ಬೇಕು ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ. ಶೇ 54.7ರಷ್ಟು ವಿದ್ಯಾರ್ಥಿಗಳಿಗೆ ಈಗಾಗಲೇ ಪುಸ್ತಕ ವಿತರಿಸಲಾಗಿದೆ, ಉಳಿದ ಪುಸ್ತಕಗಳ ಮುದ್ರಣ ಕಾರ್ಯ ಪ್ರಗತಿಯಲ್ಲಿದೆ ಎಂದು ವಿವರಿಸಿದೆ.

ಶೇ 70.8ರಷ್ಟು ಪಠ್ಯ ಪುಸ್ತಕ ಈಗಾಗಲೇ ವಿತರಣೆಯಾಗಿದೆ. ಬಾಕಿ ಪುಸ್ತಕಗಳ ಮುದ್ರಣಕ್ಕೆ 20 ದಿನಗಳ ಕಾಲಾವಕಾಶ ಬೇಕಾಗಲಿದೆ ಎಂದು ಮುಖ್ಯ ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ ಅವರಿದ್ದ ವಿಭಾಗೀಯ ಪೀಠಕ್ಕೆ ಸರ್ಕಾರದ ವಕೀಲರು ವಿವರ ಸಲ್ಲಿಸಿದರು. ವಿಚಾರಣೆಯನ್ನು ಪೀಠ ಮುಂದೂಡಿತು.

ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಬಡ ಕುಟುಂಬಗಳ ಮಕ್ಕಳಿಗೆ ಆನ್‌ಲೈನ್ ಶಿಕ್ಷಣ ನೀಡಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸುತ್ತಿರುವ ಪೀಠ, ಪಠ್ಯಪುಸ್ತಕ ಪೂರೈಕೆಯಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ಈಹಿಂದಿನ ವಿಚಾರಣೆ ವೇಳೆ ಗಮನಸೆಳೆದಿತ್ತು.

9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಕೂಡಲೇ ಪುಸ್ತಕ ವಿತರಿಸಬೇಕು ಎಂದು ಸೂಚಿಸಿತ್ತು.

ಮೈಸೂರು: ವಿವಿಧ ರಾಜ್ಯಗಳಲ್ಲಿ ಅಡಗಿರುವ ದರೋಡೆ ಆರೋಪಿಗಳು

ಪಾಕ್ ಗಡಿಯಲ್ಲಿ ಅಡಗಿದ್ದ ಆರೋಪಿಗಳು!

• ಕೆ.ಎಸ್.ಗಿರೀಶ

ಮೈಸೂರು: ನಗರದಲ್ಲಿ ಚಿನ್ನದಂಗಡಿಯಲ್ಲಿ ಇತ್ತೀಚೆಗೆ ನಡೆದ ದರೋಡೆ ಹಾಗೂ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಇಬ್ಬರು ಆರೋಪಿಗಳನ್ನು ಪಾಕಿಸ್ತಾನದ ಗಡಿಯಲ್ಲಿ ವಿಶೇಷ ತನಿಖಾ ತಂಡದ ಪೊಲೀಸರು ಬಂಧಿಸಿದ್ದಾರೆ.

ಪಾಕಿಸ್ತಾನ ಗಡಿಗೆ 60 ಕಿ.ಮೀ ದೂರದಲ್ಲಿ, ರಾಜಸ್ಥಾನದ ಗ್ರಾಮವೊಂದರಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ ವಿಜಯಸೇನ್ ಎಂಬಾತನನ್ನು ಈಗಾಗಲೇ ಕರೆ ತರಲಾಗಿದೆ. ಪಾಕಿಸ್ತಾನ ಗಡಿಗೆ 10 ಕಿ.ಮೀ ದೂರದಲ್ಲಿ, ಜಮ್ಮು ಕಾಶ್ಮೀರದ ರಜೌರಿ ಜಿಲ್ಲೆಯ ಗ್ರಾಮವೊಂದರಲ್ಲಿದ್ದ ಆರೋಪಿ ಮಂಜೂರ್‌ನನ್ನು ಬಂಧಿಸಿ ಕರೆತರಲಾಗುತ್ತಿದೆ. ಮಂಜೂರ್ ಇದ್ದ ಸ್ಥಳವನ್ನು ಮೊಬೈಲ್ ಲೊಕೇಶನ್ ಆಧಾರದಲ್ಲಿ ಪೊಲೀಸರು ಗುರುತಿಸಿದ್ದರು.

ಬೆಂಗಳೂರಿನ ಇನ್‌ಸ್ಪೆಕ್ಟರ್ ನವೀನ್ ಹಾಗೂ ಮೈಸೂರಿನ ವಿದ್ಯಾರಣ್ಯಪುರಂ ಠಾಣೆಯ ಇನ್‌ಸ್ಪೆಕ್ಟರ್ ರಾಜು ಹಾಗೂ ಕೆ.ಆರ್ ಠಾಣೆಯ ಪಿಎಸ್‌ಐ ಮಹಾವೀರ್ ಕಾರ್ಯಾಚರಣೆ ನಡೆಸಿದ್ದರು.

'ಅದು ನಮ್ಮ ಜೀವನದ ಅತಿ ಕಠಿಣವಾದ ಕಾರ್ಯಾಚರಣೆ. ಕೇಂದ್ರೀಯ ಮೀಸಲು ಪಡೆಯ 4 ತುಕಡಿಗಳ ಭದ್ರತೆಯ ನಡುವೆಯೇ ಪ್ರತಿ ಠಾಣೆಯೂ ಕಾರ್ಯನಿರ್ವಹಿಸುತ್ತಿರುವ ಸೂಕ್ಷ್ಮ ಪ್ರದೇಶದಲ್ಲಿ ಗಡಿಭದ್ರತಾ ಪಡೆ, ಸ್ಥಳೀಯ ಪೊಲೀಸರು ಸಂಪೂರ್ಣ ಸಹಕರಿಸಿದರು' ಎಂದು ತಂಡದಲ್ಲಿದ್ದ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ವಿದ್ಯಾರಣ್ಯಪುರಂನ ಅಮೃತ್ ಗೋಲ್ಡ್ ಅಂಡ್ ಸಿಲ್ವರ್ ಪ್ಯಾಲೇಸ್ ಅಂಗಡಿ ದರೋಡೆ ಮಾಡಿ, ಗ್ರಾಹಕರೊಬ್ಬರನ್ನು ಗುಂಡಿಕ್ಕಿ ಕೊಂದ ನಂತರ ಆರೋಪಿಗಳು ಚದುರಿ ಮುಂಬೈ ತಲುಪಿದ್ದರು. ನಂತರ ಒಡವೆಗಳನ್ನು ಹಂಚಿಕೊಂಡು ವಿವಿಧ ರಾಜ್ಯಗಳಿಗೆ ಪರಾರಿಯಾಗಿದ್ದರು.

ಇಬ್ಬರು ಮಹಾರಾಷ್ಟ್ರದಲ್ಲೇ ಉಳಿದರೆ, ಮತ್ತೊಬ್ಬ ಪಶ್ಚಿಮ ಬಂಗಾಳಕ್ಕೆ ಪರಾರಿಯಾಗಿದ್ದ. ರಾಜಸ್ಥಾನಕ್ಕೆ ಇಬ್ಬರು ಹಾಗೂ ಜಮ್ಮು- ಕಾಶ್ಮೀರಕ್ಕೆ ಒಬ್ಬ ಆರೋಪಿ ಪರಾರಿಯಾಗಿದ್ದಾರೆಂಬ ಮಾಹಿತಿ ಆಧರಿಸಿ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು. ನಗರದ ಪೊಲೀಸರೊಂದಿಗೆ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಹಾಗೂ ಬೆಂಗಳೂರಿನ 120 ಪೊಲೀಸರನ್ನು ಒಳಗೊಂಡ ಒಟ್ಟು ಏಳು ತಂಡಗಳನ್ನು ರಚಿಸಲಾಗಿತ್ತು.

ಪಶ್ಚಿಮ ಬಂಗಾಳದಿಂದ ಒಬ್ಬ, ಮಹಾರಾಷ್ಟ್ರದಿಂದ ಇಬ್ಬರು ಆರೋಪಿಗಳನ್ನು ಈಗಾಗಲೇ ಬಂಧಿಸಿ ಕರೆತರಲಾಗಿದೆ. ಮೈಸೂರಿನಲ್ಲಿ ಅವರಿಗೆ ಸಹಕಾರ ನೀಡಿದ್ದ ಆರೋಪಿಯನ್ನೂ ಬಂಧಿಸಲಾಗಿದೆ.

ಮುಖ್ಯಾಂಶಗಳು

- ಕ್ಲಿಷ್ಟ ಕಾರ್ಯಾಚರಣೆಯಲ್ಲಿ ಪೊಲೀಸರು ಯಶಸ್ಸು
- ರಜೌರಿ ಜಿಲ್ಲೆಯಲ್ಲಿ ಪೊಲೀಸ್ ಠಾಣೆಗೂ 4 ಸಿಆರ್‌ಪಿಎಫ್ ತುಕಡಿ ರಕ್ಷಣೆ
- ನಗರ ತಲುಪಿದ ಪೊಲೀಸ್ ತಂಡ

ಪ್ರಜಾವಾಣಿ ವಿಶೇಷ

ನಗರದಲ್ಲಿ ಇಂದು

'ಕನ್ನಡಕ್ಕೆ ಎಂ.ಆರ್.ಶ್ರೀನಿವಾಸ ಮೂರ್ತಿಯವರ ಕೊಡುಗೆ' ವಿಷಯದ ಕುರಿತ ಉಪನ್ಯಾಸ: ಉಪನ್ಯಾಸ ನೀಡುವವರು- ವಿಜಯ ಪದವಿಪೂರ್ವ ಕಾಲೇಜಿನ ಪ್ರಾಧ್ಯಾಪಕ ಎಸ್.ಎಲ್. ಶ್ರೀನಿವಾಸಮೂರ್ತಿ, ಆಯೋಜನೆ-ಬಿ.ಎಂ. ಶ್ರೀ ಪ್ರತಿಷ್ಠಾನ, ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ, ಆನ್‌ಲೈನ್ ಕಾರ್ಯಕ್ರಮ-ಸಂಜೆ 4.30.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಅನ್ವಯ ಪದವಿ ವಿದ್ಯಾರ್ಥಿಗಳಿಗೆ ಪಠ್ಯಕ್ರಮ ರಚನೆ' ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ: ಭಾಗವಹಿಸುವವರು- ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್, ಆಯೋಜನೆ-ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ-ಭೂಗೋಳಶಾಸ್ತ್ರ ವಿಭಾಗದ ಸಭಾಂಗಣ, ಜ್ಞಾನಭಾರತಿ-ಬೆಳಿಗ್ಗೆ 10.30.

ಎನ್‌ಎಸ್‌ಯುಐ ರಾಜ್ಯ ಸಮಿತಿಯ ನೂತನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭ: ಭಾಗವಹಿಸುವವರು- ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಬಿ.ವಿ.ಶ್ರೀನಿವಾಸ್, ನೀರಜ್ ಕುಂದನ್‌ಎರಿಕ್ ಸ್ಟೀಫನ್, ಸ್ಥಳ-ಕಾಂಗ್ರೆಸ್ ಭವನ, ರೇಸ್‌ಕೋರ್ಸ್ ರಸ್ತೆ-ಬೆಳಿಗ್ಗೆ 11.30.

ಹಿರಿಯ ಲೇಖಕಿಯರ ಸಾಹಿತ್ಯ ಮಂಥನ ಹಾಗೂ ಆರ್ಯಾಂಬ ಪಟ್ಟಾಭಿ ಅವರ ಕೃತಿಗಳ ವಿಚಾರ ಸಂಕಿರಣ: ಉಪಸ್ಥಿತಿ- ಲೇಖಕಿ ಆರ್ಯಾಂಬ ಪಟ್ಟಾಭಿ, ಪ್ರಬಂಧ ಮಂಡನೆ-ಲೇಖಕಿ ಎಚ್.ಪಿ.ಗೀತಾ, ಚಿಂತಕಿ ಎಚ್.ಎಂ.ಕಲಾಶ್ರೀ, ಅಧ್ಯಕ್ಷತೆ-- ವನಮಾಲಾ ಸಂಪನ್ನಕುಮಾರ್, ಆನ್‌ಲೈನ್ ಕಾರ್ಯಕ್ರಮ-ಸಂಜೆ 5.

'ಹೊರಳು ಹಾದಿಯಲ್ಲಿ ಪತ್ರಿಕೋದ್ಯಮ' ಕುರಿತ ವೆಬಿನಾರ್: ಸಂಪನ್ಮೂಲ ವ್ಯಕ್ತಿ-ಪತ್ರಕರ್ತ ಎಂ.ಕೆ.ಭಾಸ್ಕರ್ ರಾವ್, ಆಯೋಜನೆ-ಜಯನಗರ ನ್ಯಾಷನಲ್ ಕಾಲೇಜಿನ ಪತ್ರಿಕೋದ್ಯಮ ವಿಭಾಗ-ಮಧ್ಯಾಹ್ನ 2.

ರಾಧಾ–ಕೃಷ್ಣರ ಮೂರ್ತಿಗಳಿಗೆ ವಿಶೇಷ ಅಲಂಕಾರ: ಉಯ್ಯಾಲೆ ಸೇವೆ

ಭಕ್ತಿಯಿಂದ ಶ್ರೀಕೃಷ್ಣನ ಆರಾಧನೆ



ಗಿರಿನಗರದಲ್ಲಿರುವ ಶ್ರೀ ರಾಮಚಂದ್ರಾಪುರಮಠದಲ್ಲಿ ಸೋಮವಾರ ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಪುಟಾಣಿಗಳು ರಾಧಾಕೃಷ್ಣ ವೇಷದಲ್ಲಿ ಕಂಗೊಳಿಸಿದರು



ಇಸ್ಕಾನ್‌ನಲ್ಲಿ ರಾಧಾ ಕೃಷ್ಣರ ಮೂರ್ತಿಗಳಿಗೆ ಸ್ವಾಮಿ ಸಂಪತಿ ದಾಸ ಮತ್ತು ಬಿಂದು ದಾಸ ಅವರು ಅಭಿಷೇಕ ನೆರವೇರಿಸಿದರು–ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಾದ್ಯಂತ ಶ್ರೀಕೃಷ್ಣನ ಜನ್ಮಾಷ್ಟಮಿಯನ್ನು ಸಡಗರದಿಂದ ಸೋಮವಾರ ಆಚರಿಸಲಾಯಿತು. ಭಾನುವಾರದಿಂದಲೇ ಆರಂಭವಾಗಿದ್ದ ಉತ್ಸವವು ಎರಡನೇ ದಿನವೂ ಮುಂದುವರಿಯಿತು.

ದೇವಾಲಯಗಳಲ್ಲಿ ಶ್ರೀಕೃಷ್ಣ-ರಾಧೆ, ಕೃಷ್ಣ-ಬಲರಾಮರ ಮೂರ್ತಿಗಳಿಗೆ ಪುಷ್ಪಾಲಂಕಾರ ಮಾಡಿ, ವಿಶೇಷ ಪೂಜೆ ಮಾಡಲಾಯಿತು. ಕೆಲವರು ಮನೆಗಳಲ್ಲಿ ಶ್ರೀಕೃಷ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಿ, ವಿಶೇಷ ಪೂಜೆ ಮಾಡಿ ನೈವೇದ್ಯ ಅರ್ಪಿಸಿದರು.

ಇಸ್ಕಾನ್‌ನಲ್ಲಿ ವೈಭವ: ನಗರದ ಇಸ್ಕಾನ್‌ನ ಹರೇಕೃಷ್ಣ ಗಿರಿಯಲ್ಲಿ ಕೃಷ್ಣ ಜನ್ಮಾಷ್ಟಮಿಯನ್ನು ವೈಭವದಿಂದ ಆಚರಿಸಲಾಯಿತು. ರಾಧಾಕೃಷ್ಣಚಂದ್ರರ ಮೂರ್ತಿಗಳನ್ನು ವಜ್ರಾಭರಣಗಳಿಂದ, ಚಿನ್ನದ ನೇಯ್ಗೆಯುಳ್ಳ ಚಿತ್ತಾಕರ್ಷಕ ವಸ್ತ್ರಗಳಿಂದ ಅಲಂಕರಿಸಲಾಗಿತ್ತು.

ಭಗವಂತನ ಅವತಾರವನ್ನು ಸಂಭ್ರಮಿಸಲು ಮಂದಿರದ ಶ್ರೀರಾಧಾಕೃಷ್ಣ, ಕೃಷ್ಣ ಬಲರಾಮ ವಿಗ್ರಹಗಳನ್ನು ಸುಂದರವಾಗಿ ಅಲಂಕರಿಸಲಾಗಿತ್ತು. ಈ ಎರಡೂ ದಿನ ಶ್ರೀ ರಾಧಾಕೃಷ್ಣರಿಗೆ ಬೆಳಿಗ್ಗೆ 4.30ಕ್ಕೆ ಮಹಾಮಂಗಳಾರತಿ ಮತ್ತು ಕೀರ್ತನೆಗಳಿಂದ ಪೂಜಾ ಕಾರ್ಯಕ್ರಮಗಳು ಪ್ರಾರಂಭವಾಗಿ ನಂತರ ಪಂಚಾಮೃತ, ಪಂಚಗವ್ಯ, ಪುಷ್ಪೋದಕ, ಫಲೋದಕಗಳಿಂದ ಅಭಿಷೇಕ ಮಾಡಲಾಯಿತು.

ಕೃಷ್ಣನಿಗೆ ಪ್ರಿಯವಾದ 108 ಭಕ್ಷ್ಯಗಳ ನೈವೇದ್ಯಗಳ ಸೇವೆ ಸಲ್ಲಿಸಲಾಯಿತು. ಇಡೀ ಮಂದಿರವನ್ನು ಬಗೆಬಗೆಯ ಸುಗಂಧ ಭರಿತ ಹೂವಿನ ಮಾಲೆಗಳಿಂದ ಅಲಂಕರಿಸಲಾಗಿತ್ತು.

ದೇವಸ್ಥಾನದ ಗೋಶಾಲೆಯಲ್ಲಿ ಗೋಪೂಜೆ ಮಾಡಲಾಯಿತು ಮತ್ತು ಶ್ರೀ ರಾಧಾಕೃಷ್ಣಚಂದ್ರ ಉತ್ಸವ ಮೂರ್ತಿಗಳಿಗೆ ಉಯ್ಯಾಲೆ ಸೇವೆ, ತೆಪ್ಪೋತ್ಸವ ನಡೆಯಿತು. ನಾಟಕಕಾರ ಚಂದ್ರಶೇಖರ ಕಂಬಾರ ಮತ್ತು ಜೆಡಿಎಸ್ ಮುಖಂಡ ಚೆಲುವರಾಯ ಸ್ವಾಮಿ ಸೇರಿದಂತೆ ಹಲವು ಗಣ್ಯರು ದೇವರಿಗೆ ಉಯ್ಯಾಲೆ ಸೇವೆ ನೆರವೇರಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ: ಪೂರ್ಣಪ್ರಜ್ಞ ನಗರದ ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ನಾನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಭಾನುವಾರ ಮತ್ತು ಸೋಮವಾರ ಅಭಿಷೇಕ, ವಿಶೇಷ ಪೂಜೆ, ಅಲಂಕಾರ, ತುಳಸಿ ಅರ್ಚನೆ, ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದರು ನೇತೃತ್ವ ವಹಿಸಿದ್ದರು.

ಶ್ರೀಗಳ ನೇತೃತ್ವದಲ್ಲಿ ಮಂಗಳವಾರವೂ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 5.30ಕ್ಕೆ ವಿಟ್ಲಪಿಂಡಿ ರಥೋತ್ಸವ, ರಾತ್ರಿ 8.30ಕ್ಕೆ ರಂಗಪೂಜೆ, ದೀಪಾರಾಧನೆ, ಮಹಾಮಂಗಳಾರತಿ, ತೊಟ್ಟಿಲು ಪೂಜೆ, ಮಹಾ ಮಂಗಳಾರತಿ ನಡೆಯಲಿವೆ.

ಪೂಜೆ-ಪ್ರವಚನ: ಬಸವನಗುಡಿಯಲ್ಲಿರುವ ಶ್ರೀ ಗೋವರ್ಧನಗಿರಿ ಗುಹಾಲಯ ಕ್ಷೇತ್ರ, ಉಡುಪಿ ಶ್ರೀ ಪುತ್ತಿಗೆ ಮಠದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಸಡಗರದಿಂದ ಆಚರಿಸಲಾಯಿತು. ಅಲಂಕಾರ ಪೂಜೆ, ಸುಪ್ರಭಾತ ನಾದಸ್ವರ, ತುಳಸಿ ಅರ್ಚನೆ, ಮಹಾಪೂಜೆ ನೆರವೇರಿತು.

ಸಂಜೆ ಶ್ರೀ ಅಗ್ನಿಹೋತ್ರಿ ವೇಣು-ಗೋಪಾಲಾಚಾರ್ಯ ಅವರಿಂದ 'ಶ್ರೀ ಕೃಷ್ಣ ಸಂದೇಶ', ಪೇಜಾವರ ಪೀಠಾಧಿಪತಿ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರಿಂದ ಅನುಗ್ರಹ ಸಂದೇಶ ನಡೆಯಿತು.

ಗೋವರ್ಧನ ಗಿರಿಯಲ್ಲಿ ಮಂಗಳವಾರ ಶ್ರೀ ಕೃಷ್ಣ ಲೀಲೋತ್ಸವ ನಡೆಯಲಿದೆ. ಭಕ್ತರು ಆನ್‌ಲೈನ್ ಮೂಲಕವೂ ಪೂಜಾ ಕಾರ್ಯಕ್ರಮಗಳನ್ನು ವೀಕ್ಷಿಸಬಹುದು.

ತಿಂಡಿ-ತಿನಿಸು: ನಗರದ ಹಲವರು ತಮ್ಮ ಮನೆಗಳಲ್ಲಿ ವಿಶಿಷ್ಟವಾಗಿ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಕೃಷ್ಣನ ವಿಗ್ರಹವಿಟ್ಟು, ಅವನಿಗೆ ಪ್ರಿಯವಾದ ಚಕ್ಕುಲಿ, ಕೋಡುಬಳೆ, ರವೆ ಉಂಡೆ, ಕರ್ಜಿಕಾಯಿ, ಒಬ್ಬಟ್ಟು ಇತ್ಯಾದಿಗಳನ್ನು ನೈವೇದ್ಯಕ್ಕೆ ಇಟ್ಟು ಪೂಜೆ ಮಾಡಿದರು.

ಕೃಷ್ಣ–ರಾಧೆಯಾಗಿ ಕಂಗೊಳಿಸಿದ ಚಿಣ್ಣರು

ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಬಹುತೇಕರು ತಮ್ಮ ಮಕ್ಕಳಿಗೆ ಕೃಷ್ಣ-ರಾಧೆಯರ ವೇಷ ತೊಡಿಸಿ ಸಂಭ್ರಮಿಸಿದರು. ಮಕ್ಕಳ ವಿಡಿಯೊ ಮಾಡಿ, ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು ಸಂಭ್ರಮಿಸಿದರು.

ಮನೆಯೊಳಗೇ ಕೃಷ್ಣನ ಹೆಜ್ಜೆಯ ರಂಗವಲ್ಲಿ ಬಿಡಿಸಿ, ಕೆಲವರು ಮಕ್ಕಳ ಹೆಜ್ಜೆ ಗುರುತುಗಳನ್ನು ಮೂಡಿಸಿ, ಮನೆಯ ಅಂಗಳವನ್ನು ಅಲಂಕರಿಸಿದ್ದರು.

ಸುದ್ದಿ 2 ನಿಮಿಷ

'ಬಿಸಿಯೂಟ ಸಿಬ್ಬಂದಿಗೆ ಏಪ್ರಿಲ್‌ನಿಂದಲೇ ವೇತನ ನೀಡಿ'

ಬೆಂಗಳೂರು: 'ಕೋವಿಡ್‌ನಿಂದಾಗಿ ಬಿಸಿಯೂಟ ಸಿಬ್ಬಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ಏಪ್ರಿಲ್‌ನಿಂದಲೇ ವೇತನ ಬಿಡುಗಡೆ ಮಾಡಬೇಕು' ಎಂದು ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಇಲ್ಲಿ ಮಾತನಾಡಿದ ಸಂಘದ ಗೌರವ ಅಧ್ಯಕ್ಷೆ ಎಸ್. ವರಲಕ್ಷ್ಮಿ, 'ಕೇಂದ್ರ ಸರ್ಕಾರವು ಬಿಸಿಯೂಟ ಸಿಬ್ಬಂದಿಗೆ 10 ವರ್ಷಗಳಿಂದ ವೇತನ ಹೆಚ್ಚಿಸಿಲ್ಲ. ಕೋವಿಡ್ ಸಮಯದಲ್ಲಿ ರಾಜ್ಯ ಸರ್ಕಾರವು ಪ್ರಕಟಿಸಿದ ಆರ್ಥಿಕ ಪ್ಯಾಕೇಜ್‌ಗಳಿಂದಲೂ ನಮ್ಮನ್ನು ಹೊರಗಿಡಲಾಗಿದೆ. ಪ್ರತಿವರ್ಷ ನಮಗೆ ಜೂನ್‌ನಿಂದ ವೇತನ ನೀಡಬೇಕು. ಈಗ ಮೂರು ತಿಂಗಳಾದರೂ ಸಂಬಳ ಕೈಸೇರಿಲ್ಲ. ಬಾಕಿ ಉಳಿಸಿಕೊಂಡಿರುವ ಈ ಮೊತ್ತದ ಜೊತೆಗೆ ಏಪ್ರಿಲ್ ಮತ್ತು ಮೇ ತಿಂಗಳ ವೇತನವನ್ನೂ ಬಿಡುಗಡೆ ಮಾಡಬೇಕು' ಎಂದು ಆಗ್ರಹಿಸಿದರು.



'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಬಿಸಿಯೂಟ ಯೋಜನೆಯನ್ನು ಬಲಪಡಿಸುವುದರ ಜೊತೆಗೆ ಈಗಿರುವ ಮಾದರಿಯನ್ನೇ ಮುಂದುವರಿಸಬೇಕು.' ಎಂದರು.

'ಕೇಂದ್ರೀಕೃತ ಅಡುಗೆ ಕೇಂದ್ರ ಮಾದರಿಯನ್ನು ಜಾರಿಗೊಳಿಸಬಾರದು.' ಎಂದು ಮನವಿ ಮಾಡಿದ್ದಾರೆ.

'ನೀರಿನ ಸುಂಕ ಅಧಿಕ ವಸೂಲಿ ವಿರುದ್ಧ ಅಭಿಯಾನ'

ಬೆಂಗಳೂರು: ಜಲಮಂಡಳಿಯು ಬಹುಮಹಡಿ ಕಟ್ಟಡಗಳಲ್ಲಿ ವಾಸಿಸುತ್ತಿರುವವರಿಂದ ಅಧಿಕ ನೀರಿನ ಸುಂಕ ವಸೂಲಿ ಮಾಡುತ್ತಿದೆ ಎಂದು ಆರೋಪಿಸಿ ಕಲ್ಲಹಳ್ಳಿಯ ಬಿಡಿಎ ಫ್ಲ್ಯಾಟ್ ಮಾಲೀಕರು ಹಾಗೂ ಹಂಚಿಕೆದಾರರ ಸಂಘವು ಅಭಿಯಾನ ಆರಂಭಿಸಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಫ್ಲ್ಯಾಟ್ ಮಾಲೀಕರು, 'ನಾಲ್ಕು ಅಂತಸ್ತಿಗಿಂತಲೂ ಕಡಿಮೆ ಇರುವ ಕಟ್ಟಡಗಳಲ್ಲಿ ವಾಸಿಸುವವರಿಂದ ಪ್ರತಿ 1,000 ಲೀಟರ್‌ಗೆ ₹22 ಶುಲ್ಕವನ್ನಷ್ಟೇ ಪಡೆಯಬೇಕೆಂಬ ನಿಯಮವಿದೆ. ಇದರ ಪ್ರಕಾರ ವ್ಯಕ್ತಿಯೊಬ್ಬರು ತಿಂಗಳಿಗೆ 15,000 ಲೀಟರ್ ನೀರು ಬಳಸಿದರೆ ಅವರಿಗೆ ₹133 ಶುಲ್ಕ ವಿಧಿಸಬೇಕು. ಆದರೆ, ಜಲಮಂಡಳಿಯು ₹330 ಶುಲ್ಕ ಪಡೆಯುತ್ತಿದೆ' ಎಂದು ಆರೋಪಿಸಿದರು.

'ನಾಲ್ಕಕ್ಕಿಂತ ಅಧಿಕ ಅಂತಸ್ತಿನ ಕಟ್ಟಡಗಳಲ್ಲಿ ವಾಸಿಸುವವರಿಂದ ಪಡೆಯುವಷ್ಟು ಶುಲ್ಕವನ್ನು ನಮ್ಮಿಂದಲೂ ಪಡೆಯುತ್ತಿರುವುದು ಎಷ್ಟು ಸರಿ. ಕೇರಳ, ಚೆನ್ನೈ, ಮುಂಬೈಗೆ ಹೋಲಿಸಿದರೆ ನಮ್ಮಲ್ಲಿ ಪಡೆಯುತ್ತಿರುವ ಶುಲ್ಕ ದುಬಾರಿ. ಇದಕ್ಕೆ ಕಡಿವಾಣ ಹಾಕಬೇಕು' ಎಂದು ಒತ್ತಾಯಿಸಿದರು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಗರದ ವಿವಿಧ ಪ್ರದೇಶಗಳಲ್ಲಿ ಭೂಗತ ಕೇಬಲ್ ಅಳವಡಿಕೆ ಕಾರ್ಯ ಇರುವುದರಿಂದ ಇದೇ 31ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಮೈಲಸಂದ್ರ, ನಡಕೇರಪ್ಪ ಇಂಡಸ್ಟ್ರೀಸ್, ಭೈರವೇಶ್ವರ ಇಂಡಸ್ಟ್ರೀಸ್, ಸೃಷ್ಟಿನಗರ, ವೀರಭದ್ರೇಶ್ವರ ನಗರ, ಹೊಯ್ಸಳ ವೃತ್ತ, ಅಪೂರ್ವ ಬಡಾವಣೆ, ಟೆಲಿಕಾಂ ಬಡಾವಣೆ, ಸರ್ ಎಂ.ವಿ. ಬಡಾವಣೆ, ಪೊಲೀಸ್ ಚೌಕ, ದುಬಾಸಿಪಾಳ್ಯ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು.

ಜಮೀನು ಸ್ವಾಧೀನಕ್ಕೆ ರಾಮಗೊಂಡನಹಳ್ಳಿಯ ರೈತರ ವಿರೋಧ

ಶ್ರೀಕೃಷ್ಣ ಜಯಂತಿಯಂದೇ ಗೋಪಾಲಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋರಕ್ಷಕ ಸರ್ಕಾರವೇ ನಮ್ಮನ್ನು ರಕ್ಷಿಸು... ಅಧಿಕಾರಿಗಳೇ ನಮ್ಮ ಹಾಲಿನ ಋಣವನ್ನು ಸ್ಮರಿಸಿ... ನಮ್ಮ ಪಾಲಕರೊಂದಿಗೆ ನಮ್ಮನ್ನು ಬದುಕಲು ಬಿಡಿ... '

–ಈ ರೀತಿ ಒಕ್ಕಣೆ ಇರುವ ಫಲಕಗಳನ್ನು ಕತ್ತಿನಲ್ಲಿ ತೂಗುಹಾಕಿಕೊಂಡಿದ್ದ ನೂರಾರು ದನ-ಕರುಗಳು ತಮ್ಮ ಸಾಕುತ್ತಿರುವ ರೈತರೊಂದಿಗೆ ರಾಮಗೊಂಡನಹಳ್ಳಿಯಲ್ಲಿ ಸೋಮವಾರ ಮೆರವಣಿಗೆಯಲ್ಲಿ ಸಾಗಿದವು. ಯಲಹಂಕ ಬಳಿಯ ರಾಮಗೊಂಡನಹಳ್ಳಿಯ ಗೋಪಾಲಕರು ಶ್ರೀಕೃಷ್ಣ ಜಯಂತಿಯಂದೇ ಹಸು-ಕರುಗಳ ಮೆರವಣಿಗೆ ನಡೆಸುವ ಮೂಲಕ ಶಿವರಾಮ ಕಾರಂತ ಬಡಾವಣೆಗೆ ತಮ್ಮ ಜಮೀನು ಸ್ವಾಧೀನಪಡಿಸಿಕೊಳ್ಳುವುದರ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿದರು.

ರಾಮಗೊಂಡನಹಳ್ಳಿಯಿಂದ ಹೊರಟ ಮೆರವಣಿಗೆ ಸುಮಾರು 4 ಕಿ.ಮೀ ವರೆಗೆ ಸಾಗಿತ್ತು. ಪುಟ್ಟೇನಹಳ್ಳಿಯ ಬಳಿ ಪೊಲೀಸರು ಪ್ರತಿಭಟನಕಾರರನ್ನು ತಡೆದರು. ಉಪ ತಹಶೀಲ್ದಾರ್ ಹಾಗೂ ಬಿಡಿಎ ಅಧಿಕಾರಿಗಳು ಪ್ರತಿಭಟನಕಾರರಿಂದ ಮನವಿ ಸ್ವೀಕರಿಸಿದರು.

ಬಿಡಿಎ ಈ ಬಡಾವಣೆಗೆ 252 ಎಕರೆ 4 ಗುಂಟೆಯನ್ನು ರಾಮಗೊಂಡನಹಳ್ಳಿ ಗ್ರಾಮದಲ್ಲಿ ಸ್ವಾಧೀನಪಡಿಸಿಕೊಳ್ಳುತ್ತಿದೆ. ಈ ಗ್ರಾಮದಲ್ಲಿ ರೈತರು ಹಾಗೂ ರೈತ ಕಾರ್ಮಿಕರ 800ಕ್ಕೂ ಕುಟುಂಬಗಳು ನೆಲೆಸಿವೆ.

'ಈ ಬಡಾವಣೆ ನಿರ್ಮಿಸಿದ್ದೇ ಆದರೆ 17 ಗ್ರಾಮಗಳ ರೈತರು ಮತ್ತು ಕೃಷಿ ಕಾರ್ಮಿಕರು ನಿರುದ್ಯೋಗಿಗಳಾಗಲಿದ್ದಾರೆ. ಅವರ ಬದುಕು ಬೀದಿಗೆ ಬರಲಿದೆ. ಹಿಂದುತ್ವ ಹಾಗೂ ಗೋರಕ್ಷಣೆಗೆ ಆದ್ಯತೆ ಕೊಡುವ ಸರ್ಕಾರ ರಾಜ್ಯದಲ್ಲಿ ಅಸ್ತಿತ್ವದಲ್ಲಿದೆ. ಈ 17 ಗ್ರಾಮಗಳ ಹಿಂದೂ ಕುಟುಂಬಗಳು ನೂರಾರು ವರ್ಷಗಳಿಂದ ಪೋಷಿಸಿಕೊಂಡು ಬಂದಿರುವ 3 ಸಾವಿರಕ್ಕೂ ಅಧಿಕ ಗೋವುಗಳನ್ನು ಹಾಗೂ 5 ಸಾವಿರಕ್ಕೂ ಅಧಿಕ ಕುರಿಗಳು ಮತ್ತು ಮೇಕೆಗಳನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ನೆನಪಿಸಲು ಗೋವುಗಳ ಮೆರವಣಿಗೆ ನಡೆಸಿದ್ದೇವೆ' ಎಂದು ಪ್ರತಿಭಟನೆಯ ನೇತೃತ್ವ ವಹಿಸಿದ್ದ ದಲಿತ ಸಂಘರ್ಷ ಸಮಿತಿಯ ಬೆಂಗಳೂರು ನಗರ ಜಿಲ್ಲಾ ಸಮಿತಿಯ ಸಂಯೋಜಕ ಎಂ.ರಮೇಶ್ ತಿಳಿಸಿದರು.

'ರಾಮಗೊಂಡನಹಳ್ಳಿ ಗ್ರಾಮದಲ್ಲಿ ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಗ್ರಾಮದಲ್ಲಿ 417 ಹಸುಗಳು, 81 ಎಮ್ಮೆಗಳು ಹಾಗೂ ಸಾವಿರಾರು ಕುರಿ-ಮೇಕೆಗಳಿವೆ. ಇವುಗಳನ್ನು ಸಾಕುವುದೆಲ್ಲಿ.' ಎಂದು ಪ್ರಶ್ನಿಸಿದರು.

'17 ಗ್ರಾಮಗಳಲ್ಲಿ ರೈತರ ಜಮೀನುಗಳನ್ನು ಬಡಾವಣೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಇಲ್ಲಿನ ರೈತರು ಇದರ ವಿರುದ್ಧ ನಿರಂತರವಾಗಿ ಪ್ರತಿಭಟನೆ ನಡೆಸುತ್ತಲೇ ಬಂದಿದ್ದಾರೆ. ಇಲ್ಲಿನ ರೈತರ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿ ಅವಲೋಕಿಸಿ ಬಿಡಿಎ ಹಾಗೂ ಸರ್ಕಾರ ನಿರ್ಧಾರಕ್ಕೆ ಬರುತ್ತದೆ ಎಂಬ ಆಶಾಭಾವನೆ ಇಟ್ಟುಕೊಂಡಿದ್ದೆವು. ಆದರೆ, ಈ ಬಗ್ಗೆ ಬೆಳಕು ಚೆಲ್ಲದೆಯೇ ವಾಮಮಾರ್ಗದಲ್ಲಿ ರೈತರ ಜಮೀನು ವಶಪಡಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಇತ್ತೀಚೆಗೆ ಬೆಟ್ಟಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರ 8 ಮನೆಗಳನ್ನು ಹಾಗೂ ಗಾಣಿಗರಹಳ್ಳಿಯಲ್ಲಿ 20ಕ್ಕೂ ಅಧಿಕ ಮನೆಗಳನ್ನು ಕೆಡವಲಾಗಿದೆ.' ಎಂದರು.

'ಬಿಡಿಎ ಸ್ವಾಧೀನಪಡಿಸಿಕೊಳ್ಳುತ್ತಿರುವ ಗ್ರಾಮಗಳ ಮನೆಗಳಿಗೆ ಸ್ಥಳೀಯ ಸಂಸ್ಥೆಗಳ ರಸ್ತೆ, ಕುಡಿಯುವ ನೀರು ಮೊದಲಾದ ಮೂಲಸೌಕರ್ಯ ಒದಗಿಸಿವೆ. ವಸತಿ ನಿರ್ಮಿಸಿಕೊಂಡವರನ್ನು ಒಕ್ಕಲೆಬ್ಬಿಸಬಾರದು.' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.



ಪ್ರತಿಭಟನಾ ಮೆರವಣಿಗೆಯಲ್ಲಿ ಸಾಗಿದ ಗೋವುಗಳು

ಅಂಕಿ-ಅಂಶ

17 ಗ್ರಾಮಗಳಲ್ಲಿ ಶಿವರಾಮ ಕಾರಂತ ಬಡಾವಣೆಗಾಗಿ ಬಿಡಿಎ ಭೂಸ್ವಾಧೀನ ನಡೆಸುತ್ತಿದೆ

3,546 ಎಕರೆ **12** ಗುಂಟೆ ಬಡಾವಣೆಗೆ ಬಿಡಿಎ ಸ್ವಾಧೀನಪಡಿಸಿಕೊಳ್ಳುವ ಒಟ್ಟು ಜಾಗ

ಮೊದಲ ಡೋಸ್: ಬೆಂಗಳೂರು ನಗರ ಜಿಲ್ಲೆ ಶೇ100 ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆಯ ಮೊದಲ ಡೋಸ್ ವಿತರಣೆಯಲ್ಲಿ ಬೆಂಗಳೂರು ನಗರ ಜಿಲ್ಲೆ (ಬಿಬಿಎಂಪಿ ಹೊರತುಪಡಿಸಿ) ಶೇ 100 ಸಾಧನೆ ಮಾಡಿದೆ.

ಬೆಂಗಳೂರು ನಗರ ಜಿಲ್ಲಾಡಳಿತವು ಈ ವರ್ಷದ ಆಗಸ್ಟ್ ಅಂತ್ಯದವರೆಗೆ 10.6 ಲಕ್ಷ ಮಂದಿಗೆ ಲಸಿಕೆ ನೀಡಬೇಕಾಗಿತ್ತು. ಶನಿವಾರದ ವರೆಗೆ 10.6 ಲಕ್ಷ ಮಂದಿಗೆ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ. ಈ ಸಾಧನೆಯೊಂದಿಗೆ ಜಿಲ್ಲೆಯ ಒಟ್ಟು ಜನಸಂಖ್ಯೆಯ (ಬಿಬಿಎಂಪಿ ಹೊರತಾಗಿ) ಶೇ 80ರಷ್ಟು ಮಂದಿಗೆ ಲಸಿಕೆ ನೀಡಿದಂತಾಗಿದೆ. ಜಿಲ್ಲೆಯ ವ್ಯಾಪ್ತಿಯಲ್ಲಿ 2.97 ಲಕ್ಷ ಮಂದಿ ಲಸಿಕೆಯ ಎರಡನೇ ಡೋಸ್ ಅನ್ನೂ ಪಡೆದಿದ್ದಾರೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಬೆಂಗಳೂರು ನಗರ ಜಿಲ್ಲೆಯಲ್ಲೇ ಇದ್ದರೂ ಲಸಿಕೆ ವಿತರಣೆ ಕುರಿತು ಅದರ ಅಂಕಿ ಅಂಶಗಳನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುತ್ತದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 94.42 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿ ಇಟ್ಟುಕೊಳ್ಳಲಾಗಿದ್ದು, ಇದುವರೆಗೆ 67.29 ಲಕ್ಷ ಮಂದಿ (ಶೇ 71ರಷ್ಟು) ಲಸಿಕೆಯ ಮೊದಲ ಡೋಸ್ ಪಡೆದಿದ್ದಾರೆ. 24.40 ಲಕ್ಷ ಮಂದಿ ಲಸಿಕೆಯ ಎರಡನೇ ಡೋಸ್ ಪಡೆದಿದ್ದಾರೆ. ಲಸಿಕೆ ವಿತರಣೆಯಲ್ಲಿ ಬಿಬಿಎಂಪಿ ರಾಜ್ಯದಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.75 ಕೋಟಿ	3.27 ಕೋಟಿ
ಸಕ್ರಿಯ ಪ್ರಕರಣ	1.84 ಕೋಟಿ	3.64 ಲಕ್ಷ
ಗುಣಮುಖ	19.45 ಕೋಟಿ	3.19 ಕೋಟಿ
ಸಾವು	45.20 ಲಕ್ಷ	4.38 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.55 ಲಕ್ಷ	30,173
ಗುಣಮುಖ	4.27 ಲಕ್ಷ	35,987
ಸಾವು	7,492	202

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ಇರಾನ್
37,237	33,113	21,516

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ಇರಾನ್
81.84	12.15	6.27

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.37 ಲಕ್ಷ
ತಮಿಳುನಾಡು	34,878
ದೆಹಲಿ	25,081

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	64.60
ಕೇರಳ	40.27
ತಮಿಳುನಾಡು	26.13

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,37,550 ಒಟ್ಟು ಪ್ರಕರಣಗಳು (12,37,286 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,343	12,14,220	15,986

ದಿನದ ಏರಿಕೆ

ಹೊಸ ಪ್ರಕರಣ	264
ಗುಣಮುಖ	261
ಸಾವು	3

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯ ಕೋವಿಡ್ ಅಂಕಿ–ಅಂಶ

ಒಟ್ಟು ಸೋಂಕಿತರು (29,47,255 ನಿನ್ನೆಯ ವಿವರ)	29,48,228
ಸಕ್ರಿಯ ಪ್ರಕರಣಗಳು	18,392
ಗುಣಮುಖರಾದವರು	28,92,517
ಒಟ್ಟು ಸಾವು	37,293

ದಿನದ ಏರಿಕೆ

ಹೊಸ ಪ್ರಕರಣ	973
ಗುಣಮುಖ	1,324
ಸಾವು	15

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಹೊಸ ಪ್ರಕರಣಗಳು ಸಾವಿರಕ್ಕೂ ಕಡಿಮೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಗಣನೀಯ ಇಳಿಕೆ ಕಂಡಿದ್ದು, ಎರಡನೇ ಅಲೆ ಕಾಲಿಟ್ಟ ಬಳಿಕ ಮೊದಲ ಬಾರಿಗೆ ಈ ಸಂಖ್ಯೆ ಸಾವಿರಕ್ಕಿಂತ ಕಡಿಮೆಗೆ ಇಳಿದಿದೆ.

ಸೋಮವಾರ 973 ಮಂದಿ ಸೋಂಕಿಗೊಳಗಾಗಿದ್ದು, ಕೋವಿಡ್ ದೃಢ ಪ್ರಮಾಣವು ಶೇ 0.64ಕ್ಕೆ ತಗ್ಗಿದೆ.

ಮೈಸೂರು ರಸ್ತೆ–ಕೆಂಗೇರಿ ಮೆಟ್ರೊ: ಮೊದಲ ದಿನ ಬೆರಳೆಣಿಕೆಯಷ್ಟು ಜನರ ಪ್ರಯಾಣ

ಹೊಸ ತಂತ್ರಾಂಶ ಬಳಕೆಗೆ ಹರಸಾಹಸ

ಪ್ರಜಾವಾಣಿ ವಾರ್ತೆ



ಮೈಸೂರು ರಸ್ತೆ–ಕೆಂಗೇರಿ ವಿಸ್ತರಿತ ಮಾರ್ಗದಲ್ಲಿ ಮೆಟ್ರೊ ರೈಲಿನ ವಾಣಿಜ್ಯ ಸಂಚಾರ ಸೋಮವಾರದಿಂದ ಆರಂಭವಾಗಿದ್ದು, ರೈಲಿನಲ್ಲಿ ಬೆರಳೆಣಿಕೆಯಷ್ಟು ಪ್ರಯಾಣಿಕರು ಇದ್ದರು. ಪ್ರಜಾವಾಣಿ ಚಿತ್ರ : ಅನೂಪ್ ರಾಘ್.ಟಿ.

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದ ಮೈಸೂರು ರಸ್ತೆ- ಕೆಂಗೇರಿ ವಿಸ್ತರಿತ ಮಾರ್ಗದಲ್ಲಿ ಸೋಮವಾರದಿಂದ ಮೆಟ್ರೊ ರೈಲು ಸೇವೆ ಆರಂಭವಾಯಿತು. ಮೆಟ್ರೊ ರೈಲು ಸೌಲಭ್ಯ ದೊರೆಯುತ್ತಿರುವುದು ಎಲ್ಲರ ಮೊಗದಲ್ಲಿ ಸಂತಸಕ್ಕೆ ಕಾರಣವಾಗಿತ್ತು. ಆದರೆ, ಮೊದಲ ದಿನ ಪ್ರತಿ ರೈಲಿನಲ್ಲಿ ಬೆರಳೆಣಿಕೆಯಷ್ಟು ಪ್ರಯಾಣಿಕರು ಕಂಡು ಬಂದರು.

ಈ ಮಾರ್ಗದಲ್ಲಿ ಮೆಟ್ರೊ ಸೇವೆ ಆರಂಭವಾಗಿರುವುದರ ಬಗ್ಗೆ ಬಹುತೇಕರಿಗೆ ಇನ್ನೂ ಮಾಹಿತಿ ಇರದಿರುವುದು ಮತ್ತು ಬಸ್‌ಗಳಲ್ಲಿ ಮಾಸಿಕ ಪಾಸ್ ಅವಧಿ ಇನ್ನೂ ಮುಗಿಯದಿರುವ ಕಾರಣದಿಂದಲೂ ಹೆಚ್ಚು ಪ್ರಯಾಣಿಕರು ಕಂಡು ಬರಲಿಲ್ಲ.

'ಕೆಂಗೇರಿಯವರೆಗೆ ಮೆಟ್ರೊ ಸಂಚಾರ ಆರಂಭವಾಗಿರುವುದು ಸಂತಸ ತಂದಿದೆ. ಆದರೆ, ಈಗಾಗಲೇ ನಾನು ಬಿಎಂಟಿಸಿ ಬಸ್ ಮಾಸಿಕ ಪಾಸ್ ತೆಗೆದುಕೊಂಡಿರುವುದರಿಂದ 31ರವರೆಗೆ ಬಸ್‌ನಲ್ಲಿಯೇ ಪ್ರಯಾಣಿಸಿ, ಸೆ.1ರಿಂದ ಮೆಟ್ರೊ ರೈಲು ಸೇವೆ ಬಳಸಲು ನಿರ್ಧರಿಸಿದ್ದೇನೆ' ಎಂದು ಕೆಂಗೇರಿ ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿದ್ದ ರಮೇಶ್ ಹೇಳಿದರು.

ಆಟೊ, ಕ್ಯಾಬ್‌ಗಳಿಗೆ ನೂರಾರು ರೂಪಾಯಿ ಸುರಿಯುವುದು ತಪ್ಪಿದೆ. ಅಲ್ಲದೆ, ಸಂಚಾರ ದಟ್ಟಣೆಯ ಕಿರಿಕಿರಿಯೂ ತಪ್ಪಿದ್ದು, ಮೆಟ್ರೊ ರೈಲಿನಲ್ಲಿ ಸಂಚರಿಸುವುದು ಖುಷಿ ಕೊಡುತ್ತಿದೆ ಎಂದು ಬಹುತೇಕರು ಸಂತಸ ಹಂಚಿಕೊಂಡರು.

ಹೊಸ ತಂತ್ರಾಂಶ: ನೂತನವಾಗಿ ಕಾರ್ಯಾರಂಭ ಮಾಡಿರುವ ಮೆಟ್ರೊ ನಿಲ್ದಾಣಗಳಲ್ಲಿ ಹೊಸ ತಂತ್ರಜ್ಞಾನ ಆಧರಿತ ಸ್ವಯಂಚಾಲಿತ ಶುಲ್ಕ ಸಂಗ್ರಹ (ಎಎಫ್‌ಸಿ) ದ್ವಾರಗಳನ್ನು ಅಳವಡಿಸಲಾಗಿದೆ. ಕ್ಯೂಆರ್ ಕೋಡ್ ಮತ್ತು ಬಾರ್ ಕೋಡ್ ಸ್ಕ್ಯಾನ್ ಮಾಡಿಯೂ ಪ್ರಯಾಣಿಸಬಹುದಾದ ವ್ಯವಸ್ಥೆಯನ್ನು ಇವುಗಳನ್ನು ಅಳವಡಿಸಲಾಗುತ್ತಿದೆ.

ಹಳೆಯ ನಿಲ್ದಾಣಗಳಲ್ಲಿನ ಎಎಫ್‌ಸಿ ದ್ವಾರಗಳಲ್ಲಿ ಇನ್ನೂ ಈ ವ್ಯವಸ್ಥೆ ಅಳವಡಿಸಿಲ್ಲ. ಹೀಗಾಗಿ, ಹೊಸ ನಿಲ್ದಾಣಗಳಲ್ಲಿ ನೂತನ ತಂತ್ರಜ್ಞಾನದ ವ್ಯವಸ್ಥೆ ಇದ್ದರೂ, ಅದರ ಬಳಕೆ ಇನ್ನೂ ಪ್ರಾರಂಭವಾಗಿಲ್ಲ. ಆದರೆ, ಹೊಸ ತಂತ್ರಾಂಶ ಬಳಕೆಯ ಬಗ್ಗೆ ಸಿಬ್ಬಂದಿಗೆ ತರಬೇತಿ ನೀಡದ ಕಾರಣ, ಒಂದು ಸ್ಮಾರ್ಟ್‌ಕಾರ್ಡ್ ರಿಚಾರ್ಜ್ ಮಾಡುವುದಕ್ಕೆ 15ರಿಂದ 20 ನಿಮಿಷ ಕಾಯಬೇಕಾದ ಸ್ಥಿತಿ ಇದೆ.

'ಮೊದಲು ಖಾಲಿಂದಿ (Khalindi) ಕಂಪನಿಗೆ ಈ ತಂತ್ರಾಂಶ ಬಳಕೆ ಮತ್ತು ನಿರ್ವಹಣೆಯ ಗುತ್ತಿಗೆ ನೀಡಲಾಗಿತ್ತು. ಈಗ, ಏಜಿಸ್ (AEGIS) ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಈ ಕಂಪನಿಯು ಸ್ಯಾಮ್‌ಸಂಗ್ ತಂತ್ರಾಂಶವನ್ನು ಅಳವಡಿಸಿಕೊಂಡಿದೆ. ಈ ತಂತ್ರಾಂಶದ ಬಳಕೆಯ ಬಗ್ಗೆ ನಮಗೆ ಒಂದು ದಿನವೂ ತರಬೇತಿ ನೀಡಿಲ್ಲ. ಬಳಕೆಯ ವಿಧಾನ ಸರಿಯಾಗಿ ಗೊತ್ತಿಲ್ಲದ ಕಾರಣ ವಿಳಂಬವಾಗುತ್ತಿದೆ' ಎಂದು ಮೆಟ್ರೊ ನಿಲ್ದಾಣದ ಸಿಬ್ಬಂದಿಯೊಬ್ಬರು 'ಪ್ರಜಾವಾಣಿ'ಗೆ ಹೇಳಿದರು.

'ಶುಲ್ಕ ಸಂಗ್ರಹದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ನಾವೇ ಕೈಯಿಂದ ಹಣ ಹಾಕಬೇಕಾಗುತ್ತದೆ. ಹೆಚ್ಚು ಎಚ್ಚರ ವಹಿಸಬೇಕಾಗಿರುವುದರಿಂದಲೂ ವಿಳಂಬವಾಗುತ್ತಿದೆ' ಎಂದು ಮತ್ತೊಂದು ನಿಲ್ದಾಣದ ಸಿಬ್ಬಂದಿ ಹೇಳಿದರು.

'ಹೊಸ ತಂತ್ರಾಂಶ ಬಳಸುವಾಗ ಪ್ರಾರಂಭದಲ್ಲಿ ನಿಧಾನವಾಗುವುದು ಸಹಜ. ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿಯೂ ಟಿಕೆಟ್ ಖರೀದಿಸಬಹುದು. ಅಲ್ಲದೆ, ಟೋಕನ್ ಬದಲು ಬಾರ್‌ಕೋಡ್ ಸಹಾಯದಿಂದಲೂ ಹಣ ಪಾವತಿಸಿ ಪ್ರಯಾಣಿಸಬಹುದಾಗಿದೆ. ಈ ಎಲ್ಲ ಸೌಲಭ್ಯ ಅಳವಡಿಕೆಯು ಈಗಷ್ಟೇ ಆರಂಭವಾಗಿರುವುದರಿಂದ ಸ್ಮಾರ್ಟ್ ಕಾರ್ಡ್ ರಿಚಾರ್ಜ್, ಮತ್ತಿತರ ಕೆಲಸ ನಿಧಾನವಾಗುತ್ತಿದೆ' ಎಂದು ನಿಗಮದ ಅಧಿಕಾರಿಯೊಬ್ಬರು ತಿಳಿಸಿದರು.

ಅಂಕಿ-ಅಂಶಗಳು

7,630 ಮೈಸೂರು ರಸ್ತೆ–ಕೆಂಗೇರಿ ನಡುವೆ ಸೋಮವಾರ ಸಂಚರಿಸಿದ ಪ್ರಯಾಣಿಕರು (ಆಗಮನ)	**7,476** ಮೈಸೂರು ರಸ್ತೆ–ಕೆಂಗೇರಿ ನಡುವೆ ಸೋಮವಾರ ಸಂಚರಿಸಿದ ಪ್ರಯಾಣಿಕರು (ನಿರ್ಗಮನ)
88,148 ನೇರಳೆ ಮಾರ್ಗದಲ್ಲಿ ಸೋಮವಾರ ಸಂಚರಿಸಿದ ಪ್ರಯಾಣಿಕರು	**95,387** ಹಸಿರು ಮಾರ್ಗದಲ್ಲಿ ಸೋಮವಾರ ಸಂಚರಿಸಿದ ಪ್ರಯಾಣಿಕರು

ಸಾರ್ವಜನಿಕರು ಏನಂತಾರೆ?

ಹಣ, ಸಮಯ ಉಳಿತಾಯ



ನಾನು ಅತ್ತಿಗುಪ್ಪೆಯಿಂದ ಕೆಂಗೇರಿಯವರೆಗೆ ಪ್ರಯಾಣಿಸುತ್ತೇನೆ. ಮೊದಲು ಆಟೊಗೆ ₹160, ಕ್ಯಾಬ್‌ಗೆ ₹240 ಕೊಡಬೇಕಾಗಿತ್ತು. ಮೆಟ್ರೊ ಸೇವೆ ಆರಂಭವಾದ ನಂತರ ಕೇವಲ ₹28ರಲ್ಲಿಯೇ ಕೆಂಗೇರಿ ಬರುತ್ತೇನೆ. ಹಣ, ಸಮಯ ಉಳಿಯುತ್ತದೆ. ಪ್ರಯಾಣವೂ ಕಷ್ಟ ಎನಿಸುತ್ತಿಲ್ಲ

ಸುಷ್ಮಾ, ಅತ್ತಿಗುಪ್ಪೆ

ಉತ್ತಮ ಸಂಪರ್ಕ ವ್ಯವಸ್ಥೆ



ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ. ರಾಜರಾಜೇಶ್ವರಿ ನಗರದಿಂದ ಕೆಂಗೇರಿಗೆ ಪ್ರಯಾಣಿಸುತ್ತಿದ್ದೆ. ಮೆಟ್ರೊ ರೈಲು ಸೇವೆ ಆರಂಭವಾಗಿರುವುದರಿಂದ ಸಂಪರ್ಕ ವ್ಯವಸ್ಥೆ ಸಾಕಷ್ಟು ಸುಧಾರಿಸಿದಂತಾಗಿದೆ. ಆಸ್ಪತ್ರೆ–ಕಾಲೇಜುಗಳ ಅಭಿವೃದ್ಧಿಗೂ ನೆರವಾಗಲಿದೆ.

ಡಾ. ಅಕ್ಷತಾ, ರಾಜರಾಜೇಶ್ವರಿ ನಗರ

ಅಚ್ಚುಕಟ್ಟಾದ ವ್ಯವಸ್ಥೆ



ನೂತನ ನಿಲ್ದಾಣಗಳಲ್ಲಿ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿದೆ. ಲಿಫ್ಟ್, ಎಸ್ಕಲೇಟರ್ ಸೌಲಭ್ಯ ಒದಗಿಸಲಾಗಿದೆ. ಸ್ಮಾರ್ಟ್‌ಕಾರ್ಡ್ ರಿಚಾರ್ಜ್ ಮಾಡುವುದು ಸ್ವಲ್ಪ ವಿಳಂಬವಾಗುತ್ತಿದೆ. ಆದರೆ, ಹತ್ತು ನಿಮಿಷದೊಳಗೇ ರೈಲುಗಳ ಬರುತ್ತಿವೆ. ದೀಪಾಂಜಲಿ ನಗರದಿಂದ ಏಳೆಂಟು ನಿಮಿಷಗಳಲ್ಲಿಯೇ ಕೆಂಗೇರಿ ತಲುಪಬಹುದು.

ಅಜಿತ್ ಶೆಟ್ಟಿ, ಕುಂಬಳಗೋಡು

ಪ್ರಯಾಣದ ಭಯವಿಲ್ಲ



ನಾನು ಇಂದಿರಾನಗರದಲ್ಲಿ ಕೆಲಸ ಮಾಡುತ್ತಿದ್ದೇನೆ. ಉಳಿದುಕೊಂಡಿರುವುದು ಕೆಂಗೇರಿಯಲ್ಲಿ. ಬಸ್, ಆಟೊ ಅಥವಾ ಕ್ಯಾಬ್‌ನಲ್ಲಿ ಸಂಚರಿಸುವಾಗ ಕೆಲವೊಮ್ಮೆ ಆತಂಕ ಮತ್ತು ಭಯವಿತ್ತು. ಈಗ ಮೆಟ್ರೊ ರೈಲಿನಲ್ಲಿ ಯಾವುದೇ ಆತಂಕವಿಲ್ಲದೆ ಪ್ರಯಾಣಿಸಬಹುದಾಗಿದೆ.

ನಿಶಿತಾ, ಕೆಂಗೇರಿ ಉಪನಗರ

ಸುರಕ್ಷಿತ ಪ್ರಯಾಣ



ಮೆಟ್ರೊ ರೈಲು ಸೇವೆಯಿಂದ ಹಣ ಮತ್ತು ಸಮಯ ಎರಡೂ ಉಳಿತಾಯವಾಗುತ್ತಿದೆ. ಪ್ರಯಾಣವೂ ಸುರಕ್ಷಿತವಾಗಿದೆ. ಈಗ ರಾತ್ರಿ 8 ಗಂಟೆಯವರೆಗೆ ಮಾತ್ರ ಸೇವೆ ಒದಗಿಸಲಾಗುತ್ತಿದೆ. ರಾತ್ರಿ 10ಗಂಟೆಯವರೆಗೆ ಸಮಯ ವಿಸ್ತರಿಸಿದರೆ ಅನುಕೂಲವಾಗುತ್ತದೆ.

ಜೆಸ್ಲಿನ್, ಕೆಂಗೇರಿ

ಕನ್ನಡ ಕಡೆಗಣನೆ: ಶಿಸ್ತುಕ್ರಮಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆ-ಕೆಂಗೇರಿ ವಿಸ್ತರಿತ ಮಾರ್ಗದ ಉದ್ಘಾಟನಾ ಕಾರ್ಯಕ್ರಮದ ವೇದಿಕೆಯ ಪರದೆಯ ಮೇಲೆ ಇಂಗ್ಲಿಷ್ ಮಾತ್ರ ಬಳಸಿ, ಆಡಳಿತ ಭಾಷೆ ಕನ್ನಡವನ್ನು ಕಡೆಗಣಿಸಿದ್ದಕ್ಕೆ ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ವಿರುದ್ಧ ಕನ್ನಡ ಅಭಿವೃದ್ಧಿ ಪ್ರಾಧಿಕಾರ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಇಂತಹ ಲೋಪಕ್ಕೆ ಕಾರಣರಾದ ಅಧಿಕಾರಿ ವಿರುದ್ಧ ಶಿಸ್ತುಕ್ರಮಕ್ಕೆ ಶಿಫಾರಸು ಮಾಡಬೇಕು ಎಂದು ಒತ್ತಾಯಿಸಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

'ರಾಜ್ಯ ಸರ್ಕಾರದ ಸ್ವಾಮ್ಯಕ್ಕೆ ಬರುವ ಎಲ್ಲ ಸರ್ಕಾರಿ, ಸರ್ಕಾರೇತರ, ಖಾಸಗಿ ಸಂಸ್ಥೆಗಳು ತಮ್ಮ ಆಡಳಿತದಲ್ಲಿ ಸಂಪೂರ್ಣ ಕನ್ನಡ ಅನುಷ್ಠಾನ ಮಾಡಬೇಕು ಎಂದು ಈಗಾಗಲೇ ಸಾಕಷ್ಟು ಆದೇಶ, ಸುತ್ತೋಲೆಗಳು ಬಂದಿದ್ದರೂ, ಬಿಎಂಆರ್‌ಸಿಎಲ್ ಪದೇ ಪದೇ ಕನ್ನಡವನ್ನು ಕಡೆಗಣಿಸುತ್ತಿದೆ. ಭಾನುವಾರದ ಕಾರ್ಯಕ್ರಮದಲ್ಲಿಯೂ ಕನ್ನಡ ಭಾಷೆಯನ್ನು ನಿರ್ಲಕ್ಷಿಸಿರುವುದರ ವಿರುದ್ಧ ಸಾಕಷ್ಟು ಮೌಖಿಕ ಮತ್ತು ಲಿಖಿತ ದೂರುಗಳು ಬಂದಿವೆ' ಎಂದು ಅವರು ಹೇಳಿದ್ದಾರೆ.

'ಆಡಳಿತದಲ್ಲಿ ಕನ್ನಡವನ್ನು ಬಳಸುವಂತೆ ಈ ಹಿಂದೆ ನಡೆದ ಪರಿಶೀಲನಾ ಸಭೆಗಳಲ್ಲಿಯೂ ನಿಗಮದ ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಖುದ್ದು ಭೇಟಿ ಮಾಡಿಯೂ ಆಡಳಿತದಲ್ಲಿ ಶೇ 100ರಷ್ಟು ಕನ್ನಡ ಬಳಸುವಂತೆ ಸೂಚಿಸಲಾಗಿತ್ತು. ಆದಾಗ್ಯೂ, ನಿಗಮದ ವರ್ತನೆ ಖಂಡನಾರ್ಹ. ಸಂಬಂಧಪಟ್ಟ ಅಧಿಕಾರಿಯ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು' ಎಂದು ನಾಗಾಭರಣ ಒತ್ತಾಯಿಸಿದ್ದಾರೆ.

'ನಾನೇ ಹೊಣೆ'

'ಸಮಾರಂಭದಲ್ಲಿ ಎಲ್ಲ ಫಲಕಗಳು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಇದ್ದವು. ಆದರೆ, ಮುಖ್ಯ ವೇದಿಕೆಯ ಹಿಂದೆ ಹಾಕಲಾಗಿದ್ದ ಪರದೆಯಲ್ಲಿ ಮಾತ್ರ ಇಂಗ್ಲಿಷ್ ಇತ್ತು. ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಈ ತಪ್ಪಿಗೆ ನಾನೇ ಹೊಣೆ. ಆಗಿರುವ ತಪ್ಪಿಗೆ ವಿಷಾದ ವ್ಯಕ್ತಪಡಿಸುತ್ತೇನೆ. ಮುಂದೆ ಈ ರೀತಿಯ ತಪ್ಪುಗಳು ಆಗದಂತೆ ಎಚ್ಚರ ವಹಿಸುತ್ತೇನೆ. ತಪ್ಪನ್ನು ಮನ್ನಿಸಬೇಕು' ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಯಶವಂತ ಚೌಹಾಣ್ ಕೋರಿದ್ದಾರೆ.

ನೃಪತುಂಗ ವಿಶ್ವವಿದ್ಯಾಲಯದಲ್ಲಿ ಪ್ರತಿ ಬುಧವಾರ 'ಖಾದಿ ದಿನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವದೇಶಿ ಪರಿಕಲ್ಪನೆಗೆ ಉತ್ತೇಜನ ನೀಡುವ ಉದ್ದೇಶದಿಂದ ಪ್ರತಿ ಬುಧವಾರ ಖಾದಿ ಬಟ್ಟೆ ಧರಿಸುವಂತೆ ರಾಜ್ಯದಲ್ಲಿ ಹೊಸತಾಗಿ ಅಸ್ತಿತ್ವಕ್ಕೆ ಬಂದ ನೃಪತುಂಗ ವಿಶ್ವವಿದ್ಯಾಲಯವು ತನ್ನ ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗೆ ಸೂಚಿಸಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದ ಕುಲಪತಿ ಪ್ರೊ. ಶ್ರೀನಿವಾಸ ಎಸ್. ಬಳ್ಳಿ, 'ಪ್ರತಿ ಬುಧವಾರ ಖಾದಿ ದಿನ ಆಚರಿಸಲು ನಿರ್ಧರಿಸಿದ್ದೇವೆ. ಸ್ವಯಂಪ್ರೇರಣೆಯಿಂದ ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿ ಖಾದಿ ಉಡುಪು ಧರಿಸುವಂತೆ ಸೂಚಿಸಲಾಗಿದೆ. ಬೋಧಕ, ಬೋಧಕೇತರ ವರ್ಗದವರು ಈಗಾಗಲೇ ಪ್ರತಿ ಬುಧವಾರ ಖಾದಿ ಬಟ್ಟೆ ಧರಿಸಿ ಬರುತ್ತಿದ್ದಾರೆ' ಎಂದರು.

'ವಿದ್ಯಾರ್ಥಿಗಳು ಕಾಲೇಜಿಗೆ ಬಂದ ಬಳಿಕ ಈ ವಿಷಯವನ್ನು ಅವರ ಗಮನಕ್ಕೆ ತರಲಾಗುತ್ತದೆ. ವಿದ್ಯಾರ್ಥಿಗಳಿಗೆ, ಬೋಧಕ, ಬೋಧಕೇತರರಿಗೆ ಅನುಕೂಲ ಅಗುವಂತೆ ಖಾದಿ ಮೇಳವನ್ನು ಕೂಡಾ ಆಯೋಜಿಸುತ್ತಿದ್ದೇವೆ' ಎಂದರು.

ಉಚಿತ ಊಟ: 'ಬಡ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಉಚಿತವಾಗಿ ನೀಡುತ್ತಿದ್ದೇವೆ. ವಿದ್ಯಾರ್ಥಿಗಳಿಗೆ ದೈಹಿಕ, ಮಾನಸಿಕ ಆರೋಗ್ಯಕ್ಕಾಗಿ ಕುಶಲ ಯೋಜನೆ ಜಾರಿ ಮಾಡಿದ್ದೇವೆ. ವಿದ್ಯಾರ್ಥಿಗಳನ್ನು ಉದ್ಯೋಗ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧಪಡಿಸಲು ಕೆಲವು ತರಬೇತಿಗಳನ್ನು ಉಚಿತವಾಗಿ ನೀಡುತ್ತಿದ್ದೇವೆ' ಎಂದರು.

'2021-22ನೇ ಸಾಲಿನ ಪ್ರವೇಶ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡಿರುವ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ಶೇ 50ರಷ್ಟು ರಿಯಾಯತಿ ನೀಡುತ್ತಿದ್ದೇವೆ. ಕ್ರೀಡಾಪಟುಗಳಿಗೆ, ಎನ್‌ಸಿಸಿ, ಎನ್ಸೆಸ್ಸೆಸ್, ರೆಡ್‌ಕ್ರಾಸ್ ಮತ್ತಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೂ ಶುಲ್ಕ ವಿನಾಯಿತಿ ನೀಡಲಾಗುವುದು' ಎಂದರು.

'ಪ್ರಸಕ್ತ ಸಾಲಿನಿಂದಲೇ ಎನ್‌ಇಪಿ': 'ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ (2021-22) ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಲಾಗುವುದು. ಅದಕ್ಕೆ ಪೂರಕವಾಗಿ ಬಿ.ಎಸ್ಸಿ ಹಾಗೂ ಬಿಸಿಎ ಕೋರ್ಸ್‌ನಲ್ಲಿ ಕೆಲವು ಬದಲಾವಣೆ ಮಾಡಿಕೊಂಡಿದ್ದೇವೆ. ದಾಖಲಾತಿ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಹೊಸ ದಾಖಲಾತಿ ಹೊರತುಪಡಿಸಿ ಸದ್ಯ 2,200 ವಿದ್ಯಾರ್ಥಿಗಳು ಹಾಗೂ 101 ಕಾಯಂ ಬೋಧಕರು, 71 ಅತಿಥಿ ಉಪನ್ಯಾಸಕರು ಇದ್ದಾರೆ. ಎನ್‌ಇಪಿ ಅನುಷ್ಠಾನದ ಭಾಗವಾಗಿ ಬಿ.ಎಸ್ಸಿಯಲ್ಲಿ 24 ವಿಜ್ಞಾನ ವಿಷಯಗಳ ಸಂಯೋಜನೆ ನೀಡಿದ್ದೇವೆ. ಪ್ರತಿ ಸಂಯೋಜನೆಗೂ 30 ಅಥವಾ 60 ಮಕ್ಕಳ ದಾಖಲಾತಿ ಇರಲಿದೆ. ಬಿಸಿಎನಲ್ಲಿ ಪ್ರತ್ಯೇಕ ಸಂಯೋಜನೆ ಇರುವುದಿಲ್ಲ' ಎಂದು ಕುಲಪತಿ ಮಾಹಿತಿ ನೀಡಿದರು.

ಮೊದಲಿನಷ್ಟೇ ಸಂಖ್ಯೆಯಲ್ಲಿ ವಾಹನಗಳು ರಸ್ತೆಗಿಳಿದರೆ ನಿತ್ಯ ಸಂಕಷ್ಟ? ● ಮನೆಯಿಂದಲೇ ಕೆಲಸ– ಐಟಿ ಕಂಪನಿಗಳಿಗೆ ಪತ್ರ

ಒಆರ್‌ಆರ್‌ನಲ್ಲಿ ಮತ್ತೆ ಸಂಚಾರ ದಟ್ಟಣೆ: ಕಳವಳ

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಕೆ.ಆರ್.ಪುರ–ಸಿಲ್ಕ್‌ಬೋರ್ಡ್ ನಡುವೆ ನಡೆಯುತ್ತಿರುವ 'ನಮ್ಮ ಮೆಟ್ರೊ' ಕಾಮಗಾರಿಯಿಂದಾಗಿ ಹೊರವರ್ತುಲ ರಸ್ತೆಯ (ಒಆರ್‌ಆರ್) ಆಸುಪಾಸಿನಲ್ಲಿ ಮತ್ತೆ ವಾಹನ ಸಂಚಾರ ದಟ್ಟಣೆ ಹೆಚ್ಚಳವಾಗುತ್ತಿರುವುದು ಸರ್ಕಾರದ ಕಳವಳಕ್ಕೆ ಕಾರಣವಾಗಿದೆ.

ಕೋವಿಡ್ ಕಾಣಿಸಿಕೊಳ್ಳುವುದಕ್ಕೆ ಮುನ್ನ ಒಆರ್‌ಆರ್ ಸಂಚಾರ ದಟ್ಟಣೆ ಸಮಸ್ಯೆಯಿಂದ ನಲುಗಿ ಹೋಗಿತ್ತು.

ಸರ್ಕಾರವು 'ಬಸ್ ಆದ್ಯತಾ ಪಥ'ದಂತಹ ಪರಿಹಾರ ಕ್ರಮಗಳನ್ನು ಜಾರಿಗೆ ತಂದರೂ ದಟ್ಟಣೆ ಸಮಸ್ಯೆ ಹತೋಟಿಗೆ ಬಂದಿರಲಿಲ್ಲ. ಮಾಹಿತಿ ತಂತ್ರಜ್ಞಾನ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಕೋವಿಡ್ ಸಂದರ್ಭದಲ್ಲಿ ಮನೆಯಿಂದಲೇ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿದ್ದರಿಂದಾಗಿ ಒಆರ್‌ಆರ್‌ನಲ್ಲಿ ಸಂಚಾರ ದಟ್ಟಣೆ ಸಮಸ್ಯೆ ನಿಯಂತ್ರಣಕ್ಕೆ ಬಂದಿತ್ತು.

ಒಆರ್‌ಆರ್‌ನಲ್ಲಿ ಮೆಟ್ರೊ ಕಾಮಗಾರಿಯೂ ನಡೆಯುತ್ತಿರುವುದರಿಂದ ದಟ್ಟಣೆ ಮತ್ತಷ್ಟು ಹೆಚ್ಚಾಗುತ್ತಿದೆ. 'ನಮ್ಮ ಮೆಟ್ರೊ' ಕಾಮಗಾರಿ ಇನ್ನೂ ಎರಡು ವರ್ಷ ಮುಂದುವರಿಯುವುದರಿಂದ ಇಲ್ಲಿನ ಒಆರ್‌ಆರ್‌ನಲ್ಲಿ ಸಂಚಾರ ದಟ್ಟಣೆ ನಿಭಾಯಿಸುವುದು ತಲೆನೋವಾಗಿದೆ. ದೊಡ್ಡ ದೊಡ್ಡ ಟೆಕ್ ಪಾರ್ಕ್‌ಗಳು ಹಾಗೂ ಮಾಹಿತಿ ತಂತ್ರಜ್ಞಾನ ಕಂಪನಿಗಳು ಒಆರ್‌ಆರ್ ಆಸುಪಾಸಿನಲ್ಲೇ ಕಚೇರಿಗಳನ್ನು ಹೊಂದಿವೆ. ಒಆರ್‌ಆರ್ ಆಸುಪಾಸಿನ


ಹೊರವರ್ತುಲ ರಸ್ತೆಯಲ್ಲಿ ಸಂಚಾರ ದಟ್ಟಣೆ (ಸಂಗ್ರಹ ಚಿತ್ರ)

ವರ್ತುಲ ರಸ್ತೆಯೇ ಚಕ್ರವ್ಯೂಹ 3

ಕಂಪನಿಗಳು ಲಾಕ್‌ಡೌನ್ ತೆರವುಗೊಂಡ ಬಳಿಕ ಉದ್ಯೋಗಿಗಳನ್ನು ಕಚೇರಿಗೆ ಕರೆಸಿಕೊಳ್ಳುತ್ತಿವೆ. ಇದರಿಂದಾಗಿ ಹೊರ ವರ್ತುಲ ರಸ್ತೆಯಲ್ಲಿ ಮತ್ತೆ ದಟ್ಟಣೆ ಕಾಣಿಸಿಕೊಳ್ಳುತ್ತಿದೆ.

'ಐ.ಟಿ ಕಂಪನಿಗಳು ತಮ್ಮ ಉದ್ಯೋಗಿಗಳು ಮನೆಯಿಂದಲೇ ಕೆಲಸ ಮಾಡುವ ಅವಕಾಶ ಕಲ್ಪಿಸಿದ್ದರಿಂದ ಒಆರ್‌ಆರ್‌ನಲ್ಲಿ ಸಂಚಾರ ದಟ್ಟಣೆ ಸಮಸ್ಯೆ ತಹಬಂದಿಗೆ ಬಂದಿತ್ತು. ಇಲ್ಲಿ ಈಗ ನಮ್ಮ ಮೆಟ್ರೊ ಕಾಮಗಾರಿಯೂ ನಡೆಯುತ್ತಿರುವುದರಿಂದ ಸಂಚಾರ ದಟ್ಟಣೆ ಸಮಸ್ಯೆ ನಿಭಾಯಿಸುವುದು ಕ್ಲಿಷ್ಟಕರವಾಗಿದೆ. ಐ.ಟಿ.ಕಂಪನಿಗಳು ಉದ್ಯೋಗಿಗಳನ್ನು ಕಚೇರಿಗೆ ಕರೆಸಿಕೊಂಡರೆ ಈಗ ಮತ್ತೆ ಸಂಚಾರ ಸಮಸ್ಯೆ ಉಲ್ಬಣವಾಗಲಿದೆ. ಹಾಗಾಗಿ ಐಟಿ ಉದ್ಯೋಗಿಗಳು ಮನೆಯಿಂದಲೇ ಕೆಲಸ ಮಾಡುವ ಅವಕಾಶವನ್ನು 2022 ಡಿಸೆಂಬರ್‌ವರೆಗೆ ಅಥವಾ ನಂತರವೂ ವಿಸ್ತರಿಸಬೇಕು' ಎಂದು ಕೋರಿ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ ಅವರು ನಾಸ್ಕಾಂನ ಪ್ರಾದೇಶಿಕ ನಿರ್ದೇಶಕರಿಗೆ ಇತ್ತೀಚೆಗೆ ಪತ್ರ ಬರೆದಿದ್ದಾರೆ.

'ಇಲ್ಲಿನ ಸಂಚಾರ ಸಮಸ್ಯೆ ನಿವಾರಣೆಗೆ ಸಮೂಹ ಸಾರಿಗೆ ಹಾಗೂ ಸೈಕಲ್ ಬಳಕೆಗೆ ಉತ್ತೇಜನ ನೀಡಿದರೆ ಇನ್ನೂ ಅನುಕೂಲ. ಇದಕ್ಕೆ ಪೂರಕವಾಗಿ ಕೆಲಸದ ಅವಧಿಯಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಬೇಕು, ಕಚೇರಿಗೆ ಬರಲೇ ಬೇಕಾದ ಸಿಬ್ಬಂದಿ ಬಸ್‌ಗಳಲ್ಲಿ ಸಂಚರಿಸಲು ಹುರಿದುಂಬಿಸಬೇಕು. ಬಸ್ ಆದ್ಯತಾ ಪಥಗಳಲ್ಲಿ ಬಿಎಂಟಿಸಿ ಹಾಗೂ ಇತರ ಸಂಸ್ಥೆಗಳ ಬಸ್‌ಗಳ ಸಂಚಾರಕ್ಕೆ ಅವಕಾಶ ನೀಡುವುದರಿಂದ ಅವರ ಪ್ರಯಾಣದ ಅವಧಿಯೂ ಕಡಿತವಾಗಲಿದೆ' ಎಂದು ಅವರು ಸಲಹೆ ನೀಡಿದ್ದಾರೆ.

ನಿತ್ಯ 90 ನಿಮಿಷ ರಸ್ತೆಯಲ್ಲೇ ನಷ್ಟ?

ಕೆ.ಆರ್.ಪುರದಿಂದ- ಸಿಲ್ಕ್ ಬೋರ್ಡ್‌ವರೆಗಿನ ಹೊರವರ್ತುಲ ರಸ್ತೆಯಲ್ಲಿ ಕೋವಿಡ್ ಪೂರ್ವ ಸನ್ನಿವೇಶದಲ್ಲಿ ಸಂಚಾರ ದಟ್ಟಣೆ ಸಮಸ್ಯೆಯಿಂದಾಗಿ ಒಂದು ವರ್ಷದಲ್ಲಿ ಆಗುತ್ತಿದ್ದ ಒಟ್ಟು ನಷ್ಟದ ಪ್ರಮಾಣವೆಷ್ಟು ಗೊತ್ತೇ? ₹ 20,713 ಕೋಟಿ!

ಕೆ.ಆರ್.ಪುರ–ಸಿಲ್ಕ್‌ಬೋರ್ಡ್ ವರೆಗೆ ಮೆಟ್ರೊ ಮಾರ್ಗದ ವಿಸ್ತೃತ ಯೋಜನಾ ವರದಿಯಲ್ಲಿ (ಡಿಪಿಆರ್) ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಒಆರ್‌ಆರ್‌ನ ದಟ್ಟಣೆ ಸಮಸ್ಯೆ ಹಾಗೂ ಅದರ ಆಸುಪಾಸಿನ ಆರ್ಥಿಕ ಚಟುವಟಿಕೆಯ ಸಮಗ್ರ ವಿಶ್ಲೇಷಣೆ ನಡೆಸಿತ್ತು. ಅದರ ಪ್ರಕಾರ ಹೊರವರ್ತುಲ ರಸ್ತೆಯಲ್ಲಿ ಕ್ಷಿಪ್ರ ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ, ಒಬ್ಬ ಉದ್ಯೋಗಿ ನಿತ್ಯ 2ರಿಂದ 4 ತಾಸು ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಳ್ಳಬೇಕಾಗುತ್ತದೆ. ಇದರಿಂದ ನಿತ್ಯ ಸರಾಸರಿ 90 ನಿಮಿಷ ಕೆಲಸದ ಅವಧಿ ನಷ್ಟವಾಗುತ್ತದೆ ಎಂದು ಅಂದಾಜಿಸಲಾಗಿತ್ತು.

ಒಬ್ಬ ಉದ್ಯೋಗಿ ವರ್ಷದಲ್ಲಿ ಕೆಲಸ ಮಾಡುವ ಸರಾಸರಿ ಅವಧಿ 2,115 ತಾಸು. ದಿನಕ್ಕೆ 90 ನಿಮಿಷದ ಪ್ರಕಾರ ಒಬ್ಬ ಉದ್ಯೋಗಿ ವರ್ಷದಲ್ಲಿ ಸರಾಸರಿ 352.5 ತಾಸು ಕೆಲಸದ ಅವಧಿಯನ್ನು ಹೊರ ವರ್ತುಲ ನಷ್ಟವಾಗುತ್ತದೆ. ಈ ಆಧಾರದಲ್ಲಿ ಒಟ್ಟು ₹ 20,713 ಕೋಟಿ ವಾರ್ಷಿಕ ನಷ್ಟಕ್ಕೆ ಸಂಚಾರ ದಟ್ಟಣೆ ಸಮಸ್ಯೆ ಕಾರಣವಾಗುತ್ತಿದೆ ಎಂದು ಬಿಎಂಆರ್‌ಸಿಎಲ್ ಲೆಕ್ಕಾಚಾರ ಹಾಕಿತ್ತು. 2015ರಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ಯಮಗಳಿಂದ ದೇಶವು ಗಳಿಸಿದ್ದ ವರಮಾನದಲ್ಲಿ (₹ 9.70 ಲಕ್ಷ ಕೋಟಿ) ಬೆಂಗಳೂರಿನ ಸಂಸ್ಥೆಗಳ ಪಾಲನ್ನು (₹ 3.83 ಲಕ್ಷ ಕೋಟಿ) ಆಧರಿಸಿ ಈ ಅಂದಾಜನ್ನು ಲೆಕ್ಕ ಹಾಕಲಾಗಿತ್ತು.

ನಗರದಲ್ಲಿ 4 ಕೋಟಿ ಚದರ ಅಡಿಗಳಷ್ಟು ವಾಣಿಜ್ಯ ಕಚೇರಿ ತಾಣಗಳಿವೆ. ಈ ಪೈಕಿ ಶೇಕಡ 33ರಷ್ಟು (1.32 ಕೋಟಿ ಚದರ ಅಡಿ) ವಾಣಿಜ್ಯ ಕಚೇರಿ ತಾಣಗಳು ಹೊರ ವರ್ತುಲ ರಸ್ತೆಯ ಆಸುಪಾಸಿನಲ್ಲಿವೆ. ಇತ್ತೀಚಿನ ವರ್ಷಗಳಲ್ಲಿ ನಗರದಲ್ಲಿ ಮತ್ತಷ್ಟು ವಾಣಿಜ್ಯ ಕಚೇರಿ ಪ್ರದೇಶಗಳು ಹೆಚ್ಚುವರಿಯಾಗಿ ಸೇರ್ಪಡೆಯಾಗಿವೆ. ಇವುಗಳಲ್ಲಿ ಸಿಂಹಪಾಲು ಹೊರವರ್ತುಲ ರಸ್ತೆಯ ಆಸುಪಾಸಿನ ಪ್ರದೇಶಗಳಲ್ಲೇ ಇದೆ.

ಸುದ್ದಿ 2 ನಿಮಿಷ

ಕೆಳ ಸೇತುವೆ ಕಾಮಗಾರಿಗೆ ಅನುಮತಿ

ಬೆಂಗಳೂರು: ಸುರಂಜನ ದಾಸ್ ರಸ್ತೆಯಲ್ಲಿನ ಕೆಳ ಸೇತುವೆ ಕಾಮಗಾರಿ ಪೂರ್ಣಗೊಳಿಸಲು ಹೈಕೋರ್ಟ್ ಅನುಮತಿ ನೀಡಿದೆ. 10 ಮರಗಳನ್ನು ಕಡಿಯುವುದರಿಂದ ಪರಿಸರಕ್ಕೆ ಹಾನಿಯಾದರೂ, ಇದು ನಗರದ ಅಭಿವೃದ್ಧಿಯ ಗುರಿ ಹೊಂದಿದೆ ಎಂದು ಹೇಳಿದೆ.

ಕಮಾಂಡ್ ಆಸ್ಪತ್ರೆಯಿಂದ ಹೋಪ್ ಫಾರ್ಮ್ ತನಕ ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಿಸುವ ಭಾಗವಾಗಿ ಕೆಳ ಸೇತುವೆ ನಿರ್ಮಿಸಲಾಗುತ್ತಿದೆ. ಕೆಳ ಸೇತುವೆ ನಿರ್ಮಾಣಕ್ಕೆ ನೀಡಿರುವ ಅನುಮತಿಯನ್ನು ಪುನರ್ ಪರಿಶೀಲಿಸುವಂತೆ ಮರ ತಜ್ಞರ ಸಮಿತಿಗೆ ಈ ಹಿಂದಿನ ವಿಚಾರಣೆ ವೇಳೆ ಪೀಠ ತಿಳಿಸಿತ್ತು.

'ಪರಿಸರಕ್ಕೆ ನಷ್ಟ ಉಂಟಾಗುವುದು ನಿಜ. ಆದರೆ, ಬೆಂಗಳೂರು ನಗರದ ಅಭಿವೃದ್ಧಿ ಮತ್ತು ಸಂಚಾರ ದಟ್ಟಣೆ, ರಸ್ತೆ ಅಪಘಾತ ತಡೆಯಲು 10 ಮರಗಳನ್ನು ಕಡಿಯುವುದು ಅನಿವಾರ್ಯ ಎಂದು ತಜ್ಞರ ಸಮಿತಿ ತಿಳಿಸಿದೆ. ಈ ರಸ್ತೆಯಲ್ಲಿ ಆಸ್ಪತ್ರೆಗಳು ಇರುವುದನ್ನೂ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ' ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ ಹೇಳಿತು. ಇಲ್ಲಿ ಕಡಿಯುವ ಮರಗಳಿಗೆ ಬದಲಾಗಿದೆ ಬೇರೆಡೆ ಸಸಿಗಳನ್ನು ಬೆಳೆಸಬೇಕು. ಈ ಸಂಬಂಧ ರಿಜಿಸ್ಟ್ರಾರ್ ಜನರಲ್ ಅವರಿಗೆ ಅನುಸರಣಾ ವರದಿ ಸಲ್ಲಿಸಬೇಕು ಎಂದು ಬಿಬಿಎಂಪಿಗೆ ಪೀಠ ನಿರ್ದೇಶನ ನೀಡಿತು.



ಅಂಗವಿಕಲರ ಅಭಿವೃದ್ಧಿಗೆ ಇನ್ನಷ್ಟು ಕಾರ್ಯಕ್ರಮ- ಸಿ.ಎಂ ಬೊಮ್ಮಾಯಿ

ಬೆಂಗಳೂರು: ಅಂಗವಿಕಲರ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿ ಇನ್ನೂ ಹಲವು ಯೋಜನೆಗಳನ್ನು ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಸೆನ್ಸ್ ಎಸೆನ್ಸ್ ಸಂಸ್ಥೆಯು ವಿಆರ್‌ಎಲ್ ಸಂಸ್ಥೆಯ ಸಹಯೋಗದಲ್ಲಿ ಪ್ರಕಟಿಸಿರುವ 'ಮ್ಯಾಜಿಕಲ್ ಡಾಟ್ಸ್' ಬ್ರೈಲ್ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿದರು.

'ಅಂಗಾಂಗದ ಕೊರತೆ ಬಿಟ್ಟರೆ, ಎಲ್ಲರನ್ನೂ ಮೀರಿಸುವ ಬುದ್ಧಿ ಶಕ್ತಿ ಅವರಿಗೆ. ಸಾಮಾನ್ಯ ಮನುಷ್ಯರು ತಮ್ಮ ಮಿದುಳನ್ನು ಶೇ 20 ಕ್ಕಿಂತ ಹೆಚ್ಚು ಬಳಸುವುದಿಲ್ಲ. ಆದರೆ, ಅಂಗವಿಕಲರ ಬುದ್ಧಿಮತ್ತೆ ನಮ್ಮ ಊಹೆಗೂ ಮೀರಿದ್ದು. ಅದಕ್ಕೆ ಅವರಿಗೆ ಸಂಗೀತ, ಕಲೆ ಸೇರಿ ಹಲವು ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ' ಎಂದು ಬೊಮ್ಮಾಯಿ ಹೇಳಿದರು.

ಕಾರ್ಯಕ್ರಮದಲ್ಲಿ ಅಂಗವಿಕಲ ಪ್ರತಿಭೆ ಬಸವರಾಜ ಉಮ್ರಾಣಿ ಅವರು ಗಣಿತದಲ್ಲಿ ತಮ್ಮ ಅಸಾಧಾರಣ ಪ್ರತಿಭೆಯನ್ನು ಪ್ರದರ್ಶಿಸಿದರು. ಯಶ್ವಿ ಭಂಡಾರಿ, ರೂಪಾಲಿ ದೋಷಿ, ವಿಆರ್‌ಎಲ್ ಸಮೂಹ ಸಂಸ್ಥೆಯ ಆನಂದ್ ಸಂಕೇಶ್ವರ ಮತ್ತು ಇತರರು ಇದ್ದರು.

ಅಸ್ಸಾಂಪ್ರವಾಹ: 3.63ಲಕ್ಷ ಮಂದಿಗೆ ಸಂಕಷ್ಟ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಭಾರಿ ಮಳೆಗೆ ಪ್ರವಾಹ ಪರಿಸ್ಥಿತಿ ತಲೆದೋರಿದ್ದು, ಮಳೆ ಸಂಬಂಧಿ ಅವಘಡಕ್ಕೆ ಸೋಮವಾರ ಇಬ್ಬರು ಬಲಿಯಾಗಿದ್ದಾರೆ. ಪ್ರವಾಹದಿಂದಾಗಿ 17 ಜಿಲ್ಲೆಗಳ ಸುಮಾರು 3.63 ಲಕ್ಷ ಜನರು ಸಂಕಷ್ಟಕ್ಕಿಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬರ್ಪೇಟಾ ಜಿಲ್ಲೆಯ ಚೆಂಗಾದಲ್ಲಿ ಮತ್ತು ಮಯಂಗ್‌ನಲ್ಲಿ ಇಬ್ಬರು ಮಕ್ಕಳು ನೀರುಪಾಲಾಗಿದ್ದಾರೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಪಿಥೋರಗಡ ವರದಿ: ಉತ್ತರಾಖಂಡದ ಪಿಥೋರಗಡ ಜಿಲ್ಲೆಯ ಧರ್ಚುಲಾ ಉಪ ವಿಭಾಗದ ಜುಮ್ಮಾ ಗ್ರಾಮದಲ್ಲಿ ಭಾರಿ ಮಳೆಯಿಂದಾಗಿ ಮೂರು ಮನೆಗಳು ಕುಸಿದುಬಿದ್ದು ಮೂವರು ಮಕ್ಕಳು ಸೇರಿ ಐವರು ಸಾವನ್ನಪ್ಪಿದ್ದಾರೆ. ಹಲವು ಮಂದಿ ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದರು.

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಚುನಾವಣಾ ಆಯೋಗ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಆರಂಭಿಸಿದ್ದು, ಸಮಗ್ರ ಪರಿಷ್ಕೃತ ಪಟ್ಟಿಯ ಕರಡನ್ನು ನ.8 ರಂದು ಪ್ರಕಟಿಸುವುದಾಗಿ ಹೇಳಿದೆ.

ಆಕ್ಷೇಪಣೆಗಳಿದ್ದಲ್ಲಿ ಡಿ.8 ರೊಳಗೆ ಸಲ್ಲಿಸಬಹುದು. ನ.7 ರಿಂದ 28ರವರೆಗೆ ವಿಶೇಷ ಪ್ರಚಾರಾಂದೋಲನ ನಡೆಯಲಿದೆ. ಡಿ.27ರಂದು ಆಕ್ಷೇಪಣೆಗಳ ವಿಲೇವಾರಿ ನಡೆಯಲಿದೆ. ಜನವರಿ 13, 22ರಂದು ಅಂತಿಮ ಪಟ್ಟಿ ಪ್ರಕಟವಾಗಲಿದೆ.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮುಂದೆ ಅಭಿಮಾನಿಗಳ ಪ್ರತಿಭಟನೆ

ರಾಜ್ ಸಿನಿಮಾಗಳ ಶೀರ್ಷಿಕೆ ಮರುಬಳಕೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ರಾಜ್‌ಕುಮಾರ್ ಅವರ ಸಿನಿಮಾಗಳ ಹೆಸರುಗಳನ್ನು ಮರುಬಳಕೆಗೆ ನೀಡಬಾರದು ಎಂದು ಆಗ್ರಹಿಸಿ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಸದಸ್ಯರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮುಂಭಾಗದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಮರುಬಳಕೆ ಮಾಡಲಾದ ಶೀರ್ಷಿಕೆ ಹೊಂದಿದ್ದ ಹೊಸ ಸಿನಿಮಾಗಳ ಪೋಸ್ಟರ್‌ಗಳನ್ನು ಪ್ರದರ್ಶಿಸಿದ ಸದಸ್ಯರು ಈ ರೀತಿ ಶೀರ್ಷಿಕೆ ಮರುಬಳಕೆಗೆ ಅವಕಾಶ ನೀಡಬಾರದು ಎಂದು ಮನವಿಪತ್ರವನ್ನು ವಾಣಿಜ್ಯ ಮಂಡಳಿಗೆ ನೀಡಿದರು.

'ಅಣ್ಣಾವ್ರ ಸಿನಿಮಾಗಳ ಶೀರ್ಷಿಕೆ ಕಥೆಗೆ ಹೊಂದಿಕೊಂಡಿರುವಂತೆ ಇತ್ತು. ಆ ಸಿನಿಮಾಗಳು ಉತ್ತಮ ಸಂದೇಶ ಹೊಂದಿದ್ದವು. ಇಷ್ಟು ಸಂಖ್ಯೆಯ ಅಭಿಮಾನಿಗಳನ್ನು ರಾಜ್‌ಕುಮಾರ್ ಹೊಂದಿದ್ದಾರೆ ಎಂದರೆ ಅದರ ಹಿಂದೆ ಅವರ ದೊಡ್ಡ ತ್ಯಾಗ ಇದೆ. ನಿರ್ಮಾಪಕರು, ನಿರ್ದೇಶಕರು ಈ ಶೀರ್ಷಿಕೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಅಭಿಮಾನಿಗಳಿಗೆ ನೋವಾಗುತ್ತದೆ. ಯಾರೇ ಆದರೂ ಶೀರ್ಷಿಕೆ ಮರುಬಳಕೆ ಮಾಡಿದರೆ ಸಿನಿಮಾ ಚಿತ್ರೀಕರಣಕ್ಕೆ ಮುತ್ತಿಗೆ ಹಾಕುತ್ತೇವೆ. ರಾಜ್ಯದಾದ್ಯಂತ ಹೋರಾಟ ಮಾಡುತ್ತೇವೆ. ಚಿತ್ರಮಂದಿರಗಳ ಮುಂದೆ ಪ್ರತಿಭಟನೆ ಮಾಡುತ್ತೇವೆ' ಎಂದು ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಸದಸ್ಯರು ಎಚ್ಚರಿಕೆ ನೀಡಿದರು.


ರಾಜ್‌ಕುಮಾರ್ ಅವರ ಸಿನಿಮಾದ ಶೀರ್ಷಿಕೆಗಳನ್ನು ಮರುಬಳಕೆಗೆ ನೀಡಬಾರದು ಎಂದು ಆಗ್ರಹಿಸಿ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಸದಸ್ಯರು ಸೋಮವಾರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಮನವಿ ಸಲ್ಲಿಸಿದರು.

'ಶೀರ್ಷಿಕೆ ಮರುಬಳಕೆ ವಿಚಾರದಲ್ಲಿ 10 ವರ್ಷಗಳ ಕಾಲ ಶೀರ್ಷಿಕೆ ಬಳಕೆ ಮಾಡಬಾರದು ಎನ್ನುವ ಯಾವುದೇ ಕಾನೂನು ಇಲ್ಲ. ಇದು ನಾವೇ ಮಾಡಿಕೊಂಡಿರುವ ಒಳ ಒಪ್ಪಂದ. ರಾಜ್‌ಕುಮಾರ್ ಅವರ ಸಿನಿಮಾಗಳ ಶೀರ್ಷಿಕೆ ಇಟ್ಟುಕೊಂಡು ಸಿನಿಮಾದಲ್ಲಿ ಇಲ್ಲಸಲ್ಲದ ವಿಷಯ ಹೇಳಿದರೆ ಎಲ್ಲರಿಗೂ ನೋವಾಗುತ್ತದೆ. ಇದನ್ನು ನಿರ್ದೇಶಕರು, ನಿರ್ಮಾಪಕರೇ ಅರ್ಥಮಾಡಿಕೊಳ್ಳಬೇಕು' ಎಂದು ಮಂಡಳಿಯ ಉಪಾಧ್ಯಕ್ಷ ಉಮೇಶ್ ಬಣಕಾರ್ ಹೇಳಿದರು.

'ರಾಜ್‌ಕುಮಾರ್ ಅವರ ಸಿನಿಮಾಗಳು ಜನಕ್ಕೆ ಉತ್ತಮ ಸಂದೇಶ ನೀಡಿದೆ. ಶೀರ್ಷಿಕೆ ನೋಂದಣಿಗೆ ಬರುವಂತಹ ನಿರ್ಮಾಪಕರೇ ತಿಳಿದುಕೊಳ್ಳಬೇಕು. ಈ ಶೀರ್ಷಿಕೆ ಇಟ್ಟರೆ ಚಿತ್ರಕ್ಕೆ ಸಮಂಜಸವೇ? ರಾಜ್‌ಕುಮಾರ್ ಅವರ ಹೆಸರಿಗೆ ಚ್ಯುತಿ ಬರಬಹುದೇ ಎಂದು ತಿಳಿದುಕೊಳ್ಳಬೇಕು. ರಾಜ್‌ಕುಮಾರ್ ಅವರು ಒಬ್ಬ ಮೇರು ನಟ. ಶೀರ್ಷಿಕೆ ಬಿಟ್ಟುಕೊಡಲು ಸಾಧ್ಯವಿಲ್ಲ ಎಂದರೆ ಕೋರ್ಟ್ ಮೆಟ್ಟಿಲೇರುವ ಸಂದರ್ಭವೂ ಎದುರಾಗಬಹುದು' ಎಂದು ಮಂಡಳಿಯ ಮಾಜಿ ಅಧ್ಯಕ್ಷ ಸಾ.ರಾ. ಗೋವಿಂದ್ ಹೇಳಿದರು.

'ರಾಜ್ಯದಲ್ಲಿ ಮತ್ತೆ ಬಿಜೆಪಿಗೆ ಅಧಿಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ವಿಧಾನಸಭಾ (2023) ಚುನಾವಣೆಯಲ್ಲಿ ಬಿಜೆಪಿ ಬಹುಮತ ಗಳಿಸಿ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಾಲ್ಕು ದಿನಗಳ ರಾಜ್ಯ ಭೇಟಿಗಾಗಿ ಬೆಂಗಳೂರಿಗೆ ಬಂದ ಅವರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜತೆ ಮಾತನಾಡಿದರು.


ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಉತ್ತಮವಾಗಿ ಕೆಲಸ ಮಾಡುತ್ತಿದ್ದು, 2023 ರಲ್ಲೂ ಪಕ್ಷ ಮತ್ತೆ ಅಧಿಕಾರಕ್ಕೆ ಬರಲಿದೆ. ಈ ಬಾರಿ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡುವುದಾಗಿ ಅವರು ತಿಳಿಸಿದರು.

ಸಂಜೆಯೇ ಮೈಸೂರಿಗೆ ಪ್ರಯಾಣ ಬೆಳೆಸಿದ ಅವರು, ಮಂಗಳವಾರ(ಆ.31 ರಂದು) ಬೆಳಿಗ್ಗೆ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಬಳಿಕ ಅವರು ಮೈಸೂರು, ಮೈಸೂರು ಗ್ರಾಮಾಂತರ ಮತ್ತು ಚಾಮರಾಜನಗರ ಜಿಲ್ಲಾ ಮಟ್ಟದ ಪದಾಧಿಕಾರಿಗಳ ಸಭೆ, ಜಿಲ್ಲಾ ಕೋರ್ ಕಮಿಟಿ ಮತ್ತು ಮಂಡಲ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳ ಸಭೆ ನಡೆಸಲಿದ್ದಾರೆ.

ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪ್ರಧಾನ ಕಾರ್ಯದರ್ಶಿ ಸಿದ್ದರಾಜು ವಿಮಾನನಿಲ್ದಾಣದಲ್ಲಿ ಸಿಂಗ್ ಅವರನ್ನು ಬರಮಾಡಿಕೊಂಡರು.

ಡ್ರಗ್ಸ್: ಮಹಿಳಾ ಉದ್ಯಮಿ ವಶಕ್ಕೆ

ಬೆಂಗಳೂರು: ಡ್ರಗ್ಸ್ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದಡಿ ನಗರದಲ್ಲಿ ಮೂವರ ಮನೆಗಳ ಮೇಲೆ ಸೋಮವಾರ ದಾಳಿ ಮಾಡಿದ್ದ ಗೋವಿಂದಪುರ ಪೊಲೀಸರು, ಮಹಿಳಾ ಉದ್ಯಮಿ ಸೇರಿ ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ.


ವಚನ್


ಸೋನಿಯಾ

'ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ನೈಜೀರಿಯಾದ ಥಾಮಸ್ ಕಲ್ಲು ಎಂಬಾತನನ್ನು ಆಗಸ್ಟ್ 12ರಂದು ಪೊಲೀಸರು ಬಂಧಿಸಿದ್ದರು. ಆತನ ವಿಚಾರಣೆಯಿಂದ ದೊರೆತ ಮಾಹಿತಿ ಆಧರಿಸಿ ತನಿಖೆ ಮುಂದುವರಿದಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಸೌಂದರ್ಯ ವರ್ಧಕ ಮಾರಾಟ ಕಂಪನಿ ಮಾಲೀಕರಾದ ಸೋನಿಯಾ ಅಗರವಾಲ್ ಅವರ ರಾಜಾಜಿನಗರದಲ್ಲಿರುವ ಮನೆ, ಡಿ.ಜೆ. (ಡಿಸ್ಕೊ ಜಾಕಿ) ವಚನ್ ಚಿನ್ನಪ್ಪ ಅವರ ಬೆನ್ಸನ್ ಟೌನ್‌ನಲ್ಲಿರುವ ಮನೆ ಹಾಗೂ ಉದ್ಯಮಿ ಭರತ್ ಅವರ ಬನಶಂಕರಿಯಲ್ಲಿರುವ ಮನೆ ಮೇಲೆ ಇನ್‌ಸ್ಪೆಕ್ಟರ್ ನೇತೃತ್ವದ ತಂಡಗಳು ದಾಳಿ ಮಾಡಿದ್ದವು' ಎಂದೂ ತಿಳಿಸಿದರು.

'ದಾಳಿಯಲ್ಲಿ ಸಿಕ್ಕ ಕೆಲ ಪುರಾವೆಗಳನ್ನು ಆಧರಿಸಿ ರೂಪದರ್ಶಿಯೂ ಆಗಿರುವ ಸೋನಿಯಾ ಹಾಗೂ ವಚನ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಅಧಿಕಾರಿ ಹೇಳಿದರು.

ಡ್ರಗ್ಸ್ ಪೆಡ್ಲರ್ ಜೊತೆ ಸಂಪರ್ಕ: 'ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ ಪೆಡ್ಲರ್ ಜೊತೆ ಸಂಪರ್ಕವಿಟ್ಟುಕೊಂಡಿದ್ದ ಆರೋಪ ಮೂವರ ಮೇಲಿದೆ. ಆ ಬಗ್ಗೆ ಮಾಹಿತಿ ಕಲೆಹಾಕಲು ನ್ಯಾಯಾಲಯದ ಅನುಮತಿ ಪಡೆದು ಮನೆಗಳ ಮೇಲೆ ದಾಳಿ ಮಾಡಲಾಗಿದೆ' ಎಂದರು.

'ಸಿಸಿಬಿ ಪೊಲೀಸರು ಬಯಲು ಮಾಡಿದ್ದ ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣದಲ್ಲೂ ಥಾಮಸ್ ಕಲ್ಲು ಹೆಸರು ಕೇಳಿಬಂದಿತ್ತು. ಡ್ರಗ್ಸ್ ಸೇವನೆ ಆರೋಪದಡಿ ಆತನನ್ನು ಬಂಧಿಸಿದ್ದ ಕೆ.ಆರ್.ಪುರ ಪೊಲೀಸರು ಜೈಲಿಗೆ ಕಳುಹಿಸಿದ್ದರು. ಹೀಗಾಗಿ, ಆತನನ್ನು ವಿಚಾರಣೆ ನಡೆಸಲು ಸಿಸಿಬಿ ಪೊಲೀಸರಿಗೆ ಸಾಧ್ಯವಾಗಿರಲಿಲ್ಲ' ಎಂದೂ ತಿಳಿಸಿದರು.

ವಾಹನ ಡಿಕ್ಕಿ: ಬೆಂಗಳೂರಿನ ಮೂವರು ಸಾವು

ಉಪ್ಪಿನಂಗಡಿ: ರಾಷ್ಟ್ರೀಯ ಹೆದ್ದಾರಿ 75ರ ಬಜತ್ತೂರು ಗ್ರಾಮದ ಬೆದ್ರೋಡಿ ಬಳಿ ಕೆಟ್ಟು ನಿಂತಿದ್ದ ಲಾರಿಗೆ ಸೋಮವಾರ ಪಿಕ್‌ಅಪ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಲಾರಿ ದುರಸ್ತಿ ಮಾಡುತ್ತಿದ್ದ ಮೂವರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಅಬ್ದುಲ್ ರಹಿಮಾನ್ (23), ಮಧು (33) ಮತ್ತು ಅಬ್ಬಾನ್ (33) ಮೃತರು. ಲಾರಿಯ ಚಾಲಕ ಶಿವಮೊಗ್ಗದ ಆಸಿಫ್ ಲಾರಿಯ ಒಳಗಡೆ ಕುಳಿತಿದ್ದರಿಂದ ಪಾರಾಗಿದ್ದಾರೆ.

ಬೆಂಗಳೂರಿನಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಲಾರಿ, 2 ದಿನಗಳ ಹಿಂದೆ ಕೆಟ್ಟು ನಿಂತಿದ್ದು, ಈ ಲಾರಿಗೆ ಸಂಬಂಧಿಸಿದ ಕಂಪನಿಯ ಮತ್ತೊಂದು ಲಾರಿಯ ಚಾಲಕನಾಗಿರುವ ಮಧು, ಬೆಂಗಳೂರಿನಿಂದ ಮೆಕ್ಯಾನಿಕ್‌ಗಳಾದ ಅಬ್ದುಲ್ ರಹಿಮಾನ್ ಮತ್ತು ಅಬ್ಬಾನ್‌ರನ್ನು ಕರೆದುಕೊಂಡು ಬಂದು, ಮೂವರು ಸೇರಿಕೊಂಡು ಲಾರಿ ದುರಸ್ತಿ ಮಾಡುತ್ತಿದ್ದರು.

ಪಿಕ್‌ಅಪ್ ವಾಹನ ಲಾರಿಗೆ ಡಿಕ್ಕಿ ಹೊಡೆದು ಈ ದುರಂತ ಸಂಭವಿಸಿದೆ.

ಮದುವೆ ನಿರಾಕರಣೆ: ಮಹಿಳೆ ಕೊಲೆ

ಬೆಂಗಳೂರು: ಕೆಂಗೇರಿ ಠಾಣೆಯ ವ್ಯಾಪ್ತಿಯಲ್ಲಿ ಅನಿತಾ (23) ಎಂಬುವವರನ್ನು ಕತ್ತು ಕೊಯ್ದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಅವರ ಸಹೋದ್ಯೋಗಿ ವೆಂಕಟೇಶ್ (27) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ದೊಡ್ಡಬೆಲೆ ರಸ್ತೆಯ ಬೃಂದಾವನ ಬಡಾವಣೆಯಲ್ಲಿ ಸೋಮವಾರ ಬೆಳಿಗ್ಗೆ ಈ ಕೊಲೆ ನಡೆದಿದೆ. ಪ್ರತ್ಯಕ್ಷದರ್ಶಿಗಳು ನೀಡಿದ್ದ ಮಾಹಿತಿ ಆಧರಿಸಿ ಆರೋಪಿ ವೆಂಕಟೇಶ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ವಿವಾಹಿತ ಮಹಿಳೆ ಅನಿತಾ ಜೊತೆ ಸ್ನೇಹ ಹೊಂದಿದ್ದ ಆರೋಪಿ, ತನ್ನನ್ನು ಮದುವೆಯಾಗುವಂತೆ ಒತ್ತಾಯಿಸುತ್ತಿದ್ದ. ಅದಕ್ಕೆ ಆಕೆ ಒಪ್ಪಿರಲಿಲ್ಲ. ಅಷ್ಟಕ್ಕೆ ಸಿಟ್ಟಾದ ಆರೋಪಿ, ಚಾಕುವಿನಿಂದ ಕತ್ತು ಕೊಯ್ದು ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದೂ ತಿಳಿಸಿದರು.

3 ವರ್ಷಗಳಿಂದ ಪರಿಚಯ: 'ಆಂಧ್ರದ ಅನಿತಾ, ಕೌಟುಂಬಿಕ ಕಲಹದಿಂದ ಪತಿಯಿಂದ ದೂರವಾಗಿದ್ದರು, ಕೆಲಸಕ್ಕಾಗಿ 3 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ಅವರು ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದರು. ಸ್ನೇಹಿತೆಯರ ಜೊತೆ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಕಂಪನಿಯಲ್ಲಿ ಸಹೋದ್ಯೋಗಿ ವೆಂಕಟೇಶ್ ಪರಿಚಯವಾಗಿ, ಸ್ನೇಹ ಸಲುಗೆ ತಿರುಗಿತ್ತು ಎನ್ನಲಾಗುತ್ತಿದೆ' ಎಂದೂ ಅಧಿಕಾರಿ ಹೇಳಿದರು.


ಅನಿತಾ


ವೆಂಕಟೇಶ್

ಬೇರೆ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದ ಆರೋಪಿ, ಆಗಾಗ ಅನಿತಾ ಅವರನ್ನು ಭೇಟಿಯಾಗುತ್ತಿದ್ದ. ಈ ವಿಷಯ ತಿಳಿದು ಮಗಳಿಗೆ ತಂದೆ ಎಚ್ಚರಿಕೆ ನೀಡಿದ್ದರು. ಹಾಗಾಗಿ ಯುವತಿ, 'ನನ್ನ ತಂಟೆಗೆ ಬರಬೇಡ. ಮಾತನಾಡಿಸಬೇಡ' ಎಂದಿದ್ದರು. ಕೋಪಗೊಂಡ ಆರೋಪಿ, ಕೊಲೆ ಮಾಡಲು ಸಂಚು ರೂಪಿಸಿದ್ದ' ಎಂದರು.

₹ 80ಕ್ಕೆ ಚಾಕು ಖರೀದಿ: 'ಸೂಪರ್ ಮಾರುಕಟ್ಟೆಯಲ್ಲಿ ₹ 80 ಕೊಟ್ಟು ಚಾಕು ಖರೀದಿಸಿದ್ದ ಆರೋಪಿ ಸೋಮವಾರ ಬೆಳಿಗ್ಗೆ 7 ಗಂಟೆ ಸುಮಾರಿಗೆ ಕಂಪನಿಯತ್ತ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಅನಿತಾ ಅವರನ್ನು ಅಡ್ಡಗಟ್ಟಿ, ದಾಳಿ ಮಾಡಿ ಚಾಕುವಿನಿಂದ ಕತ್ತು ಕೊಯ್ದಿದ್ದ. ಕುಸಿದು ಬಿದ್ದಿದ್ದ ಅನಿತಾ ಅವರನ್ನು ಆರೋಪಿ, ಸ್ಥಳೀಯರ ಜೊತೆಯಲ್ಲಿ ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದ. ಚಿಕಿತ್ಸೆಗೆ ಸ್ಪಂದಿಸದೇ ಅನಿತಾ ಅಸುನೀಗಿದರು' ಎಂದೂ ತಿಳಿಸಿದರು.

ಆಸ್ಪತ್ರೆಗೆ ದಾಖಲಾಗಲು ವಾಜೆಗೆ ಅನುಮತಿ

ಮುಂಬೈ(ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ನಿವಾಸದ ಬಳಿ ಪತ್ತೆಯಾದ ಸ್ಫೋಟಕಗಳ ಪ್ರಕರಣ ಸಂಬಂಧ ವಜಾಗೊಂಡಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ಎನ್‌ಐಎ ವಶಕ್ಕೆ ಒಪ್ಪಿಸಲು ವಿಶೇಷ ನ್ಯಾಯಾಲಯ ಸೋಮವಾರ ನಿರಾಕರಿಸಿದೆ.

ಹೃದ್ರೋಗ ಸಂಬಂಧ ಖಾಸಗಿ ಆಸ್ಪತ್ರೆಗೆ ದಾಖಲಾಗಲು ಅನುಮತಿ ನೀಡಬೇಕು ಎಂದು ವಾಜೆ ಕೋರಿಕೆಯನ್ನು ನ್ಯಾಯಾಲಯ ಅಂಗೀಕರಿಸಿದೆ.

ವಿಮಾನದಲ್ಲಿ ಬಂದು ಮನೆಗಳಲ್ಲಿ ಕಳ್ಳತನ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಮಾನದಲ್ಲಿ ಬಂದು ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿ ಪರಾರಿಯಾಗುತ್ತಿದ್ದ ಹೊರ ರಾಜ್ಯದ ಮೂವರು ಆರೋಪಿಗಳನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಪಶ್ಚಿಮ ಬಂಗಾಳದ ಬಿಲಾಲ್ ಮಂಡಲ (33), ಮಹಾರಾಷ್ಟ್ರದ ಸಲೀಂ ರಫೀಕ್ ಶೇಖ್ (43) ಹಾಗೂ ಬಿಹಾರದ ಮೊಹಮ್ಮದ್ ಜಾಲಿಕ್ (36) ಬಂಧಿತರು. ಅವರಿಂದ ₹ 1.80 ಕೋಟಿ ಮೌಲ್ಯದ ಆಭರಣ ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕೆಲಸದ ಸ್ಥಳದಲ್ಲಿ ಪರಿಚಯವಾಗಿದ್ದ ಆರೋಪಿಗಳು, ತಮ್ಮದೇ ತಂಡ ಕಟ್ಟಿಕೊಂಡು ಕಳ್ಳತನ ಮಾಡುತ್ತಿದ್ದರು. ಇವರ ಬಂಧನದಿಂದ 24 ಪ್ರಕರಣಗಳು ಪತ್ತೆಯಾಗಿವೆ' ಎಂದರು.

'ತಮ್ಮೂರಿನಿಂದ ವಿಮಾನದಲ್ಲಿ ಬೆಂಗಳೂರಿಗೆ ಬರುತ್ತಿದ್ದ ಆರೋಪಿಗಳು ಇಲ್ಲಿಯ ಬಾಡಿಗೆ ಮನೆಗಳಲ್ಲಿ ವಾಸವಿರುತ್ತಿದ್ದರು. ನಗರದಲ್ಲಿ ಸುತ್ತಾಡಿ, ಅಂಗಳದಲ್ಲಿ ಕಸ ಬಿದ್ದಿರುತ್ತಿದ್ದ ಹಾಗೂ ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದರು. ರಾತ್ರಿ ವೇಳೆ ಮನೆಗಳ ಬಾಗಿಲು ಮೀಟಿ ಒಳನುಗ್ಗಿ ಕಳ್ಳತನ ಮಾಡುತ್ತಿದ್ದರು' ಎಂದೂ ತಿಳಿಸಿದರು.

ಕ್ಯಾಮೆರಾ ಸುಳಿವು: 'ಕನಕಪುರ ರಸ್ತೆಯ ಮನೆಯೊಂದರಲ್ಲಿ ಇತ್ತೀಚೆಗೆ ಕಳ್ಳತನ ಆಗಿತ್ತು. ಆ ಬಗ್ಗೆ ಪ್ರಕರಣ ದಾಖಲಾಗಿತ್ತು. ಮನೆ ಹಾಗೂ ಸುತ್ತಮುತ್ತಲ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗಿತ್ತು. ಅದರ ದೃಶ್ಯದಿಂದ ಆರೋಪಿಗಳ ಸುಳಿವು ಸಿಕ್ಕಿತ್ತು' ಎಂದೂ ಅಧಿಕಾರಿ ಹೇಳಿದರು.

'3 ಕೆ.ಜಿ 286 ಗ್ರಾಂ ಚಿನ್ನಾಭರಣ, 18 ಕೆ.ಜಿ. ಬೆಳ್ಳಿ ಸಾಮಗ್ರಿ, ₹ 46,700 ನಗದು, ದ್ವಿಚಕ್ರ ವಾಹನ, 24ವಾಚ್‌ಗಳು ಹಾಗೂ ಲ್ಯಾಪ್‌ಟಾಪ್ ಜಪ್ತಿ ಮಾಡ ಲಾಗಿದೆ. ಕದ್ದ ಆಭರಣಗಳನ್ನು ಆರೋ ಪಿಗಳು, ಮಹಾರಾಷ್ಟ್ರ, ಆಂಧ್ರದಲ್ಲಿ ಮಾರಿದ್ದರು. ಕೆಲ ಆಭರಣಗಳನ್ನು ಮುತ್ತೂಟ್ ಫೈನಾನ್ಸ್‌ನಲ್ಲಿ ಅಡವಿಟ್ಟಿದ್ದರು' ಎಂದರು.

'ಕಳ್ಳತನದ ಹಣದಲ್ಲಿ ಆರೋಪಿಗಳು, ಐಷಾರಾಮಿ ಜೀವನ ನಡೆಸುತ್ತಿದ್ದರು. ತಮ್ಮೂರಿನಲ್ಲಿ ಶ್ರೀಮಂತರೆಂದು ಗುರುತಿಸಿಕೊಂಡಿದ್ದ ಅವರು, ಬೆಂಗಳೂರಿನಲ್ಲಿ ವ್ಯಾಪಾರ ಮಾಡುತ್ತಿರುವುದಾಗಿ ಸ್ಥಳೀಯರಿಗೆ ಹೇಳುತ್ತಿದ್ದರು' ಎಂದರು.

ಬಾರ್‌ಗೆ ನುಗ್ಗಿ, ಲಾಂಗ್ ತೋರಿಸಿ ಬೆದರಿಕೆ

ಬನಶಂಕರಿ ಬಳಿಯ ಇಟ್ಟಮಡುವಿನಲ್ಲಿರುವ 'ಎಸ್‌ಎಲ್ವಿ' ಬಾರ್ ಆ್ಯಂಡ್ ರೆಸ್ಟೋರೆಂಟ್‌ಗೆ ನುಗ್ಗಿದ್ದ ಅಪರಿಚಿತ ಯುವಕನೊಬ್ಬ, ಲಾಂಗ್ ತೋರಿಸಿ ಗ್ರಾಹಕರಿಗೆ ಜೀವ ಬೆದರಿಕೆ ಹಾಕಿರುವ ಘಟನೆ ಭಾನುವಾರ ಸಂಜೆ ನಡೆದಿದೆ.

ಘಟನೆಯ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅದನ್ನು ಆಧರಿಸಿ ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಬಾರ್‌ನಲ್ಲಿ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಒಳಗೆ ನುಗ್ಗಿದ್ದ ಇಬ್ಬರು ಯುವಕರು, ಪ್ರತಿಯೊಬ್ಬ ಗ್ರಾಹಕರನ್ನು ಮಾತನಾಡಿಸಿದ್ದರು. ಒಬ್ಬಾತ ಲಾಂಗ್ ಹಿಡಿದು ಗ್ರಾಹಕರಿಗೆ ತೋರಿಸಿ ಜೀವ ಬೆದರಿಕೆ ಹಾಕಿದ್ದ. ನಂತರ, ಕೂಗಾಡುತ್ತಲೇ ಬಾರ್‌ನಿಂದ ಹೊರಟು ಹೋಗಿದ್ದಾನೆ. ಈ ದೃಶ್ಯ ವಿಡಿಯೊದಲ್ಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲ ಗ್ರಾಹಕರು ಹಾಗೂ ಬಾರ್ ಸಿಬ್ಬಂದಿಯಿಂದ ಹೇಳಿಕೆ ಪಡೆಯಲಾಗಿದೆ. ಸ್ಥಳೀಯ ಯುವಕ ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದೂ ತಿಳಿಸಿವೆ.

ಸಯ್ಯದ್ ಇಸಾಕ್ ಅವರಿಗೆ ಗೋಪಾಲಕೃಷ್ಣ ಅಡಿಗ ಪುಸ್ತಕ ಪರಿಚಾರಕ ಪ್ರಶಸ್ತಿ ಪ್ರದಾನ

'ರಾಜ್ ಸಿನಿಮಾ ನೋಡಿ ಕನ್ನಡ ಕಲಿತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟ ಡಾ.ರಾಜ್‌ಕುಮಾರ್ ಅವರ ಸಿನಿಮಾಗಳು ಮುಂದಿನ ಪೀಳಿಗೆಗೆ ಉತ್ತಮ ಸಂದೇಶಗಳನ್ನು ನೀಡುತ್ತಿದ್ದವು. ಶುದ್ಧ ಕನ್ನಡ ಹೇಗೆ ಮಾತನಾಡಬೇಕು ಎಂಬುದನ್ನು ಅವರು ತೋರಿಸಿಕೊಟ್ಟಿದ್ದರು. ನನಗೆ ಕನ್ನಡದ ಮೇಲೆ ಅಭಿಮಾನ ಹೆಚ್ಚಲು ಅವರ ಸಿನಿಮಾಗಳೇ ಕಾರಣ' ಎಂದು ಮೈಸೂರು ಕನ್ನಡ ಗ್ರಂಥಾಲಯದ ಸ್ಥಾಪಕ ಸಯ್ಯದ್ ಇಸಾಕ್ ಹೇಳಿದರು.

ಕನ್ನಡ ಪ್ರಕಾಶಕರ ಸಂಘವು ವಿಜಯನಗರದ ಜ್ಞಾನಯೋಗ ಮಂದಿರದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಂ.ಗೋಪಾಲಕೃಷ್ಣ ಅಡಿಗ ಪುಸ್ತಕ ಪರಿಚಾರಕ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

'ಕನ್ನಡಕ್ಕೆ ಏನಾದರೂ ಮಾಡಬೇಕು ಎಂಬ ತುಡಿತದೊಂದಿಗೆ 2010ರಲ್ಲಿ ಪುಟ್ಟ ಗುಡಿಸಿಲಿನಲ್ಲಿ ಎರಡು ಕನ್ನಡ ಪತ್ರಿಕೆಗಳನ್ನು ತಂದಿಟ್ಟೆ. ಇದು ಗ್ರಂಥಾಲಯದ ರೂಪ ಪಡೆದ ನಂತರ ಮಾಧ್ಯಮಗಳು ಪ್ರಚಾರ ನೀಡಿದವು. ಇದರಿಂದ ಕೆಲವರು ಉಚಿತವಾಗಿ ಪುಸ್ತಕಗಳನ್ನು ನೀಡಲು ಪ್ರಾರಂಭಿಸಿದರು. ಪುಸ್ತಕಗಳ ಸಂಖ್ಯೆ 7 ಸಾವಿರ ಮೀರಿತು. ಓದುಗರ ಸಂಖ್ಯೆಯೂ ಹೆಚ್ಚಾಯಿತು' ಎಂದರು.

'ಗ್ರಂಥಾಲಯವಿದ್ದ ಪ್ರದೇಶದಲ್ಲಿ ಉರ್ದು ಮಾತನಾಡುವವರೇ ಹೆಚ್ಚಾಗಿದ್ದರಿಂದ ಭಾರಿ ವಿರೋಧ ವ್ಯಕ್ತವಾಯಿತು. ಅಲ್ಲಿ ಅವಿದ್ಯಾವಂತರೇ ಹೆಚ್ಚಿದ್ದರು. ಗ್ರಂಥಾಲಯದ ಫಲಕಕ್ಕೆ ಮಸಿ ಬಳಿಯುತ್ತಿದ್ದರು. ಆದರೂ ನನ್ನ ಶ್ರಮಕ್ಕೆ ಕೊನೆಗೆ ಫಲ ಸಿಕ್ಕಿತು' ಎಂದರು.


ಸಮಾರಂಭದಲ್ಲಿ ಸಯ್ಯದ್ ಇಸಾಕ್ ಅವರಿಗೆ 'ಎಂ. ಗೋಪಾಲಕೃಷ್ಣ ಅಡಿಗ ಪುಸ್ತಕ ಪರಿಚಾರಕ ಪ್ರಶಸ್ತಿ' ಹಾಗೂ ಆರ್. ಪೂರ್ಣಿಮಾ ಅವರಿಗೆ 'ನಂಜನಗೂಡು ತಿರುಮಲಾಂಬ ಪ್ರಶಸ್ತಿ' ಪ್ರದಾನ ಮಾಡಲಾಯಿತು. –ಪ್ರಜಾವಾಣಿ ಚಿತ್ರ

'ನಂಜನಗೂಡು ತಿರುಮಲಾಂಬ ಪ್ರಕಾಶನ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದ ಪತ್ರಕರ್ತೆ ಆರ್. ಪೂರ್ಣಿಮಾ, 'ಬಾಲ್ಯವಿವಾಹಕ್ಕೆ ಒಳಗಾಗಿ ಚಿಕ್ಕ ವಯಸ್ಸಿನಲ್ಲಿಯೇ ವಿಧವೆಯಾದ ನಂಜನಗೂಡು ತಿರುಮಲಾಂಬ ಅವರು ನಂತರದಲ್ಲಿ ಶಿಕ್ಷಣ ಪಡೆದು, ಪತ್ರಿಕೆ ಹಾಗೂ ಪ್ರಕಾಶನ ರಂಗದಲ್ಲಿ ಅನನ್ಯ ಕೊಡುಗೆ ನೀಡಿದರು. ಅಂತಹವರ ಹೆಸರಿನಲ್ಲಿ ಪ್ರಶಸ್ತಿ ಪಡೆದುಕೊಂಡಿರುವುದು ಸಂತಸ ತಂದಿದೆ' ಎಂದರು.

ಶಾಸಕ ಎಸ್. ಸುರೇಶ್‌ಕುಮಾರ್, 'ನಮ್ಮಲ್ಲಿ ಬಹಳಷ್ಟು 'ಮಾಡೆಲ್'ಗಳಿದ್ದಾರೆ. ಆದರೆ 'ರೋಲ್ ಮಾಡೆಲ್'ಗಳು ತೀರಾ ಕಡಿಮೆ. ಸಯ್ಯದ್ ಇಸಾಕ್ ಅಂಥವರನ್ನು ಗುರುತಿಸಿ ಪ್ರಶಸ್ತಿ ನೀಡಿರುವುದರಿಂದ ಪ್ರಶಸ್ತಿಯ ಮೌಲ್ಯ ಹೆಚ್ಚಿದೆ' ಎಂದರು.

'ಈ ಪ್ರಶಸ್ತಿಗಳ ಮೊತ್ತ ಹೆಚ್ಚಿಸಲು ತಲಾ ₹5 ಸಾವಿರ ನೀಡುತ್ತೇನೆ' ಎಂದು ಘೋಷಿಸಿದರು.

ಸಾಹಿತಿ ಡಾ.ವಸುಂಧರಾ ಭೂಪತಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ, ಪ್ರಧಾನ ಕಾರ್ಯದರ್ಶಿ ನ. ರವಿಕುಮಾರ್ ಉಪಸ್ಥಿತರಿದ್ದರು.

ಖಾತೆ ಬದಲಾವಣೆಗೆ ₹ 1 ಲಕ್ಷ ಲಂಚ ಪಡೆದ ಅಪರಾಧ ಸಾಬೀತು

ಬಿಬಿಎಂಪಿ ಕಂದಾಯ ಅಧಿಕಾರಿಗೆ 4 ವರ್ಷ ಜೈಲು

ಬೆಂಗಳೂರು: ಸ್ಥಿರಾಸ್ತಿಯ ಖಾತೆ ಬದಲಾವಣೆ ಪ್ರಕ್ರಿಯೆ ನಡೆಸಲು ₹ 1 ಲಕ್ಷ ಲಂಚ ಪಡೆದಿದ್ದ ಪ್ರಕರಣದಲ್ಲಿ ಬಿಬಿಎಂಪಿ ಮಹಾಲಕ್ಷ್ಮಿಪುರ ವಾರ್ಡ್ ಸಹಾಯಕ ಕಂದಾಯ ಅಧಿಕಾರಿ ಲಿಂಗಯ್ಯ, ಅಪರಾಧಿ ಎಂದು ಸಾರಿರುವ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ, ನಾಲ್ಕು ವರ್ಷ ಜೈಲು ಶಿಕ್ಷೆ ಮತ್ತು ₹ 3 ಲಕ್ಷ ದಂಡ ವಿಧಿಸಿದೆ.

ತಮ್ಮ ಸ್ನೇಹಿತರ ಸ್ಥಿರಾಸ್ತಿಯೊಂದರ ಖಾತೆ ಬದಲಾವಣೆಗಾಗಿ ಸುಂಕದ ಕಟ್ಟೆಯ ಶ್ರೀಗಂಧದ ಕಾವಲ್ ನಿವಾಸಿಯೊಬ್ಬರು 2017ರ ಮಾರ್ಚ್‌ನಲ್ಲಿ ಬಿಬಿಎಂಪಿಯ ಮಹಾಲಕ್ಷ್ಮಿಪುರ ವಾರ್ಡ್ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಖಾತೆ ಬದಲಾವಣೆ ಪ್ರಕ್ರಿಯೆ ಪೂರ್ಣಗೊಳಿಸಲು ₹ 2.5 ಲಕ್ಷ ಲಂಚ ನೀಡುವಂತೆ ಲಿಂಗಯ್ಯ ಬೇಡಿಕೆ ಇಟ್ಟಿದ್ದರು.

ಅರ್ಜಿದಾರರು ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು. 2017ರ ಮಾರ್ಚ್ 28ರಂದು ₹ 1 ಲಕ್ಷ ಲಂಚ ಪಡೆಯುತ್ತಿದ್ದಾಗ ಸಹಾಯಕ ಕಂದಾಯ ಅಧಿಕಾರಿಯನ್ನು ಎಸಿಬಿ ಬಂಧಿಸಿತ್ತು. ತನಿಖೆ ಪೂರ್ಣಗೊಳಿಸಿದ್ದ ಎಸಿಬಿ ಅಧಿಕಾರಿಗಳು, 2017ರಲ್ಲೇ ಲಿಂಗಯ್ಯ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

3 ವರ್ಷಗಳಿಂದಲೂ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿತ್ತು. ಸೋಮವಾರ ವಿಚಾರಣೆಯನ್ನು ಪೂರ್ಣಗೊಳಿಸಿದ ನ್ಯಾಯಾಧೀಶರು, 'ಲಂಚ ಪ್ರಕರಣದಲ್ಲಿ ಲಿಂಗಯ್ಯ ದೋಷಿ' ಎಂದು ಸಾರಿದರು.

ಅಪರಾಧಿಗೆ 4ವರ್ಷಗಳ ಜೈಲು ಶಿಕ್ಷೆ ಮತ್ತು ₹ 3 ಲಕ್ಷ ದಂಡ ವಿಧಿಸಿ ಆದೇಶ ಹೊರಡಿಸಿದರು.

‘ಪ್ರತಿ ಬುಧವಾರ 10 ಲಕ್ಷ ಜನರಿಗೆ ಲಸಿಕೆ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ರಾಜ್ಯದಾದ್ಯಂತ ಇನ್ನು ಮುಂದೆ ಪ್ರತಿ ಬುಧವಾರ ವಿಶೇಷ ಲಸಿಕಾ ಉತ್ಸವ ಹಮ್ಮಿಕೊಂಡು, ಸುಮಾರು 10 ಲಕ್ಷ ಜನರಿಗೆ ಲಸಿಕೆ ನೀಡಲಾಗುವುದು’ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಆಗಸ್ಟ್ ತಿಂಗಳಲ್ಲಿಯೇ ಕೇಂದ್ರ ಸರ್ಕಾರದಿಂದ 1.10 ಕೋಟಿ ಲಸಿಕೆ ಬಂದಿದೆ. ಸಿ.ಎಂ ಮತ್ತು ನಾನು ಕೇಂದ್ರ ಮಟ್ಟದಲ್ಲಿ ಚರ್ಚಿಸಿದ ಬಳಿಕ ಸಮರ್ಪಕವಾಗಿ ಲಸಿಕೆ ಪೂರೈಕೆ ಆಗುತ್ತಿದೆ’ ಎಂದರು.

‘ಪ್ರತಿ ದಿನ 5 ಲಕ್ಷ ಲಸಿಕೆ ನೀಡಲಾಗುವುದು. ಬುಧವಾರ ಲಸಿಕಾ ಉತ್ಸವದಲ್ಲಿ 10 ಲಕ್ಷ ಜನರಿಗೆ ಹೆಚ್ಚಿಸಲಿದ್ದೇವೆ. ಒಂದು ತಿಂಗಳಲ್ಲಿ ಒಂದೂವರೆಯಿಂದ ಎರಡು ಕೋಟಿ ಜನರಿಗೆ ಲಸಿಕೆ ನೀಡಬಹುದು’ ಎಂದರು.

‘2ನೇ ಡೋಸ್ ಪಡೆದವರು ಶೇ 20ರಷ್ಟು’

‘ಇಡೀ ರಾಜ್ಯದಲ್ಲಿ ಶೇ 20ರಷ್ಟು ಮಂದಿಗೆ, ಬೆಂಗಳೂರಿನಲ್ಲಿ ಶೇ 27ರಷ್ಟು ಜನರಿಗೆ ಮಾತ್ರ ಎರಡನೇ ಡೋಸ್ ಲಸಿಕೆ ನೀಡಲಾಗಿದೆ. ಇಡೀ ದೇಶದಲ್ಲಿ ಲಸಿಕೆ ಕಾರ್ಯ ಪೂರ್ಣಗೊಂಡ ನಗರ ಬೆಂಗಳೂರು ಆಗಬೇಕೆಂಬ ಗುರಿ ಇದೆ’ ಎಂದು ಸುಧಾಕರ್ ಹೇಳಿದರು.

‘ಮೊದಲ ಡೋಸ್ ಪಡೆದಾಗ ನೀಡಿದ ಮೊಬೈಲ್ ಸಂಖ್ಯೆಯನ್ನೇ ಎರಡನೇ ಡೋಸ್‌ಗೂ ನೀಡಬೇಕು. ಇಲ್ಲದಿದ್ದರೆ ಲಸಿಕೆ ಪಡೆದವರ ಪ್ರಮಾಣದ ಬಗ್ಗೆ ಸರಿಯಾದ ಮಾಹಿತಿ ಲಭ್ಯವಾಗುವುದಿಲ್ಲ’ ಎಂದರು.



‘ಇಡೀ ರಾಜ್ಯದಲ್ಲಿ 4 ಕೋಟಿ ಡೋಸ್ ನೀಡಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 1 ಕೋಟಿ ಡೋಸ್ ನೀಡಲಾಗಿದೆ. ಬೀದರ್, ಯಾದಗಿರಿ, ರಾಯಚೂರು, ಕಲಬುರ್ಗಿ ಜಿಲ್ಲೆಗಳಲ್ಲಿ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು. ಕೊಳೆಗೇರಿ ನಿವಾಸಿಗಳಿಗೆ ಪ್ರತಿದಿನ ವಿಶೇಷ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮೊದಲಾದ ಗಡಿಭಾಗದ ಜಿಲ್ಲೆಗಳಲ್ಲಿ ಗಡಿಯಿಂದ 20 ಕಿ.ಮೀ. ವ್ಯಾಪ್ತಿಯ ಗ್ರಾಮಗಳಲ್ಲಿ ಆದ್ಯತೆಯಲ್ಲಿ ಲಸಿಕೆ ನೀಡಲಾಗುವುದು’ ಎಂದರು.

‘ಕೋವಿಡ್ ಸಂಭವನೀಯ ಮೂರನೇ ಅಲೆ ವಿರುದ್ಧ ಹೋರಾಡುವ ಕುರಿತು ಖಾಸಗಿ ಆಸ್ಪತ್ರೆಗಳ ಮತ್ತು ನರ್ಸಿಂಗ್ ಹೋಮ್‌ಗಳ ಅಸೋಸಿಯೇಷನ್ (ಫನಾ) ವರದಿ ನೀಡಿದೆ. ಈ ಬಗ್ಗೆ ತಾಂತ್ರಿಕ ಸಲಹಾ ಸಮಿತಿಯ ಜೊತೆಗೆ ಚರ್ಚಿಸಲಾಗುವುದು’ ಎಂದರು.

ಆರೋಪಿ ಆತ್ಮಹತ್ಯೆ: ಪಿಎಸ್‌ಐ ಸೇರಿ ಐವರು ಅಮಾನತು

ವಿಜಯಪುರ: ಬಾಲಕಿ ಅತ್ಯಾಚಾರ ಪ್ರಕರಣದ ಆರೋಪಿಯು ಸಿಂದಗಿ ಪೊಲೀಸ್ ಠಾಣೆಯಲ್ಲಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿ ಪಿಎಸ್‌ಐ ಹಾಗೂ ನಾಲ್ವರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಲಾಗಿದೆ.

ಪಿಎಸ್‌ಐ ಎಸ್.ಎಸ್. ಹೊಸಮನಿ, ಕಾನ್‌ಸ್ಟೆಬಲ್‌ಗಳಾದ ಎಸ್.ಬಿ.ನಾದ, ಗುರುರಾಜ ಮಾಶ್ಯಾಳ, ಆನಂದ ಪಾಟೀಲ, ಪಿ.ಎಲ್. ಪಟ್ಟೇದ ಅವರನ್ನು ಕರ್ತವ್ಯಲೋಪ ಆರೋಪದಡಿ ಎಸ್‌ಪಿ ಎಚ್.ಡಿ.ಆನಂದಕುಮಾರ್ ಅಮಾನತು ಮಾಡಿದ್ದಾರೆ.

ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿ ಆರೋಪಿ ದೇವಿದಾಸ ಸಂಗೋಳ (37) ಅವರನ್ನು ಶನಿವಾರ ಪೊಲೀಸರು ವಶಕ್ಕೆ ಪಡೆದಿದ್ದರು. ಅವರು ಭಾನುವಾರ ಬೆಳಿಗ್ಗೆ ಶೌಚಾಲಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಶಾಲೆ ಆರಂಭ: ಪ್ರಬುದ್ಧತೆಯ ಹೆಜ್ಜೆ ಇಡಿ– ಫಾನಾ ಸಲಹೆ

ಬೆಂಗಳೂರು: ‘ಶಾಲೆ ಆರಂಭದ ವಿಚಾರದಲ್ಲಿ ಪ್ರಬುದ್ಧತೆಯಿಂದ ಹೆಜ್ಜೆ ಇಡಿ’ ಎಂದು ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್‌ಗಳ ಅಸೋಸಿಯೇಷನ್ (ಫಾನಾ) ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದೆ.

‘ಆನ್‌ಲೈನ್ ತರಗತಿಗಳಿಂದ ಲಕ್ಷಾಂತರ ಮಕ್ಕಳಿಗೆ ಪ್ರಯೋಜನವಾಗಿಲ್ಲ. ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಶಿಕ್ಷಕರು ವಾಟ್ಸ್‌ಆ್ಯಪ್ ಮೂಲಕ ಮಕ್ಕಳಿಗೆ ಕಳಿಸುವ ಸಂದೇಶಗಳಿಂದಲೂ ಪ್ರಯೋಜನವಾಗುತ್ತಿಲ್ಲ. ಈ ದೃಷ್ಟಿಯಿಂದ ಶಾಲೆ ಆರಂಭಿಸುವುದೇನೋ ಸರಿ. ಹಾಗಂತ ತರಾತುರಿಯ ತೀರ್ಮಾನ ಸೂಕ್ತವಲ್ಲ’ ಎಂದು ಫಾನಾ ತಜ್ಞರ ತಂಡದ ವರದಿಯಲ್ಲಿ ತಿಳಿಸಲಾಗಿದೆ.

‘ಕೋವಿಡ್ ಮೂರನೇ ಅಲೆ ಮಕ್ಕಳ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ ಎನ್ನಲಾಗಿದೆ. ಹೀಗಾಗಿ ಆತುರದ ನಿರ್ಧಾರ ಬೇಡ. ಪೋಷಕರು ಹಾಗೂ ಶಿಕ್ಷಕರ ಜೊತೆ ಸಭೆ ನಡೆಸಿ ಅವರ ಅಭಿಪ್ರಾಯಗಳನ್ನು ಆಲಿಸುವುದು ಸೂಕ್ತ’ ಎಂದು ಸಲಹೆ ಮಾಡಿದೆ.

ಮಾಹಿತಿ ಆಯುಕ್ತರ ಹುದ್ದೆ ಭರ್ತಿ: ‘ಸುಪ್ರೀಂ’ ಎಚ್ಚರಿಕೆ

ಮೊದಲ ಪುಟದಿಂದ

ಕರ್ನಾಟಕದ ಪರ ವಕೀಲ ವಿ.ಎನ್. ರಘುಪತಿ, ‘ಮಂಜೂರಾದ ಒಟ್ಟು 10 ಮಾಹಿತಿ ಆಯುಕ್ತರ ಹುದ್ದೆಗಳ ಪೈಕಿ ಐದು ಮಂದಿ ಆಯುಕ್ತರು ಕೆಲಸ ಮಾಡುತ್ತಿದ್ದಾರೆ. ಮಾಹಿತಿ ಆಯುಕ್ತರ ಮೂರು ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಜಾಹೀರಾತು ನೀಡಲಾಗಿದೆ’ ಎಂದು ಮಾಹಿತಿ ನೀಡಿದರು.

ಆದಾಗ್ಯೂ, ನ್ಯಾಯಾಲಯವು ಮುಖ್ಯ ಮಾಹಿತಿ ಆಯುಕ್ತರಿಗೆ ಕಚೇರಿ ಸಿಬ್ಬಂದಿ ಮತ್ತು ಮೂಲಸೌಕರ್ಯ ಒದಗಿಸುವುದಕ್ಕೆ ಸಂಬಂಧಿಸಿದಂತೆ ಪರಿಸ್ಥಿತಿ ವರದಿ ಸಲ್ಲಿಸುವಂತೆ ಸೂಚಿಸಿತು.

ಅರ್ಜಿದಾರರ ಪರ ವಕೀಲ ಪ್ರಶಾಂತ್ ಭೂಷಣ್, ‘ಮಹಾರಾಷ್ಟ್ರದಲ್ಲಿ 2021ರ ಮೇ 31ರ ವೇಳೆಗೆ, ರಾಜ್ಯ ಮಾಹಿತಿ ಆಯೋಗದ ಮುಂದೆ ಇತ್ಯರ್ಥಕ್ಕೆ ಸುಮಾರು 75,000 ಪ್ರಕರಣಗಳು ಬಾಕಿ ಇವೆ ಎಂದು ವಿವರ ಸಲ್ಲಿಸಿದರು.

ಆರೋಪಪಟ್ಟಿ ಸಲ್ಲಿಸದಿದ್ದಕ್ಕೆ ‘ಸುಪ್ರೀಂ’ ಕಿಡಿ

ಮೊದಲ ಪುಟದಿಂದ

‘ಆದರೆ, ಅವರ ಮೇಲೆ ಆರೋಪ ಪಟ್ಟಿ ಸಲ್ಲಿಸಿಲ್ಲ. ವಿಚಾರಣೆ ಆರಂಭಿಸದೆಯೇ ಆರೋಪಿಯನ್ನು ಅನಿರ್ದಿಷ್ಟಾವಧಿಗೆ ಬಂಧಿಸಿರುವುದು ‘21’ರ ವಿಧಿ ಅನ್ವಯ ವ್ಯಕ್ತಿಯ ಹಕ್ಕುಗಳ ದುರುಪಯೋಗವಾಗಿದೆ’ ಎಂದು ವಾದಿಸಿದರು.

ಸರ್ಕಾರದ ಪರ ವಕೀಲ ವಿಶಾಲ್ ಮೆಹ್ತಾಬ್, ‘ಈ ಪ್ರಕರಣದಲ್ಲಿ ಆರೋಪ ಪಟ್ಟಿ ದಾಖಲಿಸಲು ಸಿಐ... ಆದರೆ, ಆರೋಪಿ 15 ವರ್ಷಗಳ ಕಾಲ ತಲೆಮರೆಸಿಕೊಂಡಿದ್ದರು’ ಎಂದು ವಾದಿಸಿದರು.

ಆದರೆ, ಈ ಸಮರ್ಥನೆಯನ್ನು ಪೀಠವು ಒಪ್ಪಲಿಲ್ಲ. 2010ರಿಂದ ಆರೋಪಿ ಬಂಧನದಲ್ಲಿದ್ದಾಗ ಆರೋಪಪಟ್ಟಿ ಏಕೆ ದಾಖಲಿಸಿಲ್ಲ ಎಂದು ಕೇಳಿತು. ‘ತ್ವರಿತ ವಿಚಾರಣೆ ನಡೆಯುತ್ತಿಲ್ಲ. ಆರೋಪಿಯು ತಪ್ಪಿತಸ್ಥ ಅಥವಾ ದೋಷಮುಕ್ತ ಎನ್ನುವ ಅಭಿಪ್ರಾಯಕ್ಕೆ ಬರಲು ವಿಚಾರಣೆ ಇಲ್ಲದೆಯೇ ಅನಿರ್ದಿಷ್ಟಾವಧಿಗೆ ಒಬ್ಬ ವ್ಯಕ್ತಿಯನ್ನು ಬಂಧಿಸಿ ಇರಿಸಲಾಗದು’ ಎಂದು ಪೀಠವು ಹೇಳಿದೆ.

ಕೋವಿಡ್ ಪರಿಹಾರ: ಸಲ್ಲಿಕೆಯಾಗಿರುವ ಅರ್ಜಿ 14 ಲಕ್ಷಕ್ಕೂ ಹೆಚ್ಚು • ಪರಿಹಾರ ಪಡೆದವರು 2.14 ಲಕ್ಷ

ಪರಿಹಾರ ನಿರೀಕ್ಷೆಯಲ್ಲಿ ಅಸಂಘಟಿತ ಕಾರ್ಮಿಕರು

• ಗೋವರ್ಧನ ಎಸ್.ಎನ್.

ಪ್ರಜಾವಾಣಿ ವಿಶೇಷ

ಹುಬ್ಬಳ್ಳಿ: ಅಸಂಘಟಿತ ವಲಯದ ಕಾರ್ಮಿಕರಿಗೆ ಕೋವಿಡ್ ಪರಿಹಾರವಾಗಿ ರಾಜ್ಯ ಸರ್ಕಾರ ಘೋಷಿಸಿದ್ದ ₹2,000 ನೆರವು 2,14,731 ಮಂದಿಗಷ್ಟೇ ತಲುಪಿದೆ. ಅಂದಾಜು 12 ಲಕ್ಷದಷ್ಟು ಕಾರ್ಮಿಕರು ಇನ್ನೂ ಪರಿಹಾರ ಮೊತ್ತದ ನಿರೀಕ್ಷೆಯಲ್ಲಿದ್ದಾರೆ.

ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಅಧಿಕಾರಿಗಳ ಮಾಹಿತಿಯಂತೆ 14 ಲಕ್ಷಕ್ಕೂ ಹೆಚ್ಚು ಜನರು ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದಾರೆ.

'ಈ ಹಿಂದೆಯೇ ನೋಂದಣಿಯಾಗಿದ್ದ 3.58 ಲಕ್ಷ ಕಾರ್ಮಿಕರಲ್ಲಿ 2,14,731 ಕಾರ್ಮಿಕರಿಗೆ ಪರಿಹಾರ ವಿತರಿಸಲಾಗಿದ್ದು, ಈಚೆಗೆ ನೋಂದಣಿಯಾದವರ ಅರ್ಜಿಗಳನ್ನು ಆಯಾ ಜಿಲ್ಲೆಯ ಕಾರ್ಮಿಕ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಈ ಪ್ರಕ್ರಿಯೆ ಮುಗಿದು, ಪರಿಹಾರ ಪಾವತಿಯಾಗುವಷ್ಟರಲ್ಲಿ ಮತ್ತೊಂದು ತಿಂಗಳು ಹಿಡಿಯಲಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಪಿಎಲ್ ತೊಡಕು: ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬದ ಒಬ್ಬರಿಗೆ ಮಾತ್ರ ಪರಿಹಾರ ಎಂಬ ಮಾನದಂಡವಿದೆ. ಇದು ಮತ್ತಷ್ಟು ಕಾರ್ಮಿಕರನ್ನು ಪರಿಹಾರದ ವ್ಯಾಪ್ತಿಯಿಂದ ಹೊರಗಿಟ್ಟಿದೆ. ಒಂದು ಕುಟುಂಬದಲ್ಲೇ ವಿವಿಧ ಕೆಲಸಗಳಲ್ಲಿ ತೊಡಗಿದವರು ಇರುತ್ತಾರೆ. ಒಬ್ಬರಿಗೆ ಪರಿಹಾರ ಸಿಕ್ಕರೆ, ಮತ್ತೊಬ್ಬರಿಗೆ ಇಲ್ಲವಾಗಿದೆ ಎನ್ನುತ್ತಾರೆ ಸಿಐಟಿಯು ಮುಖಂಡ ಮಹೇಶ ಪತ್ತಾರ.

ನೋಂದಣಿ ಬಿಕ್ಕಟ್ಟು; ಕಾರ್ಮಿಕ ಕಾರ್ಡ್‌ಗಾಗಿ ನೋಂದಣಿ ಮಾಡಿಸಲು ಗುತ್ತಿಗೆ ಪಡೆದ ಕಂಪನಿ ಕೆಲವೇ ಮಂದಿಗೆ ಕಾರ್ಡ್ ನೀಡಿ, ಸುಮ್ಮನಾಗಿದೆ. ಇದರಿಂದ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸುವ ಸಮಯದಲ್ಲಿ ನೋಂದಣಿ ಸಂಖ್ಯೆ ಇಲ್ಲದೆ, ಹಲವು ಕಾರ್ಮಿಕರಿಗೆ ತೊಂದರೆಯಾಯಿತು. ಕೆಲವರದು ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ ಎಂದೂ ತೋರಿಸಿತು.

ಈ ಎಲ್ಲ ಗೊಂದಲಗಳ ಬಗ್ಗೆ ಕಾರ್ಮಿಕ ಇಲಾಖೆ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಸಮಸ್ಯೆಯನ್ನು ಪರಿಹರಿಸಿ, ಹಣ ಕೊಡಿಸುವ ಭರವಸೆ ನೀಡಿದ್ದಾರೆ. ಅದಕ್ಕಾಗಿ ಕಾಯುತ್ತಿದ್ದೇವೆ ಎಂದು ಎಪಿಎಂಸಿ ಹಮಾಲಿ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಗುರುಸಿದ್ಧಪ್ಪ ಅಂಬಿಗೇರ ತಿಳಿಸಿದರು.

11 ವಲಯದವರಿಗಷ್ಟೇ ಪರಿಹಾರ

ಕ್ಷೌರಿಕ, ಗೃಹಕಾರ್ಮಿಕರು, ಅಕ್ಕಸಾಲಿಗರು, ಹಮಾಲರು, ಕಮ್ಮಾರರು, ಮಂಡಕ್ಕಿ ಭಟ್ಟಿ ಕಾರ್ಮಿಕರು, ಮೆಕ್ಯಾನಿಕ್, ಕುಂಬಾರರು, ಚಿಂದಿ ಆಯುವವರು, ಟೈಲರ್‌ಗಳು, ಅಗಸರನ್ನು ಮಾತ್ರ ಅಸಂಘಟಿತ ವಲಯದ ಕಾರ್ಮಿಕರೆಂದು ಗುರುತಿಸಿ, ಪರಿಹಾರ ನೀಡಲಾಗಿದೆ. ಆದರೆ, ಅಧಿಕಾರಿಗಳೇ ತಿಳಿಸುವಂತೆ 40ಕ್ಕೂ ಹೆಚ್ಚು ವರ್ಗಗಳು ಅಸಂಘಟಿತ ವಲಯದ ವ್ಯಾಪ್ತಿಗೆ ಬರುತ್ತವೆ. ಪಟ್ಟಿಯಲ್ಲಿ ಗುರುತಿಸಲಾಗದ ವರ್ಗಗಳಿಗೆ ಪರಿಹಾರ ಗಗನಕುಸುಮವಾಗಿದೆ ಎಂಬುದು ಕಾರ್ಮಿಕರ ಆರೋಪ.

ಈ ಹಿಂದೆ ನೋಂದಣಿಯಾಗದವರಿಗೂ ಅರ್ಜಿ ಸಲ್ಲಿಸಲು ಅವಕಾಶ ನೀಡಿರುವ ಕಾರಣ ಅವರಿಗೆ ಪರಿಹಾರ ವಿಳಂಬವಾಗಿದೆ

ಮಲ್ಲಿಕಾರ್ಜುನ, ಕಾರ್ಮಿಕ ಅಧಿಕಾರಿ, ಧಾರವಾಡ

ರಾಜ್ಯದಲ್ಲಿ 1.20 ಕೋಟಿ ಅಸಂಘಟಿತ ವಲಯದ ಕಾರ್ಮಿಕರಿದ್ದು, ಎಲ್ಲರಿಗೂ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು

ಮಹೇಶ ಪತ್ತಾರ, ಸಿಐಟಿಯು ಮುಖಂಡ



ಅಂತರ ಮರೆಸಿದ ಪ್ರಚಾರ

ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆ ಚುನಾವಣೆಗೆ ಸೋಮವಾರ ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಹುಬ್ಬಳ್ಳಿಯಲ್ಲಿ ಪ್ರಚಾರ ನಡೆಸಿದರು. ಕಾರ್ಯಕರ್ತರು, ಬೆಂಬಲಿಗರು ಅಂತರ ಮರೆತು ಗುಂಪುಗೂಡಿದ ಪರಿ ಇದು

ಪ್ರಜಾವಾಣಿ ಚಿತ್ರ

'ಎಸ್‌ಸಿ, ಎಸ್‌ಟಿ ದೌರ್ಜನ್ಯ: ಪ್ರತಿ ತಿಂಗಳು ಪರಿಶೀಲನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡದವರ (ಎಸ್‌ಟಿ) ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ತೆಗೆದುಕೊಂಡ ತೀರ್ಮಾನಗಳ ಕುರಿತು ಇನ್ನು ಮುಂದೆ ಪ್ರತಿ ತಿಂಗಳು ಪರಿಶೀಲನೆ ನಡೆಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದಲ್ಲಿ ದೌರ್ಜನ್ಯ ಪ್ರತಿಬಂಧ ಕಾಯ್ದೆ– 1989 (ತಿದ್ದುಪಡಿ ಕಾಯ್ದೆ 2015) ಮತ್ತು ನಿಯಮಗಳು 1995 (ತಿದ್ದುಪಡಿ ನಿಯಮಗಳು 2016) ಅಡಿ ರಾಜ್ಯಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ಬಳಿಕ ಮಾತನಾಡಿದ ಅವರು, 'ಸದ್ಯ ಮೂರು ತಿಂಗಳಿಗೊಮ್ಮೆ ಪರಿಶೀಲನೆ ನಡೆಸಲಾಗುತ್ತಿದೆ' ಎಂದರು.

'ಮುಖ್ಯಮಂತ್ರಿ ನೇತೃತ್ವದ ರಾಜ್ಯಮಟ್ಟದ ಸಮಿತಿಯ ಸಭೆಯನ್ನು ಸದ್ಯ ಆರು ತಿಂಗಳಿಗೊಮ್ಮೆ ನಡೆಸಲಾಗುತ್ತಿದೆ. ತುರ್ತು ವಿಷಯಗಳಿದ್ದರೆ ಇನ್ನು ಮುಂದೆ ಮೂರು ತಿಂಗಳಿಗೊಮ್ಮೆ ಈ ಸಭೆ ನಡೆಸಲಾಗುವುದು. ಜಿಲ್ಲಾಧಿಕಾರಿಗಳು ಹಾಗೂ ಉಪ ವಿಭಾಗಾಧಿಕಾರಿಗಳ ಹಂತದಲ್ಲಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ನಡೆಸುವಂತೆ ಸೂಚಿಸಲಾಗಿದೆ' ಎಂದರು.

'ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಶೀಘ್ರ ಇತ್ಯರ್ಥಪಡಿಸಲು ಕ್ರಮಕೈಗೊಳ್ಳುವಂತೆ ಗೃಹ ಮತ್ತು ಕಾನೂನು ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಸಮನ್ವಯ ವಹಿಸಿ, ತನಿಖೆ, ದೋಷಾರೋಪ ಪಟ್ಟಿ ಸಲ್ಲಿಕೆ ಮತ್ತು ವಿಚಾರಣೆ ವಿಳಂಬ ಆಗದಂತೆ ಕ್ರಮ ವಹಿಸುವಂತೆ ಮತ್ತು ಅಪರಾಧ ಸಾಬೀತು ಪ್ರಮಾಣ ಹೆಚ್ಚಿಸುವಂತೆ ನಿರ್ದೇಶನ ನೀಡಲಾಗಿದೆ' ಎಂದರು.

'ದೌರ್ಜನ್ಯ ಪ್ರಕರಣಗಳಲ್ಲಿ ದೂರುದಾರರು ಮತ್ತು ಸಾಕ್ಷಿದಾರರ ರಕ್ಷಣೆಗೆ ಒತ್ತು ನೀಡಬೇಕಿದೆ. ಹೀಗಾಗಿ, ಸೂಕ್ಷ್ಮ ಪ್ರಕರಣಗಳಲ್ಲಿ ದೂರುದಾರರು ಮತ್ತು ಸಾಕ್ಷಿದಾರರನ್ನು ಪೊಲೀಸರು ಕರೆದೊಯ್ಯಬೇಕು. ಈ ಪ್ರಕರಣಗಳ ಮೇಲುಸ್ತುವಾರಿಗೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಅವರನ್ನು ನೇಮಿಸಲಾಗುವುದು' ಎಂದರು.

'ಅರಣ್ಯ ಹಕ್ಕುಗಳ ಕಾಯ್ದೆಯಡಿ 1.80 ಲಕ್ಷಕ್ಕೂ ಹೆಚ್ಚು ಅರ್ಜಿಗಳು ತಿರಸ್ಕೃತಗೊಂಡಿವೆ. ಈ ಕುರಿತಂತೆ ರಾಜ್ಯಮಟ್ಟದಲ್ಲಿ ಮೂವರು ಅಧಿಕಾರೇತರ ಸದಸ್ಯರನ್ನು ಒಳಗೊಂಡ ಮರು ಪರಿಶೀಲನಾ ಸಮಿತಿ ರಚಿಸಲಾಗುವುದು' ಎಂದು ಹೇಳಿದರು.

'ದೌರ್ಜನ್ಯ ಪ್ರಕರಣಗಳಲ್ಲಿ ಮೃತಪಟ್ಟವರ ಅವಲಂಬಿತರಿಗೆ ಅನುಕಂಪ ಆಧಾರದಲ್ಲಿ ಸರ್ಕಾರಿ ನೌಕರಿಗೆ ಅರ್ಜಿ ಸಲ್ಲಿಸಲು ಎರಡು ವರ್ಷ ಹಾಗೂ ಅಪ್ರಾಪ್ತರಿಗೆ ಮೂರು ವರ್ಷಗಳ ಅವಧಿ ನಿಗದಿಪಡಿಸಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗುವುದು' ಎಂದರು.



ಸಭೆಯಲ್ಲಿ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಜೆ.ಸಿ. ಮಾಧುಸ್ವಾಮಿ, ಬಿ. ಶ್ರೀರಾಮುಲು, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದರು

ನಕಲಿ ಜಾತಿ ಪ್ರಮಾಣಪತ್ರ ಸಲ್ಲಿಸಿ, ಈ ಸಮುದಾಯಗಳ ಹಕ್ಕು ಕಸಿದುಕೊಳ್ಳುವವರ ಮತ್ತು ನಕಲಿ ಜಾತಿ ಪ್ರಮಾಣಪತ್ರ ನೀಡಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಹೇಳಿಕೆ ನೀಡದ ಸಂತ್ರಸ್ತೆ; ಪೊಲೀಸರಿಂದ ಸ್ಥಳ ಮಹಜರು

ಆರೋಪಿ ಜೇಬಿನಲ್ಲಿ ಸದಾ ಕಾಂಡೊಮ್!

ಪ್ರಜಾವಾಣಿ ವಾರ್ತೆ

ಮೈಸೂರು: ಸಾಮೂಹಿಕ ಅತ್ಯಾಚಾರ ಪ್ರಕರಣದ ಆರೋಪಿಗಳ ಪೈಕಿ ಒಬ್ಬ ಸದಾ ತನ್ನ ಜೇಬಿನಲ್ಲಿ ಕಾಂಡೊಮ್ ಇಟ್ಟುಕೊಂಡಿರುತ್ತಿದ್ದ ಎಂಬ ಸಂಗತಿ ತನಿಖೆ ವೇಳೆ ಬಹಿರಂಗವಾಗಿದೆ.

'ಆತ ಮೈಸೂರಿಗೆ ಬರುವ ಮುಂಚೆ ತಮಿಳುನಾಡಿನಲ್ಲಿಯೇ ಕಾಂಡೊಮ್ ಖರೀದಿಸಿಟ್ಟುಕೊಂಡಿರುತ್ತಿದ್ದ. ದರೋಡೆ ಮಾಡಿದ ಹಣ, ಒಡವೆಗಳಲ್ಲಿ ಕಡಿಮೆ ಪಾಲು ಪಡೆಯುತ್ತಿದ್ದ. ಆದರೆ ಯುವತಿಯರಿಗೆ ಲೈಂಗಿಕ ಕಿರುಕುಳ ನೀಡಿ ವಿಕೃತ ಆನಂದಪಡುತ್ತಿದ್ದ. ಉಳಿದವರು ಅದನ್ನು ವಿಡಿಯೊ ಮಾಡಿಕೊಳ್ಳುತ್ತಿದ್ದರು' ಎಂದು ತನಿಖಾ ತಂಡದಲ್ಲಿರುವ ಒಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಆರೋಪಿ ಮೂವರು ಯುವತಿಯರನ್ನು ಪ್ರೇಮಿಸಿ ವಿಫಲಗೊಂಡಿದ್ದ. ಅದೇ ಕಾರಣಕ್ಕೆ ಯುವತಿಯರನ್ನು ಲೈಂಗಿಕ ತೃಷೆಗಾಗಿಯೇ ಬಳಸಿಕೊಳ್ಳಲು ತೊಡಗಿದ್ದ' ಎಂದು ಹೇಳಿದ್ದಾರೆ.

ಹೇಳಿಕೆ ನೀಡದೇ ತೆರಳಿರುವ ಸಂತ್ರಸ್ತೆಯ ಮೊಬೈಲ್ ಫೋನ್ ಬಂದ್ ಆಗಿದ್ದು, ಸಂತ್ರಸ್ತೆ ಸ್ನೇಹಿತನೂ ನಗರ ತೊರೆದಿರುವ ಮಾಹಿತಿ ಲಭ್ಯವಾಗಿದೆ. ಹೀಗಾಗಿ, ವೈಜ್ಞಾನಿಕ ಮತ್ತು ತಾಂತ್ರಿಕ ಸಾಕ್ಷ್ಯಗಳನ್ನೇ ಆಧರಿಸಿ ಆರೋಪಪಟ್ಟಿ ಸಿದ್ಧಪಡಿಸುವ ಚಿಂತನೆ ನಡೆಸಿರುವ ಪೊಲೀಸರು, ಅದಕ್ಕೂ ಮುನ್ನ ಆರೋಪಿಗಳನ್ನು ಮಂಪರು ಪರೀಕ್ಷೆಗೆ ಒಳಪಡಿಸಲೂ ಸಿದ್ಧತೆ ನಡೆಸಿದ್ದಾರೆ.

'ಯುವತಿಯನ್ನು ನೇರವಾಗಿ ಭೇಟಿಯಾಗಿ ಹೇಳಿಕೆ ಪಡೆಯಲು ಅವರು ಇರುವ ರಾಜ್ಯಕ್ಕೆ ತೆರಳಲೂ ಪೊಲೀಸರು ಸಿದ್ಧತೆ ನಡೆಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸಾಮೂಹಿಕ ಅತ್ಯಾಚಾರ ನಡೆದ ಸ್ಥಳಕ್ಕೆ ಸೋಮವಾರ ಆರೋಪಿಗಳನ್ನು ಕರೆ ತಂದ ಪೊಲೀಸರು ಮಹಜರು ಕಾರ್ಯವನ್ನು ನಡೆಸಿದರು.

ತನಿಖಾ ವಿಧಾನಕ್ಕೆ ಆಕ್ಷೇಪ

ಮೈಸೂರು: ಪ್ರಕರಣವನ್ನು ಪೊಲೀಸರು ನಿರ್ವಹಿಸಿದ ರೀತಿಗೆ ಆಕ್ಷೇಪ ವ್ಯಕ್ತವಾಗಿದೆ. ದೆಹಲಿ ಪ್ರಕರಣದಷ್ಟು ಗಂಭೀರವಾಗಿ ನಿರ್ವಹಿಸಿಲ್ಲ ಎಂಬ ಅಸಮಾಧಾನ ಕೇಳಿಬಂದಿದೆ.

'ತನಿಖೆ ಪೂರ್ಣಗೊಳ್ಳುವ ಮುನ್ನವೇ ಆರೋಪಿಗಳ ಭಾವಚಿತ್ರ, ಮತ್ತು ಹೆಸರುಗಳು ಬಹಿರಂಗಗೊಂಡಿರುವುದು ವರ್ಮಾ ಆಯೋಗದ ವರದಿಗೆ ವಿರುದ್ಧ' ಎಂದು ವಕೀಲರಾದ ಮಂಜುಳಾ ಮಾನಸ ಆಕ್ಷೇಪಿಸಿದ್ದಾರೆ. ಬೆಂಗಳೂರಿನ ವಕೀಲ ಕೆ.ವಿ.ಧನಂಜಯ್ ಅವರೂ ಟ್ವಿಟರ್‌ನಲ್ಲಿ ಆಕ್ಷೇಪಿಸಿದ್ದಾರೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್‌ಸೂದ್ ಅವರು ಸುದ್ದಿಗೋಷ್ಠಿಯಲ್ಲಿ ಆರೋಪಿಗಳ ಹೆಸರು, ಚಿತ್ರ ಬಹಿರಂಗಪಡಿಸಲು ನಿರಾಕರಿಸಿದ್ದರು. ಸಂತ್ರಸ್ತೆಯ ಇರುವಿಕೆ, ಪ್ರಯಾಣದ ವಿವರಗಳನ್ನು ಗೋಪ್ಯವಾಗಿಡಲು ಮನವಿ ಮಾಡಿದ್ದರೂ ವಿವರಗಳು ಸಾಮಾಜಿಕ ಮಾಧ್ಯಮಗಳಲ್ಲಿ ಬಹಿರಂಗಗೊಂಡಿವೆ.

'ರಾಜ್ಯೋತ್ಸವ: ಅರ್ಜಿ ಹಾಕದಿದ್ದರೂ ಸಾಧಕರ ಗುರುತಿಸಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಉಡುಪಿ: ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಈ ವರ್ಷ ಅರ್ಜಿ ಹಾಕದಿದ್ದರೂ ಅರ್ಹ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನಿಲ್ ಕುಮಾರ್ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಶಸ್ತಿ ಆಯ್ಕೆಗೆ ಹೊಸ ಸ್ಪರ್ಶ ನೀಡಲಾಗುತ್ತಿದೆ. ಮುಖ್ಯಮಂತ್ರಿ ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ 10 ದಿನದಲ್ಲಿ ನಿಯಮ ರೂಪಿಸಲಾಗುವುದು. ಸಾರ್ವಜನಿಕರಿಂದಲೂ ಅಭಿಪ್ರಾಯ ಸಂಗ್ರಹಿಸಲಾಗುವುದು ಎಂದು ತಿಳಿಸಿದರು.

ಆಡಳಿತಾತ್ಮಕ ಹಿತದೃಷ್ಟಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಾಲ್ವರು ಜಂಟಿ ನಿರ್ದೇಶಕರನ್ನು ರಾಜ್ಯದ ನಾಲ್ಕು ಕಂದಾಯ ವಿಭಾಗಗಳಿಗೆ ನಿಯೋಜಿಸಲಾಗುವುದು ಎಂದು ಹೇಳಿದರು.



ವಿ. ಸುನಿಲ್ ಕುಮಾರ್

ಗ್ರಾಮೀಣ ಕಲಾವಿದರು, ಹಿರಿಯ ಸಾಹಿತಿಗಳು ಸಚಿವರ ಭೇಟಿಗೆ ವಿಧಾನಸೌಧಕ್ಕೇ ಬರಬೇಕಿತ್ತು. ಇನ್ನು ಮುಂದೆ ವಾರದಲ್ಲಿ ಒಂದು ದಿನ ಎರಡು ಗಂಟೆ ರವೀಂದ್ರ ಕಲಾಕ್ಷೇತ್ರದಲ್ಲಿ ಇರಲಿದ್ದು, ಅಲ್ಲಿಯೇ ಭೇಟಿ ಮಾಡಬಹುದು ಎಂದರು.

ಇಂಧನ ಇಲಾಖೆಯಲ್ಲಿ ಜನಸ್ನೇಹಿ ನೀತಿಗಳಿಗೆ ಒತ್ತು ನೀಡಲಾಗುವುದು. ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದಿನ 100 ದಿನಗಳಲ್ಲಿ ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದರ ಕುರಿತು ಸೆ.10 ರಂದು ಕ್ರಿಯಾಯೋಜನೆ ರೂಪಿಸಲಾಗುವುದು ಎಂದು ಸಚಿವರು ವಿವರಿಸಿದರು.

'ರೈತರೊಂದಿಗೆ ಒಂದು ದಿನ ಮುಂದುವರಿಸುವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರಿಗೆ ಆತ್ಮಸ್ಥೈರ್ಯ ತುಂಬಲು ಆರಂಭಿಸಿದ್ದ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮವನ್ನು ಮುಂದುವರಿಸಲು ಕೃಷಿ ಸಚಿವ ಬಿ.ಸಿ. ಪಾಟೀಲ ನಿರ್ಧರಿಸಿದ್ದಾರೆ.

'ಕೋವಿಡ್ ಕಾರಣ ರೈತರ ಜೊತೆ ಕಾಲ ಕಳೆಯಲು ಸಾಧ್ಯವಾಗಿಲ್ಲ. ಇದೀಗ ಕೋವಿಡ್ ಜೊತೆಗೆ ಬದುಕಬೇಕಾದ ಪರಿಸ್ಥಿತಿ ಇದೆ. ಹೀಗಾಗಿ, ಮತ್ತೆ ರೈತರೊಂದಿಗೆ ಒಂದು ದಿನ ಕಳೆಯಲು ನಿರ್ಧರಿಸಿದ್ದೇನೆ' ಎಂದು ಅವರು ತಿಳಿಸಿದರು.

'ರೈತರಲ್ಲಿ ಆತ್ಮವಿಶ್ವಾಸ ತುಂಬುವುದು ಮತ್ತು ಮಿಶ್ರ ಬೆಳೆ ಮೂಲಕ ಆದಾಯದ ದ್ವಿಗುಣಗೊಳಿಸುವಂತೆ ಪ್ರೋತ್ಸಾಹ ನೀಡುವುದು ಕಾರ್ಯಕ್ರಮದ ಉದ್ದೇಶ. ಸಾಧ್ಯವಾದ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಲಾಗುವುದು' ಎಂದರು.

'ಕೆಲವು ಕಡೆ ಮಳೆ ಕೈ ಕೊಟ್ಟರೂ ಒಣ ಬೆಳೆಗಳಿಗೆ ಸಮಸ್ಯೆ ಆಗಿಲ್ಲ. ಬೀಜ, ಗೊಬ್ಬರದ ಸಮಸ್ಯೆ ಈ ವರ್ಷ ಇಲ್ಲ' ಎಂದೂ ಪಾಟೀಲ ಅವರು ತಿಳಿಸಿದರು.

'ಎಂಜಿನಿಯರಿಂಗ್ ಕೋರ್ಸ್ ಶುಲ್ಕ ಪರಿಷ್ಕರಣೆಗೆ ಸಭೆ'

ಮಂಗಳೂರು: ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಶುಲ್ಕ ಪರಿಷ್ಕರಣೆಗೆ ಮನವಿ ಮಾಡಿದ್ದು, ಸೆಪ್ಟೆಂಬರ್ ಎರಡನೇ ವಾರದಲ್ಲಿ ಸಭೆ ಕರೆದು ನಿರ್ಧರಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ತಿಳಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವೈದ್ಯಕೀಯ, ದಂತ ವೈದ್ಯಕೀಯ ಕಾಲೇಜುಗಳ ಶುಲ್ಕವನ್ನು ಪ್ರತಿ ವರ್ಷ ಪರಿಷ್ಕರಿಸಲಾಗುತ್ತಿದೆ. ಎಂಜಿನಿಯರಿಂಗ್ ಕಾಲೇಜುಗಳ ಶುಲ್ಕವನ್ನು ಮೂರು ವರ್ಷಗಳಿಂದ ಪರಿಷ್ಕರಿಸಿಲ್ಲ ಎಂದರು.

ಹೊಸ ಶಿಕ್ಷಣ ನೀತಿ ವಿದ್ಯಾರ್ಥಿ ಕೇಂದ್ರಿತ, ವಿದ್ಯಾರ್ಥಿ ಸ್ನೇಹಿಯಾಗಿದೆ. ವಿದ್ಯಾರ್ಥಿ ವಿರೋಧಿ ಒಂದೇ ಒಂದು ಅಂಶವನ್ನು ವಿರೋಧಿಸುವವರು ತೋರಿಸಲಿ ಎಂದು ಸವಾಲು ಹಾಕಿದರು. ಇದನ್ನು ತರಾತುರಿಯಲ್ಲಿ ಜಾರಿಗೊಳಿಸುತ್ತಿಲ್ಲ ಎಂದು ಹೇಳಿದರು.

ಕನಿಷ್ಠ ಒಂದು ಡೋಸ್ ಲಸಿಕೆ ಪಡೆದವರಿಗೆ ಕಾಲೇಜುಗಳಲ್ಲಿ ಭೌತಿಕ ತರಗತಿಗೆ ಹಾಜರಾಗಲು ಅವಕಾಶ ನೀಡಲಾಗುವುದು. ಈಗಾಗಲೇ ರಾಜ್ಯದಲ್ಲಿ ಶೇ 86 ರಷ್ಟು ವಿದ್ಯಾರ್ಥಿಗಳಿಗೆ ಒಂದು ಡೋಸ್ ಲಸಿಕೆ ಹಾಕಲಾಗಿದೆ ಎಂದರು.

ವಿದ್ಯಾರ್ಥಿನಿಯರ ಸುರಕ್ಷತೆಗಾಗಿ ವಿಶ್ವವಿದ್ಯಾಲಯ ಹಾಗೂ ಕಾಲೇಜು ಕ್ಯಾಂಪಸ್‌ನಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ, ಪಹರೆ ಹೆಚ್ಚಿಸುವ ಮೂಲಕ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ

ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಪುಸ್ತಕ ಖರೀದಿಸಿದೆ



'ಪ್ರಜಾವಾಣಿ' ಬಳಗ ನೀಡಿದ ವಿದ್ಯಾರ್ಥಿ ವೇತನದ ಸ್ವಲ್ಪ ಹಣವನ್ನು ಪುಸ್ತಕ ಖರೀದಿಸಲು ಬಳಸಿದೆ. ಉಳಿದುದರಲ್ಲಿ ಕಾಲೇಜು ಶುಲ್ಕ ಪಾವತಿಸಿದೆ. ಈ ಮೊತ್ತ ಕಷ್ಟದ ಸಮಯದಲ್ಲಿ ಶಿಕ್ಷಣಕ್ಕೆ ನೆರವಾಯಿತು. ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದು, ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದೇನೆ.

ಶರಣ್ಯಾ ಆರ್., ಮದ್ದೂರು, ಯಳಂದೂರು ತಾಲ್ಲೂಕು, ಚಾಮರಾಜನಗರ

'ಪ್ರಜಾವಾಣಿ'ಗೆ ಚಿರಋಣಿ



'ಪ್ರಜಾವಾಣಿ' ನೀಡಿದ ವಿದ್ಯಾರ್ಥಿವೇತನ ಕಾಲೇಜು ಶುಲ್ಕ ಕಟ್ಟಲು ಸಹಕಾರಿಯಾಯಿತು. ಕೊರೊನಾ ಸಂದರ್ಭದಲ್ಲಿ ಈ ವಿದ್ಯಾರ್ಥಿವೇತನ ದೊರೆತದ್ದು ಮರೆಯಲಾಗದು. ಗ್ರಾಮೀಣ ಭಾಗದಲ್ಲಿ ವಾಸಿಸುವ ನನಗೆ ರಾಮಕೃಷ್ಣ ಶಾಲೆಯ ಮುಖ್ಯಶಿಕ್ಷಕರು 'ಪ್ರಜಾವಾಣಿ'ಯ ವಿದ್ಯಾರ್ಥಿವೇತನದ ಬಗ್ಗೆ ತಿಳಿಸಿದರು. ಸಮಾಜದ ಋಣವನ್ನು ತೀರಿಸಲು ಪ್ರಯತ್ನ ಪಡುತ್ತೇನೆ.

ಸುಭಾಷ್ ಜಿ.ಕೆ., ಶಿವಮೊಗ್ಗ



ಕೃಷ್ಣಮಠದಲ್ಲಿ ಸೋಮವಾರ ಪರ್ಯಾಯ ಅದಮಾರು ಮಠದ ಈಶಪ್ರಿಯ ತೀರ್ಥ ಸ್ವಾಮೀಜಿ ಕೃಷ್ಣನಿಗೆ ಮಹಾಪೂಜೆ ನೆರವೇರಿಸಿದರು.

ಉಡುಪಿ: ಕೃಷ್ಣ ಜನ್ಮಾಷ್ಟಮಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಉಡುಪಿ: ಕೃಷ್ಣಮಠದಲ್ಲಿ ಸೋಮವಾರ ಸರಳವಾಗಿ ಶ್ರದ್ಧಾ ಭಕ್ತಿಯಿಂದ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಭಕ್ತರು ಬಾಲಕೃಷ್ಣನ ಅಲಂಕಾರದಲ್ಲಿ ಕಂಗೊಳಿಸುತ್ತಿದ್ದ ಗೋಪಾಲನ ದರ್ಶನ ಮಾಡಿದರು.

ಮಧ್ಯಾಹ್ನ ಪರ್ಯಾಯ ಅದಮಾರು ಮಠದ ಈಶಪ್ರಿಯ ತೀರ್ಥ ಸ್ವಾಮೀಜಿ ಮಹಾಪೂಜೆ ನೆರವೇರಿಸಿದರು.

ಮಧ್ಯರಾತ್ರಿ 12.17ರ ಶುಭ ಮುಹೂರ್ತದಲ್ಲಿ ಕೃಷ್ಣನಿಗೆ ಅರ್ಘ್ಯ ಪ್ರದಾನ ನಡೆಯಲಿದೆ.

ಆ.31ರಂದು ಮಧ್ಯಾಹ್ನ 3.30ಕ್ಕೆ ರಥಬೀದಿಯಲ್ಲಿ ವಿಟ್ಲಪಿಂಡಿ ಉತ್ಸವ ನಡೆಯಲಿದ್ದು, ಮೊಸರು ಕುಡಿಕೆ ಒಡೆಯುವುದು ಸೇರಿದಂತೆ ಸಾಂಪ್ರದಾಯಿಕ ಆಚರಣೆಗಳು ನಡೆಯಲಿವೆ. ಕೋವಿಡ್ ಹಿನ್ನೆಲೆಯಲ್ಲಿ ಈ ವರ್ಷ ಕೃಷ್ಣನ ಲೀಲೋತ್ಸವಗಳಲ್ಲಿ ಭಾಗವಹಿಸಲು ಸಾರ್ವಜನಿಕರಿಗೆ ನಿರ್ಬಂಧಿಸಲಾಗಿದೆ.

ನಟಿ ರಾಗಿಣಿ ದ್ವಿವೇದಿ ಸ್ನೇಹಿತ ಬಿ.ಕೆ. ರವಿಶಂಕರ್

30 ಬಾರಿ ಡ್ರಗ್ಸ್ ಖರೀದಿಸಿದ್ದ 'ಆರ್‌ಟಿಒ ಎಫ್‌ಡಿಎ'

• ಸಂತೋಷ ಜಿಗಳಿಕೊಪ್ಪ



ರವಿಶಂಕರ್

ಬೆಂಗಳೂರು: ಸಾರಿಗೆ ಇಲಾಖೆಯಲ್ಲಿ ವಾಹನಗಳಿಗೆ ಫ್ಯಾನ್ಸಿ ನೋಂದಣಿ ಸಂಖ್ಯೆ ನೀಡುವ ವಿಭಾಗದ ಪ್ರಥಮ ದರ್ಜೆ ಸಹಾಯಕನಾಗಿದ್ದ (ಎಫ್‌ಡಿಎ) ಆರೋಪಿ ಬಿ.ಕೆ. ರವಿಶಂಕರ್, ನಟಿ ರಾಗಿಣಿ ದ್ವಿವೇದಿ ಜೊತೆ ಹಲವು ಬಾರಿ 'ಡ್ರಗ್ಸ್ ಪಾರ್ಟಿ' ಮಾಡಿದ್ದ. ಅದಕ್ಕಾಗಿ ಆತ, ನೈಜೀರಿಯಾ ಪ್ರಜೆ ಲೂಮ್ ಪೆಪೆ ಸಾಂಬ ಅಲಿಯಾಸ್ ಸೈಮನ್ ಕಡೆಯಿಂದ 2020ರಲ್ಲಿ 30 ಬಾರಿ ಡ್ರಗ್ಸ್ ಖರೀದಿಸಿದ್ದನೆಂಬ ಮಾಹಿತಿಯನ್ನು ಸಿಸಿಬಿ ಪೊಲೀಸರು ಪತ್ತೆ ಮಾಡಿದ್ದಾರೆ.

'ಪ್ರತಿಷ್ಠಿತ ಹೋಟೆಲ್, ವಿಲ್ಲಾ, ಕ್ಲಬ್‌ಗಳಲ್ಲಿ ನಡೆಯುತ್ತಿದ್ದ ಪಾರ್ಟಿಗಳಲ್ಲಿ ಪಾಲ್ಗೊಳ್ಳುತ್ತಿದ್ದ ರವಿಶಂಕರ್, ಮಾದಕ ವಸ್ತು ಮಾರುತ್ತಿದ್ದ, ಸೇವಿಸುತ್ತಿದ್ದ. ಅದರಿಂದ ಹಣ ಸಂಪಾದಿಸುತ್ತಿದ್ದ' ಎಂದು ಸಿಸಿಬಿ ಪೊಲೀಸರು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

'ಫ್ಯಾನ್ಸಿ ನೋಂದಣಿ ಸಂಖ್ಯೆ ಹಂಚಿಕೆ ಮಾಡುತ್ತಿದ್ದ ರವಿಶಂಕರ್‌ಗೆ ಹಲವು ಶ್ರೀಮಂತರ ಪರಿಚಯವಿತ್ತು. ಆ ಪೈಕಿ ಒಬ್ಬರ ಮೂಲಕ ನಟಿ ರಾಗಿಣಿ ಜೊತೆ ಸ್ನೇಹ ಬೆಳೆದಿತ್ತು. ಹಲವೆಡೆ ನಡೆದಿದ್ದ ಪಾರ್ಟಿಗಳಲ್ಲಿ ಇಬ್ಬರೂ ಒಟ್ಟಿಗೆ ಪಾಲ್ಗೊಳ್ಳುತ್ತಿದ್ದರು. ಡ್ರಗ್ಸ್ ವ್ಯಸನಿಗಳಾಗಿದ್ದ ಇಬ್ಬರೂ, ಲೂಮ್ ಪೆಪೆ ಸಾಂಬ ಹಾಗೂ ಇನ್ನೊಬ್ಬ ಆರೋಪಿ ಪ್ರತೀಕ್ ಶೆಟ್ಟಿ ಬಳಿ ಹಲವು ಬಾರಿ ಡ್ರಗ್ಸ್ ಖರೀದಿಸಿದ್ದಕ್ಕೆ ಪುರಾವೆಗಳು ಸಿಕ್ಕಿವೆ' ಎಂಬ ಮಾಹಿತಿ ಪಟ್ಟಿಯಲ್ಲಿದೆ.

'ಪ್ರಕರಣದಲ್ಲಿ 16ನೇ ಆರೋಪಿ ಆಗಿರುವ ರವಿಶಂಕರ್, ನಟಿ ರಾಗಿಣಿಗಾಗಿ ಪಾರ್ಟಿಗಳನ್ನು ಆಯೋಜಿಸುತ್ತಿದ್ದ. ಶ್ರೀಮಂತರ ಮಕ್ಕಳು ಹಾಗೂ ಉದ್ಯಮಿಗಳನ್ನು ಆಹ್ವಾನಿಸುತ್ತಿದ್ದ. ಅಲ್ಲಿಯೇ ಡ್ರಗ್ಸ್ ಮಾರುತ್ತಿದ್ದ. ಇದಕ್ಕೆ ಗೆಳತಿ ರಾಗಿಣಿ ಸಹಕಾರವಿತ್ತು.'

'ಕ್ವೀನ್ಸ್ ರಸ್ತೆಯಲ್ಲಿರುವ '1 ಕ್ಯೂ 1' ಕ್ಲಬ್‌ನಲ್ಲಿ ರಾಗಿಣಿ ಹುಟ್ಟುಹಬ್ಬ ಪಾರ್ಟಿ ಆಯೋಜಿಸಿದ್ದ ರವಿಶಂಕರ್, ಸ್ನೇಹಿತರು ಹಾಗೂ ಯುವಕ–ಯುವತಿಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಾರ್ಟಿಗೆ ಕರೆಸಿದ್ದ. ಅವರಿಗೆಲ್ಲ ಆತ, ಎಕ್ಸ್‌ಟೆಸಿ ಮಾತ್ರೆ ಮಾರಿದ್ದ. ಸ್ನೇಹಿತೆ ಜೊತೆ ಸೇರಿ ತಾನೂ ಡ್ರಗ್ಸ್ ಸೇವಿಸಿದ್ದ' ಎಂಬ ಅಂಶವನ್ನೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ಯಲಹಂಕದ 'ಲೇ–ರೋಮಾ' ಗಾರ್ಡೇನಿಯಾ ಹೋಮ್ ಸ್ಟೇ, ಲಲಿತ್ ಅಶೋಕ ಹೋಟೆಲ್‌ನ ಕಿಟ್ಟಿಕೋ ರೆಸ್ಟೊರಂಟ್, ಹೆಬ್ಬಾಳದ 'ಹೌಸ್ ಆಫ್ ಲೈಫ್ ರೆಸಾರ್ಟ್' ಹಾಗೂ ಇತರೆಡೆ ನಡೆದ ಡ್ರಗ್ಸ್ ಪಾರ್ಟಿಯಲ್ಲೂ ಆರೋಪಿಗಳು ಪಾಲ್ಗೊಂಡಿದ್ದರು' ಎಂದೂ ತಿಳಿಸಲಾಗಿದೆ.

'616' ಕೊಠಡಿಯಲ್ಲಿ ಡ್ರಗ್ಸ್ ಸೇವನೆ: 'ಹೊಸೂರು ರಸ್ತೆಯಲ್ಲಿರುವ 'ದವನಮ್ ಸರೋವರ್ ಪೋರ್ಟಿಕೊ' ಹೋಟೆಲ್‌ನಲ್ಲಿ 2019ರ ಏಪ್ರಿಲ್ 28 ಹಾಗೂ 29ರಂದು ಫ್ಯಾಷನ್ ಶೋ ಆಯೋಜಿಸಲಾಗಿತ್ತು. 'ಸೆಲೆಬ್ರಿಟಿ' ಆಗಿ ಹೋಗಿದ್ದ ರವಿಶಂಕರ್ ಹಾಗೂ ರಾಗಿಣಿ, ಹೋಟೆಲ್‌ನ ಕೊಠಡಿ ಸಂಖ್ಯೆ 616ರಲ್ಲಿ ಉಳಿದುಕೊಂಡಿದ್ದರು. ಅದೇ ಕೊಠಡಿಯಲ್ಲೇ ಅವರಿಬ್ಬರೂ ಕೊಕೇನ್ ಸೇವಿಸಿದ್ದರು. ಅದನ್ನು ನೋಡಿದ್ದ ರೂಪದರ್ಶಿಯೊಬ್ಬರು ಸಾಕ್ಷಿ ಹೇಳಿಕೆ ನೀಡಿದ್ದಾರೆ' ಎಂಬ ಅಂಶವೂ ಇದೆ.

ಕಾರು ಚಾಲಕನಿಂದ ಡ್ರಗ್ಸ್ ತರಿಸುತ್ತಿದ್ದ: 'ರಾಗಿಣಿ ಬಳಿ ಹೋಗುತ್ತಿದ್ದ ರವಿಶಂಕರ್, ಆಕೆಯ ಕಾರು ಚಾಲಕನ ಮೂಲಕ ಡ್ರಗ್ಸ್ ತರಿಸುತ್ತಿದ್ದ. ಆರೋಪಿ ಮಾತಿನಂತೆ ನೈಜೀರಿಯಾ ಪ್ರಜೆಯನ್ನು ಭೇಟಿಯಾಗುತ್ತಿದ್ದ ಚಾಲಕ, ಡ್ರಗ್ಸ್ ಪೊಟ್ಟಣಗಳನ್ನು ತಂದು ಕೊಡುತ್ತಿದ್ದ. ಪ್ರತಿ ಬಾರಿ ನೈಜೀರಿಯಾ ಪ್ರಜೆಗೆ ₹ 10 ಸಾವಿರದಿಂದ ₹ 20 ಸಾವಿರಕ್ಕೆ ಕೊಡುತ್ತಿದ್ದ' ಎಂಬ ಸಂಗತಿ ಪಟ್ಟಿಯಲ್ಲಿದೆ.



'ಶೌಚಾಲಯದಲ್ಲಿ ಡ್ರಗ್ಸ್ ಸೇವಿಸುತ್ತಿದ್ದ ಆರೋಪಿ'

'ರಿಯಲ್ ಎಸ್ಟೇಟ್ ಉದ್ಯಮಿ ಪ್ರಶಾಂತ್ ರಾಜು, ಪ್ರಕರಣದ 8ನೇ ಆರೋಪಿ. 'ಎಫ್ ಬಾರ್' ಮಾಲೀಕ ಆಗಿದ್ದ ಆತ, ಇತರೆ ಆರೋಪಿಗಳ ಜೊತೆ ಪಾರ್ಟಿಯಲ್ಲಿ ಪಾಲ್ಗೊಳ್ಳುತ್ತಿದ್ದ' ಎಂಬ ಮಾಹಿತಿ ಪಟ್ಟಿಯಲ್ಲಿದೆ.

'ಯುಬಿ ಸಿಟಿಯಲ್ಲಿರುವ ಸ್ಯಾಚೋಸ್, ಫರ್ಜಿ ಕೆಫೆ, ಸ್ಕೈ ಬಾರ್, ಶಿರೋನ್ ಬಾರ್ ಮತ್ತು ತಾಜ್ ವೆಸ್ಟೆಂಡ್‌ನಲ್ಲಿರುವ ಬ್ಲೂಬಾರ್ ಪಾರ್ಕ್ ಹೋಟೆಲ್‌ಗಳಲ್ಲಿ ಆಯೋಜಿಸಿದ್ದ ಪಾರ್ಟಿಯಲ್ಲಿ ಪ್ರಶಾಂತ್ ಪಾಲ್ಗೊಂಡಿದ್ದಕ್ಕೆ ಪುರಾವೆಗಳು ಸಿಕ್ಕಿವೆ. ಆರೋಪಿ, ಪ್ರತಿ ಬಾರಿ ಶೌಚಾಲಯಕ್ಕೆ ಹೋಗಿ ಕೊಕೇನ್ ಪುಡಿ ಹಾಗೂ ಎಕ್ಸ್‌ಟೆಸಿ ಮಾತ್ರೆ ತೆಗೆದುಕೊಂಡು ನಶೆ ಏರಿಸಿಕೊಳ್ಳುತ್ತಿದ್ದ' ಎಂದೂ ಉಲ್ಲೇಖಿಸಲಾಗಿದೆ.

'ಸಂದೀಪ್ ಪಾಟೀಲ' ಬಗ್ಗೆ ಎಚ್ಚರಿಕೆ ನೀಡಿದ್ದ ರವಿಶಂಕರ್

'ಡ್ರಗ್ಸ್ ಪ್ರಕರಣ ದಾಖಲಾಗುತ್ತಿದ್ದಂತೆ ತನಿಖೆ ಚುರುಕುಗೊಳಿಸಿದ್ದ ಸಿಸಿಬಿ ಪೊಲೀಸರು, ಆರೋಪಿಗಳಿಗಾಗಿ ಹುಡುಕಾಟ ನಡೆಸುತ್ತಿದ್ದರು. ಅದು ತಿಳಿಯುತ್ತಿದ್ದಂತೆ ಆರೋಪಿ ರವಿಶಂಕರ್, 'ಐಪಿಎಸ್ ಅಧಿಕಾರಿ ಸಂದೀಪ್ ಪಾಟೀಲ, ಜಾಲದ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ, ಎಚ್ಚರಿಕೆ' ಎಂದು ಇತರೆ ಆರೋಪಿಗಳಿಗೆ ಸಂದೇಶ ಕಳುಹಿಸಿದ್ದ' ಎಂಬ ಅಂಶ ಪಟ್ಟಿಯಲ್ಲಿದೆ.

'ಪ್ರಕರಣದ 4ನೇ ಆರೋಪಿ ಪ್ರಶಾಂತ್ ರಂಕಾ, ಸಾಲ ವಸೂಲಾತಿ ಮತ್ತು ವಾಹನಗಳ ಜಪ್ತಿ ಏಜೆಂಟ್ ಆಗಿದ್ದ. ರವಿಶಂಕರ್ ಜೊತೆ ಹೆಚ್ಚು ಒಡನಾಟ ಹೊಂದಿದ್ದ. ಆತನೂ ನೈಜೀರಿಯಾ ಪ್ರಜೆಗಳಿಂದ ಡ್ರಗ್ಸ್ ಖರೀದಿಸಿ ಪಾರ್ಟಿಗಳಲ್ಲಿ ಮಾರುತ್ತಿದ್ದ. ಅವರಿಬ್ಬರ ಮೊಬೈಲ್ ಜಪ್ತಿ ಮಾಡಿ, ವಾಟ್ಸ್‌ಆ್ಯಪ್ ಸಂದೇಶಗಳನ್ನು ಪರಿಶೀಲಿಸಿದ್ದು, ಸಂದೀಪ್ ಪಾಟೀಲ ಹೆಸರು ಉಲ್ಲೇಖವಾಗಿರುವುದು ಪತ್ತೆಯಾಗಿದೆ' ಎಂದು ಹೇಳಲಾಗಿದೆ.

ಕರಾವಳಿ, ಕಲಬುರ್ಗಿ, ಬೀದರ್‌ನಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಕಲಬುರ್ಗಿ/ಬೀದರ್: ಕಲಬುರ್ಗಿ ಮತ್ತು ಬೀದರ್ ಜಿಲ್ಲೆಯ ವಿವಿಧೆಡೆ ಸೋಮವಾರ ಧಾರಾಕಾರ ಮಳೆಯಾಯಿತು.

ಬೀದರ್ ಜಿಲ್ಲೆಯ ಕಮಲನಗರ ತಾಲ್ಲೂಕಿನ ಮತಖೇಡದಲ್ಲಿ ಸಿಡಿಲು ಬಡಿದು ಎಮ್ಮೆ ಮೃತಪಟ್ಟಿದೆ. ಭಾಲ್ಕಿ ತಾಲ್ಲೂಕಿನ ನಾವದಗಿಯಲ್ಲಿ ಹನುಮಾನ ಮಂದಿರ ಕುಸಿದಿದೆ.

ಭಾಲ್ಕಿ ತಾಲ್ಲೂಕಿನ ಏನಕೂರ್ ಮತ್ತು ಹುಲಸೂರು ತಾಲ್ಲೂಕಿನ ಗೋರಟಾದಲ್ಲಿ ಮನೆಗಳಿಗೆ ನೀರು ನುಗ್ಗಿದೆ. ತಾಲ್ಲೂಕಿನ ಕಾರಂಜಾ ಜಲಾಶಯ, ಬಸವಕಲ್ಯಾಣ ಸಮೀಪದ ಚುಳಕಿನಾಲಾ ಹಾಗೂ ಮುಲ್ಲಾಮರಿ ಮೇಲ್ದಂಡೆ ಜಲಾಶಯ ಭರ್ತಿಯಾಗಿವೆ.

ಚಿಟಗುಪ್ಪ ತಾಲ್ಲೂಕಿನ ಬೇಮಳಖೇಡದಲ್ಲಿ ಅತಿ ಹೆಚ್ಚು 8.1 ಸೆಂ.ಮೀ. ಮತ್ತು ಹುಮನಾಬಾದ್ ತಾಲ್ಲೂಕಿನ ದುಬಲಗುಂಡಿಯಲ್ಲಿ 6.7 ಸೆಂ.ಮೀ ಮಳೆ ದಾಖಲಾಗಿದೆ.

ಕಲಬುರ್ಗಿ ನಗರ ಸೇರಿದಂತೆ ಚಿಂಚೋಳಿ ತಾಲ್ಲೂಕಿನ ವಿವಿಧೆಡೆ ಮಳೆಯಾಗಿದೆ. ಚಿಂಚೋಳಿ ತಾಲ್ಲೂಕಿನ ಚಂದ್ರಂಪಳ್ಳಿ ಜಲಾಶಯ ತುಂಬಿದ್ದು ಇಲ್ಲಿಂದ 1,820 ಕ್ಯುಸೆಕ್, ನಾಗರಾಳ ಜಲಾಶಯದಿಂದ 1,060 ಕ್ಯುಸೆಕ್ ನೀರು ಹೊರ ಬಿಡಲಾಗಿದೆ.

ಕಳೆದ 24 ಗಂಟೆಗಳಲ್ಲಿ ಚಿಂಚೋಳಿಯಲ್ಲಿ 7.4 ಸೆಂ.ಮೀ, ಕುಂಚಾವರಂ–4.0 ಸೆಂ.ಮೀ ಮಳೆ ದಾಖಲಾಗಿದೆ.

ಮಂಗಳೂರು ವರದಿ: ಕರಾವಳಿ ಜಿಲ್ಲೆಗಳಲ್ಲಿ ಉತ್ತಮ ಮಳೆ ಮುಂದುವರಿದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2–3 ದಿನದಿಂದ ಮಳೆ ಸುರಿಯುತ್ತಿದೆ. ಸೋಮವಾರ ಮಳೆಯಿಂದಾಗಿ ಒಂದು ಮನೆಗೆ ಭಾಗಶಃ ಹಾನಿಯಾಗಿದೆ. ಉಡುಪಿ ಜಿಲ್ಲೆಯ ವಿವಿಧೆಡೆ ಬಿರುಸಿನ ಮಳೆ ಸುರಿಯಿತು. ಸೆ.1ರವರೆಗೆ ಜಿಲ್ಲೆಯಾದ್ಯಂತ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	117.62	4,094	9,721
ಹಾರಂಗಿ	2,859	2,857.57	2,537	1,600
ಕಬಿನಿ	2,284	2,281.25	4,500	5,000
ಹೇಮಾವತಿ	2,922	2,917.22	2,911	5,120
ಲಿಂಗನಮಕ್ಕಿ	1,819	1,812.65	7,112	-
ಸೂಪಾ (ಮೀ)	564	553.20	3,402	821
ಮಾಣಿ	594.36	585.78	1,456	-
ತುಂಗಭದ್ರಾ	1,633	1,632.39	14,690	10,451
ಮಲಪ್ರಭಾ	2,079.50	2,078.40	2,491	894
ಘಟಪ್ರಭಾ	2,175	2,175	1,827	1,827
ಭದ್ರಾ	186	185.20	5,063	3,246
ಆಲಮಟ್ಟಿ (ಮೀ)	519.60	519.60	13,377	13,377
ನಾರಾಯಣಪುರ (ಮೀ)	492.25	491.96	14,000	4,950

* ನೆಲಮಟ್ಟದಿಂದ



[ಮನಸ್ಸು ಶಾಂತವೂ ಜಾಗೃತವೂ ಮತ್ತು ಪೂರ್ಣತೃಪ್ತವೂ ಆಗಿದ್ದಾಗ ಅದು ಲೇಸರ್ ಕಿರಣವಾಗುತ್ತದೆ. ಇದಕ್ಕೆ ನೆರವಾಗುತ್ತದೆ ಧ್ಯಾನಸಾಧನೆ.]

ಧ್ಯಾನದ ಬೆಳಕು



ಪ್ರಜ್ಞಾ ಮತ್ತಿಹಳ್ಳಿ

ಮನಸ್ಸು ಸೂಕ್ಷ್ಮವಾದ ಹೂವಿನಂತಿದೆಯೆಂದು ಮನೋವಿಜ್ಞಾನಿಗಳು ಹೇಳುತ್ತಲೇ ಬಂದಿದ್ದಾರೆ. ಈ ಹೃದಯಕಮಲವು ಅರಳಿದಾಗ ಸರ್ವಸಿದ್ಧಿಯು ಸಾಧ್ಯವಾಗಿ ಮನುಷ್ಯನು ಭೂಮಿಯನ್ನೇ ನಂದನವನ್ನಾಗಿಸಬಲ್ಲ. ಮನಸ್ಸು ಶಾಂತವೂ ಜಾಗೃತವೂ ಮತ್ತು ಪೂರ್ಣತೃಪ್ತವೂ ಆಗಿದ್ದಾಗ ಅದು ಲೇಸರ್ ಕಿರಣವಾಗುತ್ತದೆ ಎಂಬುದು ಜ್ಞಾನಿಗಳ ನುಡಿ. ಹಾಗಾದರೆ ಈ ಮನಸ್ಸನ್ನು ಕ್ರಿಯಾಶೀಲವಾಗಿದ್ದುಕೊಂಡೂ ಶಾಂತಗೊಳಿಸುವುದು ಹೇಗೆ?

ಲಾಕ್‌ಡೌನ್ ಕಾಲದಲ್ಲಿ ಅನೇಕ ಜನರು ತಮ್ಮ ಮನಸ್ಸುಗಳು ಜಡವಾದ ಕಾರಣದಿಂದ ಬೇರೆ ಬೇರೆ ಬಗೆಯ ಆರೋಗ್ಯ ಸಮಸ್ಯೆಗಳನ್ನು ಅನುಭವಿಸಬೇಕಾಯಿತು. ಮನಸ್ಸನ್ನು ಧನಾತ್ಮಕ ಆಲೋಚನೆಗಳ ಕಡೆಗೆ ಕ್ರಿಯಾಶೀಲಗೊಳಿಸುವ ಅತ್ಯಂತ ಸರಳ ಉಪಾಯವೆಂದರೆ ಧ್ಯಾನ. ಮನುಷ್ಯ ತನ್ನ ಸುತ್ತಲಿನ ಪರಿಸರಕ್ಕೆ ತಕ್ಕಂತೆ ಸ್ವರೂಪ ಮತ್ತು ಕ್ರಿಯೆಗಳಲ್ಲಿ ಬದಲಾವಣೆ ತರಬಲ್ಲ ಶಕ್ತಿಯನ್ನು 'ನ್ಯೂರೊಪ್ಲಾಸ್ಟಿಸಿಟಿ' ಎಂದು ಕರೆಯುತ್ತಾರೆ. ವಿಸ್ಕೊನಸಿನ್ ವಿಶ್ವವಿದ್ಯಾಲಯದ ರಿಚರ್ಡ್ ಡೆವಿಡ್ ಸನ್ ಎನ್ನುವ ತಜ್ಞ ನಡೆಸಿದ ಅಧ್ಯಯನ ದೃಢಪಡಿಸುವುದೇನೆಂದರೆ ಧ್ಯಾನದಿಂದ ಗಾಮಾ ತರಂಗಗಳ ಚಟುವಟಿಕೆ ಉಂಟಾಗುತ್ತದೆ ಮತ್ತು ಇದು ಆಲೋಚನೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ನ್ಯೂರೊಪ್ಲಾಸ್ಟಿಸಿಟಿಯನ್ನು ಹೆಚ್ಚಿಸುತ್ತದೆ.

ಮನುಷ್ಯನ ಮೆದುಳಿನಲ್ಲಿ ಹಿಪ್ಪೊಕ್ಯಾಂಪಸ್ ಎನ್ನುವ ಭಾಗವಿದೆ. ನಮ್ಮ ಕ್ಷಣಕ್ಷಣದ ಅನುಭವಗಳನ್ನು ಅಲ್ಪಾವಧಿಯ ನೆನಪುಗಳಿಂದ ದಿರ್ಘಾವಧಿ ನೆನಪುಗಳನ್ನಾಗಿ ಪರಿವರ್ತಿಸುವುದು ಇದರ ಪ್ರಮುಖ ಕೆಲಸ. ಧ್ಯಾನದಿಂದ ಈ ಹಿಪ್ಪೊಕ್ಯಾಂಪಸ್ ತನ್ನ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಆದ್ದರಿಂದ ಬಹುಕಾಲ ಧ್ಯಾನ ಮಾಡಿದವರು ಅಪರಿಮಿತವಾದ ಏಕಾಗ್ರತೆ ಮತ್ತು ಸ್ಮರಣಶಕ್ತಿಯನ್ನು ಹೊಂದಬಲ್ಲರು. ನೆನಪಿಗೆ ಸಂಬಂಧಿಸಿದ ಕಾಯಿಲೆಯಾಗಿರುವ ಡಿಮೆನ್ಶಿಯಾ ಮತ್ತು ಅಲ್ಜೈಮರ್ ಬಗ್ಗೆ ಎಲ್ಲರಿಗೂ ಗೊತ್ತಿದೆ. ಬೊಸ್ಟನ್‌ನಲ್ಲಿರುವ ಬೆತ್ ಇಸ್ರೇಲ್ ಡಿಯಾಕೊನೆಸ್ ವೈದ್ಯಕೀಯ ಕೇಂದ್ರವು ನಡೆಸಿದ ಅಧ್ಯಯನದ ಫಲಿತಾಂಶವೇನೆಂದರೆ, ಧ್ಯಾನದಿಂದ ಎಂಟು ವಾರಗಳಲ್ಲಿ ಈ ಕಾಯಿಲೆಯಲ್ಲಿ ಇಳಿಕೆ ಕಂಡುಬಂದಿರುವುದು.

> ಧ್ಯಾನದ ಸಕಾರಾತ್ಮಕ ಪರಿಣಾಮಗಳಲ್ಲಿ ಅತಿಮುಖ್ಯ ಎನಿಸುವಂತಹುದು ಧನಾತ್ಮಕ ಭಾವದ ಹೆಚ್ಚಳ. ಧ್ಯಾನವು ಮೆದುಳಿನಲ್ಲಿರುವ ವೇಗಸ್ ನರವನ್ನು ಪ್ರಚೋದಿಸುತ್ತದೆ. ಇದು ಸೆರೊಟೊನಿನ್ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಆಗ ಆಕ್ಸಿಟೊಸಿನ್ ಎಂಬ ಹಾರ್ಮೋನ್ ಸ್ರವಿಸುತ್ತದೆ. ಇದರಿಂದ ಪ್ರೀತಿ, ಕರುಣೆ, ಕ್ಷಮೆ, ಅನುಬಂಧ ಮುಂತಾದ ಭಾವಗಳು ಮೂಡುತ್ತವೆ. ಪ್ರಸ್ತುತ ಜಗತ್ತಿನಲ್ಲಿ ನಾವು ಎದುರಿಸುತ್ತಿರುವ ಬಹುತೇಕ ಸಮಸ್ಯೆಗಳಿಗೆ ಮುಖ್ಯ ಕಾರಣವೇ ಈ ಅನುಬಂಧದ ಕೊರತೆ. ಜಾತಿ-ಧರ್ಮ-ಗಡಿ-ಜಲ ಇವೆಲ್ಲವುಗಳನ್ನು ನೆಪವಾಗಿಟ್ಟುಕೊಂಡು ಹಿಂಸೆಗೆ ಇಳಿದಿರುವ ಮನುಕುಲವು ತನ್ನ ಧನಾತ್ಮಕ ಭಾವಕೋಶವನ್ನು ತುಂಬಿಕೊಂಡಾಗ ದೇಹದ ಪ್ರತಿ ಅಣುವೂ ಪ್ರಾಣವನ್ನು ತುಂಬಿಕೊಳ್ಳುತ್ತದೆ; ಸಂತೋಷ, ಶಾಂತಿ ತುಂಬಿಕೊಂಡು ಉತ್ಸಾಹ ಮೂಡುತ್ತದೆ. ಇದರಿಂದ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವೂ ಹೆಚ್ಚುತ್ತದೆ.

ಕೊರೊನಾ ವೈರಾಣುವಿನಿಂದ ರೋಗ-ಸಾವಿನ ಭೀತಿ ಹಾಗೂ ಪದೇಪದೇ ಲಾಕ್‌ಡೌನ್ ಪರಿಣಾಮದ ಆರ್ಥಿಕ ಮುಗ್ಗಟ್ಟು – ಇವುಗಳಿಂದ ಬಹುತೇಕ ಜನರು ಒತ್ತಡಕ್ಕೆ ಒಳಗಾಗಿದ್ದಾರೆ. ನಮ್ಮ ಮೆದುಳಿನಲ್ಲಿ ಕಾರ್ಟಿಸೊಲ ಎಂಬ ಹಾರ್ಮೋನ್ ಉತ್ಪತ್ತಿಯಾದಾಗ ಸೈಟೊಕೆನ್ ಎನ್ನುವ ರಾಸಾಯನಿಕ ಸೃಜಿಸಿ ಒತ್ತಡ ಉಂಟಾಗುತ್ತದೆ. ಇದರ ಪರಿಣಾಮವಾಗಿ ನಿದ್ರಾಹೀನತೆ, ಖಿನ್ನತೆ, ಉದ್ವೇಗ, ರಕ್ತದೊತ್ತಡ ಏರಿಕೆ, ಸುಸ್ತು ಇವೆಲ್ಲ ಕಾಣಿಸಿಕೊಳ್ಳುತ್ತವೆ. ಕ್ರಮಬದ್ಧವಾದ ಧ್ಯಾನವನ್ನು ನಿಯಮಿತವಾಗಿ ಮಾಡಿದಾಗ ಸೈಟೊಕೆನ್ ರಾಸಾಯನಿಕದ ಉತ್ಪಾದನೆ ತಗ್ಗುತ್ತ ಹೋಗುತ್ತದೆ.

ಮೆಸಾಚುಸೆಟ್ಸ್ ಆಸ್ಪತ್ರೆಯಲ್ಲಿ ಕೈಗೊಂಡ ಅಧ್ಯಯನವೊಂದರಲ್ಲಿ, ರೋಗಿಗಳಿಗೆ ಮೂರು ತಿಂಗಳು ಧ್ಯಾನ ಮಾಡಿಸಿದಾಗ ಶೇ.64 ಜನರಲ್ಲಿ ರಕ್ತದೊತ್ತಡದಲ್ಲಿ ಇಳಿಕೆ ಕಂಡು ಬಂದಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಧ್ಯಾನದಿಂದ ಮೆದುಳಿನಲ್ಲಿ ನೈಟ್ರಿಕ್ ಆಸಿಡ್ ಉತ್ಪನ್ನವಾಗುತ್ತದೆ ಹಾಗೂ ಇದು ರಕ್ತದೊತ್ತಡವನ್ನು ತಗ್ಗಿಸುತ್ತದೆ.

ವೇಕ್ ಫಾರೆಸ್ಟ್ ಬ್ಯಾಪ್ಟಿಸ್ಟ್ ವಿಶ್ವವಿದ್ಯಾಲಯದ ಪ್ರಯೋಗವು ಬಹಳ ಆಸಕ್ತಿದಾಯಕ ಅಂಶವನ್ನು ದೃಢಪಡಿಸಿದೆ. ಧ್ಯಾನದಿಂದ ಮೆದುಳಿನಲ್ಲಿರುವ ಸೊಮಾಟೊ ಸೆನ್ಸರಿ ಕಾರ್ಟೆಕ್ಸ್ ಶಾಂತಗೊಳ್ಳುತ್ತದೆ. ಇದರ ಪರಿಣಾಮವಾಗಿ ಶೇ.40ರಷ್ಟು ನೋವಿನ ತೀಕ್ಷ್ಣತೆಯು ಶಮನಗೊಳ್ಳುತ್ತದೆ. ನೋವು ನಿವಾರಣೆಯಲ್ಲಿ ಬಹುತೇಕವಾಗಿ ಬಳಕೆಯಾಗುವ ಮಾರ್ಫಿನ್ ನೋವಿನ ತೀವ್ರತೆಯನ್ನು ಶೇ. 25ರಷ್ಟು ಮಾತ್ರ ಇಳಿಸಬಲ್ಲುದು. ಹೀಗೆ ಬಾಹ್ಯ ಔಷಧಿಗಳು ಮಾಡುವ ಪರಿಣಾಮಕ್ಕಿಂತಲೂ ಅಧಿಕವಾದ ಉಪಶಮನವನ್ನು ಧ್ಯಾನದಿಂದ ಪಡೆಯಬಹುದು.

ಮನುಷ್ಯ ನಾನು ಯಾರು, ನನ್ನ ಯೋಗ್ಯತೆಯೇನು, ನನ್ನ ಸಾಮರ್ಥ್ಯವೇನು, ನನ್ನ ಮಿತಿಗಳೇನು – ಎಂದು ತಿಳಿದುಕೊಂಡರೆ ಸ್ವ-ಕಲ್ಯಾಣ ಹಾಗೂ ವಿಶ್ವಪ್ರಗತಿ ಎರಡನ್ನೂ ಸಾಧಿಸಬಲ್ಲ. ಈ ನಿಟ್ಟಿನಲ್ಲಿ ಅಂತರ್ವೀಕ್ಷಣೆಯ ಧ್ಯಾನವು ಅಪಾರವಾದ ಸ್ವ-ಅರಿವನ್ನು ಸಾಧ್ಯವಾಗಿಸುತ್ತದೆ. ನಮ್ಮ ದೇಹದ ಕ್ರೊಮೊಸೊಮುಗಳ ತುದಿಗೆ ಟೋಪಿಯಂತಹ ರಕ್ಷಣಾ ಭಾಗವಿದೆ. ಅದಕ್ಕೆ ಟೆಲೆಮೆರ್ಸ್ ಎನ್ನುತ್ತಾರೆ. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ ತನ್ನ ಅಧ್ಯಯನದಲ್ಲಿ ಗಮನಿಸಿರುವಂತೆ, ಧ್ಯಾನದಿಂದ ಎಂಜೈಮ್ ಹೆಚ್ಚಳ ಉಂಟಾಗಿ ಟೆಲೆಮರ್ಸ್‌ಗಳು ಹೆಚ್ಚುತ್ತವೆ. ಇದರಿಂದ ವಯೋಹೆಚ್ಚಳದ ಪರಿಣಾಮಗಳು (ಆ್ಯಂಟಿ ಏಜಿಂಗ್) ನಿಯಂತ್ರಣಗೊಳ್ಳುತ್ತವೆ. ಧ್ಯಾನವು ಕೇವಲ ಮೆದುಳಿಗಷ್ಟೇ ಅಲ್ಲ, ಹೃದಯಕ್ಕೂ ಕೂಡ ಲಾಭದಾಯಕವೆಂದು ಸಾಬೀತಾಗಿದೆ. ನವೆಂಬರ್ 2012ರಲ್ಲಿ 201 ಹೃದಯರೋಗಿಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಧ್ಯಾನವು ಕಾರ್ಡಿಯೊವಾಸ್ಕ್ಯುಲರ್ ಗುಣಮಟ್ಟವನ್ನು ಹೆಚ್ಚಿಸಿದೆಯೆಂದು ತಿಳಿದು ಬಂದಿದೆ. ಚಟಮುಕ್ತರಾಗುವ ನಿಟ್ಟಿನಲ್ಲಿ ಕೂಡ ಧ್ಯಾನವು ಪರಿಣಾಮಕಾರಿಯೆಂದು ಸಾಬೀತಾಗಿದೆ. ಮನಸ್ಸನ್ನು ಥಳಥಳ ಬೆಳಗಿಸಿ ಚೈತನ್ಯಪೂರ್ಣವಾದ ಜೀವಪ್ರಣತಿ ಹೊತ್ತಿಸಲು ಧ್ಯಾನವೆಂಬುದು ಸಂಜೀವಿನಿಯಾಗಿದೆ. ❖

ಪಾನೀಯ: ಕುಡಿಯುವ ಮೊದಲು ಯೋಚಿಸಿ

ಡಾ. ವಿಜಯಲಕ್ಷ್ಮಿ ಪಿ.

'**ಕೋ** ಅರುಕ್, ಕೋ ಅರುಕ್, ಕೋ ಅರುಕ್' ಎಂದು ಪಕ್ಷಿರೂಪದಲ್ಲಿ ಬಂದು ಕೇಳಿದ ಧನ್ವಂತರಿಗೆ 'ಹಿತ ಭುಕ್, ಮಿತ ಭುಕ್, ಋತು ಭುಕ್' ಎಂಬುದು ವಾಗ್ಭಟಾಚಾರ್ಯರ ಉತ್ತರವಾಗಿತ್ತು. ಯಾರು ನಿರೋಗಿಯಾಗಿರುತ್ತಾರೆ ಎಂದರೆ – ಯಾರು ಹಿತವಾಗಿ, ಮಿತವಾಗಿ, ಋತುವಿಗೆ ಅನುಗುಣವಾಗಿ ಆಹಾರ ಸೇವಿಸುತ್ತಾರೋ ಅವರು ನಿರೋಗಿಯಾಗಿರುತ್ತಾರೆ ಎಂದು.

ಯಾವುದೇ ಆಹಾರವಾದರೂ ಹಿತವಾಗಿ ಮಿತವಾಗಿ ಸೇವಿಸಿದರೆ ಆರೋಗ್ಯ ಉತ್ಪತ್ತಿ ಮಾಡಬಹುದು, ಹಾಗೆಯೇ ಪಾನೀಯಗಳೂ ಸಹ. ಅದು ಕಾಫಿ, ಟೀಗಳೇ ಇರಬಹುದು ಅಥವಾ ಯಾವುದೇ ಹಣ್ಣಿನ ರಸ, ಸೊಪ್ಪಿನ ರಸಗಳೇ ಇರಬಹುದು. ಅತಿಯಾದರೆ ಅಮೃತವೂ ವಿಷವೇ ಆಗುತ್ತದೆ.

ಈಗಿನ ಕೋವಿಡ್ ಸಂದರ್ಭದಲ್ಲಿ ಅನೇಕರು ಅನೇಕ ರೀತಿಯ ಕಷಾಯಗಳನ್ನು ಮೆಣಸು, ಶುಂಠಿ, ದನಿಯಾ, ಮೆಣಸು, ಬೆಳ್ಳುಳ್ಳಿ ಇತ್ಯಾದಿ ಅನೇಕ ಮಸಾಲೆ ಪದಾರ್ಥಗಳನ್ನು ಹಾಕಿ ಕಷಾಯ ಮಾಡಿ ನಿತ್ಯ ಸೇವಿಸುವವರಿದ್ದಾರೆ. ಇದು ಉಷ್ಣವೋ ಶೀತವೋ ಒಳಿತೋ ಕೆಡಕೋ ಎಂದು ಯೋಚಿಸದೆ ಸೇವಿಸುವುದರಿಂದ ಅಮ್ಲಪಿತ್ತ, ಮಲಬದ್ಧತೆ, ರಕ್ತಯುಕ್ತ ಮಲಪ್ರವೃತ್ತಿ, ಮೂತ್ರವಿಕೃತಿಗಳು ಹೆಚ್ಚಾಗುತ್ತಿವೆ. ಆದ್ದರಿಂದ ಯಾವುದೇ ಕಷಾಯ ಉಪಯೋಗಿಸುವಾಗ ಇದು ನಮ್ಮ ದೇಹದ ಮೇಲೆ ಯಾವ ಪರಿಣಾಮ ಬೀರುತ್ತಿದೆ, ಎನ್ನುವುದನ್ನು ಗಮನಿಸಿ ಹಿತವಾಗುತ್ತಿದ್ದರೆ ಮಾತ್ರ ಸೇವಿಸಬಹುದು. ಹಿತವಾಗುತ್ತಿದ್ದರೂ ಮಿತವಾಗಿ ಸೇವಿಸುವುದು ಒಳ್ಳೆಯದು.

ಇನ್ನು ಕೆಲವರು ಆರೋಗ್ಯಕ್ಕೆ ಒಳ್ಳೆಯದು ಎಂದು ದಿನಕ್ಕೊಂದು ಸೊಪ್ಪಿನ ರಸವನ್ನು ಅಥವಾ ದಿನವೂ ಎರಡು ಅಥವಾ ಮೂರು ಸೊಪ್ಪುಗಳ ಮಿಶ್ರಣದಿಂದ ತಯಾರಾಗುವ ರಸಗಳನ್ನು ಸೇವಿಸುವ ಪರಿಪಾಠ ಹೆಚ್ಚಾಗುತ್ತಿದೆ. ಇದೂ ಸಹ ವೈದ್ಯರ ಸಲಹೆಯ ಮೇರೆಗೆ ಕೆಲವು ದಿನಗಳ ಉಪಯೋಗ ಸ್ವಾಸ್ಥ್ಯಕಾರಕವಾಗುತ್ತದೆ. ಯಾವುದೇ ವಿಧಿನಿಯಮಗಳನ್ನು ಪಾಲಿಸದೆ ಇಡೀ ವರ್ಷವೂ ಯಾರೋ ತಂದು ಮಾರಾಟಮಾಡುವ ಸೊಪ್ಪಿನ ರಸಗಳನ್ನು ಆರೋಗ್ಯಕರವೆಂದು ಸೇವಿಸುವುದು, ಅಥವಾ ತಾವೇ ತಯಾರಿಸಿ ಅಗತ್ಯಕ್ಕಿಂತ ಹೆಚ್ಚುದಿನ ಸೇವಿಸುವುದು ಒಂದು ರೋಗವನ್ನು ಗುಣಪಡಿಸಿದರೂ ಇನ್ನೊಂದು ರೋಗಕ್ಕೆ ಕಾರಣವಾಗುತ್ತದೆ.

ಹಾಗೆಯೇ ತಂಪಾಗಿರುವ ಕಾರ್ಬೋನೇಟೆಡ್ ಪಾನೀಯಗಳ ಸೇವನೆ, ಆರೋಗ್ಯವಂತರಿಗೆ ಎಲ್ಲ ಸಂದರ್ಭಗಳಲ್ಲೂ ಮೂತ್ರ ಮತ್ತು ಮೂತ್ರವಹ ಸ್ರೋತಸ್ಸಿನ ರೋಗೋತ್ಪತ್ತಿಗೆ ಕಾರಣವಾಗುತ್ತದೆ. ಹಾಗೆಯೇ ಅತಿ ತಂಪಾದ ಹಣ್ಣಿನ ರಸಸೇವನೆಯೂ ಸಹ ಬೇಸಗೆಯಲ್ಲಿ ಅಥವಾ ಬಿಸಿಲಿರುವ ಸಂದರ್ಭಗಳನ್ನು ಹೊರತುಪಡಿಸಿ ಬೇರೆಲ್ಲಾ ಸಂದರ್ಭದಲ್ಲಿ ಒಳ್ಳೆಯದಲ್ಲ. ಇನ್ನು ಹೃದಯ ಸಂಬಂಧಿ ರೋಗಗಳು, ರಕ್ತ ಕಡಿಮೆ ಇರುವ ರೋಗಗಳಲ್ಲಿ ಬೀಜ ಇರುವ ಕಪ್ಪುದ್ರಾಕ್ಷಿ, ಅಥವಾ ದಾಳಿಂಬೆ ಹಣ್ಣನ್ನು ನುಣ್ಣಗೆ ರುಬ್ಬಿ ಸ್ವಲ್ಪ ನೀರು ಸೇರಿಸಿ ಕುದಿಸಿ ತಣಿದ ನಂತರ ಶೋಧಿಸಿ ಅವಶ್ಯಕತೆ ಇದ್ದಲ್ಲಿ ಸಕ್ಕರೆ ಅಥವಾ ಬೆಲ್ಲ ಸೇರಿಸಿ ಕುಡಿಯುವುದು ಸೂಕ್ತ. ಹಾಗೆಯೇ ಪಾನೀಯ ತಯಾರಿಸುವಾಗ ಭತ್ತದ ಅರಳು ಮತ್ತು ಹಣ್ಣಿನ ರಸವನ್ನು ಸೇರಿಸಿ ಚೆನ್ನಾಗಿ ಕಡೆದು, ಜೇನು, ಸಕ್ಕರೆ ಅಥವಾ ಬೆಲ್ಲ ಮತ್ತು ಏಲಕ್ಕಿ, ಚಿಟಿಕೆಯಷ್ಟು ಅಲ್ಪ ಪ್ರಮಾಣದಲ್ಲಿ ಮೆಣಸನ್ನು ಸೇರಿಸಿ ಸೇವಿಸುವ ಮಂಥ ಎಲ್ಲಾ ವಯಸ್ಸಿನವರೂ ಎಲ್ಲಾ ಕಾಲದಲ್ಲೂ ಸೇವಿಸಬಹುದಾದ ಪಾನೀಯ.



ಬೇಸಗೆಯಲ್ಲಿ ನೀರಿನ ಬದಲು ನೀರುಮಜ್ಜಿಗೆಯನ್ನು ಸೇವಿಸುವುದು, ಅಥವಾ ಎಳೆನೀರು ಸೇವಿಸುವುದು ಜೀರ್ಣಶಕ್ತಿಯನ್ನು ಹೆಚ್ಚಿಸಿ ಆರೋಗ್ಯವನ್ನು ಕೊಡುತ್ತದೆ. ಅಗತ್ಯಕ್ಕಿಂತ ಹೆಚ್ಚು ನೀರಿನ ಸೇವನೆಯೂ ಅನಾರೋಗ್ಯಕಾರಕವೇ. ದೇಹ ಬಯಸುವಷ್ಟು ನೀರನ್ನು ಸೇವಿಸಿದರೆ ನೀರು ಆರೋಗ್ಯವನ್ನು ವರ್ಧಿಸುತ್ತದೆ. ಇಷ್ಟೇ ಲೀಟರ್ ನೀರು ಕುಡಿಯಬೇಕೆಂದು ಊಟಕ್ಕಿಂತ ಹೆಚ್ಚು ಉಪ್ಪಿನಕಾಯಿ ಎಂಬಂತೆ ನೀರಿನ ಸೇವನೆ ಪೋಷಕಾಂಶಗಳ ಕೊರತೆಯನ್ನೇ ಉತ್ಪತ್ತಿ ಮಾಡುತ್ತದೆ. ಊಟದ ಜೊತೆಜೊತೆಯಲ್ಲಿ, ಬಿಸಿಲಿನಿಂದ, ಆಯಾಸದಿಂದ ಬಳಲಿದಾಗ, ಬಾಯಾರಿಕೆಯಾದಾಗ ನೀರನ್ನು ಸೇವಿಸುವುದು ಒಳ್ಳೆಯದು. ಊಟಕ್ಕೆ ಮೊದಲು ನೀರನ್ನು ಕುಡಿಯುವುದು ಪೋಷಕಾಂಶಗಳ ಕೊರತೆಯನ್ನು ಉತ್ಪತ್ತಿ ಮಾಡಿದರೆ. ಊಟದ ನಂತರ ಹೆಚ್ಚು ನೀರು ಕುಡಿಯುವುದು ಅಜೀರ್ಣಕ್ಕೆ ಕಾರಣವಾಗುತ್ತದೆ. ಊಟದ ಜೊತೆಯಲ್ಲಿ ಕುಡಿಯುವ ನೀರು ಆಹಾರ ಜೀರ್ಣವಾಗಲು ಪೋಷಕಾಂಶಗಳು ದೇಹಕ್ಕೆ ಸರಿಯಾದ ಪ್ರಮಾಣದಲ್ಲಿ ಸೇರಲು ಸಹಕಾರಿಯಾಗುತ್ತದೆ. ಯಾವುದೇ ರೋಗಬಾರದಂತೆ ತಡೆಗಟ್ಟಲು ಮೊದಲು ದೇಹದಲ್ಲಿ ಅಜೀರ್ಣ ಇರದಂತೆ ನೋಡಿಕೊಳ್ಳಬೇಕು.ಇದಕ್ಕೆ ಸರಿಯಾದ ಉಪಾಯ ಅಹಾರದೊಡನೆ ಬಿಸಿನೀರನ್ನು ಸೇವಿಸುವುದು. ಬಿಸಿನೀರು ಎಂದಾಗ ಕುದಿಸಿ ತಣಿಯುತ್ತಿರುವ ನೀರೇ ಹೊರತು ಕೇವಲ ಬಿಸಿ ಮಾಡಿದ ನೀರಲ್ಲ. ಇನ್ನೂ ಹೆಚ್ಚು ಉಪಕಾರವಾಗಲು ಬೇಸಿಗೆಯಲ್ಲಿ ಶ್ರೀಗಂಧ, ಲಾವಂಚ, ಏಲಕ್ಕಿ, ಮಳೆಗಾಲದಲ್ಲಿ ಕೊನ್ನಾರಿ ಗಡ್ಡೆ, ಜೀರಿಗೆ, ಕಾಚು, ಖದಿರ, ಚಳಿಗಾಲದಲ್ಲಿ ಶುಂಠಿ, ಮೆಣಸು, ಹಿಪ್ಪಲಿ ಇತ್ಯಾದಿಗಳನ್ನು ಚಿಟಿಕೆಯಷ್ಟು ಅಲ್ಪ ಪ್ರಮಾಣದಲ್ಲಿ ನೀರಿಗೆ ಹಾಕಿ ಕುದಿಸಿ ಬಿಸಿ ಇರುವಾಗ ಅಥವಾ ತಣ್ಣಗಾದ ನಂತರ ಕುಡಿಯುವುದು ಆರೋಗ್ಯಕರ. ❖

ಆಲೋಚನೆಗಳು ನಿಯಂತ್ರಣದಲ್ಲಿರಲಿ

ರಘು ವಿ.


ಜಗತ್ತು ಆಲೋಚನೆಗಳ ಮೊತ್ತ. ಇಡೀ ಸೃಷ್ಟಿಯಾದದ್ದೇ ಸಂಕಲ್ಪದಿಂದ ಎಂಬ ನಂಬಿಕೆಯಿದೆ. ಸಂಕಲ್ಪವೆಂದರೆ ಗಟ್ಟಿಯಾದ ಆಲೋಚನೆಯೇ ಅಲ್ಲದೆ ಬೇರೇನೂ ಅಲ್ಲ. ನಮ್ಮ ಜೀವನವೂ ಕೂಡ ಆಲೋಚನೆಗಳಿಂದ ನೇಯ್ದದ್ದು, ಆಲೋಚನೆಗಳ ವ್ಯಕ್ತರೂಪವೇ ಬದುಕು. ಪ್ರತಿ ಕ್ಷಣವೂ ಮನಸ್ಸಿನಲ್ಲಿ ಆಲೋಚನೆಯ ಅಲೆ ಇದ್ದೇ ಇರುತ್ತದೆ. ಅಧ್ಯಾತ್ಮದ ಪ್ರಕಾರ ಈ ಆಲೋಚನೆಗಳ ತರಂಗವನ್ನು ನಿಲ್ಲಿಸುವ ಪ್ರಯತ್ನವೇ ಸಾಧನೆ. ಅದು ನಿಂತಾಗಲೇ ಸಮಾಧಿ. ಆಲೋಚನೆಗಳು ವ್ಯಕ್ತಿಯನ್ನು ನಿರ್ಮಾಣ ಮಾಡಲೂಬಹುದು, ನಿರ್ನಾಮ ಮಾಡಲೂಬಹುದು. ಆದುದರಿಂದಲೇ ಆಲೋಚನೆಗಳ ಬಗ್ಗೆ ಎಚ್ಚರವಹಿಸಬೇಕು. ಹೀಗೆಂದ ಮಾತ್ರಕ್ಕೆ ಮನಸ್ಸಿನ ಆಲೋಚನಾಪ್ರವಾಹ ಕಂಡು ಕಂಗಾಲಾಗುವುದು ಬೇಡ. ಮನಸ್ಸಿನ ಸ್ವಭಾವವೇ ಆಲೋಚನೆಯಾದ್ದರಿಂದ ಅದರ ಒಳ್ಳೆಯ ಆಲೋಚನೆಗಳನ್ನು ಪ್ರೋತ್ಸಾಹಿಸಿ ಆರೋಗ್ಯಕಾರಿಯಲ್ಲದ ಆಲೋಚನೆಗಳನ್ನು ಕಡೆಗಣಿಸುವುದು ಉತ್ತಮ ಉಪಾಯ. ಇದು ಒಂದೆರಡು ದಿನದ ಅಭ್ಯಾಸದಿಂದ ಲಭಿಸುವಂತಹುದಲ್ಲ. 'ಏಸು ಸಲ ತಪವಗೈದೇಸು ಬನ್ನವನಾಂತು'. ಇದನ್ನು ಸಾಧಿಸಬೇಕು. ಹೀಗೆ ಗಳಿಸಿದ ಮನಸ್ಸು ಒನಕೆಯಾಗುತ್ತದೆ, ಆಯುಧವಾಗುತ್ತದೆ, ವಿವೇಕವಾಗುತ್ತದೆ, ಸಾಣೆ ಹಿಡಿದ ವಜ್ರವಾಗುತ್ತದೆ. ಮನಸ್ಸಿನಲ್ಲಿ ಹುಟ್ಟುವ ಭಾವಗಳನ್ನು ವಿವೇಕದ ಒನಕೆಯಿಂದ ಕುಟ್ಟಿ ಆಲೋಚನೆಯೆಂಬ ಬತ್ತವನ್ನು ಅಕ್ಕಿಯಾಗಿಸಿ ಅನುಭವದ ಮೂಸೆಯಲ್ಲಿ ಬೇಯಿಸಿ ಬದುಕಿಗೆ ಅನ್ನವಾಗಿಸಿಕೊಳ್ಳಬೇಕು. ಇಲ್ಲವಾದರೆ ಆಲೋಚನೆಗಳು ವಿಷವಾಗಿ ನಮ್ಮನ್ನು ಬಲಿತೆಗೆದುಕೊಳ್ಳುತ್ತವೆ. ಕಗ್ಗವು ಇದನ್ನು 'ಚಿತ್ತದನುಭವ ಭಾವ ಸಂಭಾವನೆಗಳೆಲ್ಲ ಬತ್ತ' ಎನ್ನುತ್ತದೆ. 'ವಿಚಾರಯುಕ್ತಿಗಳು ಕುಟ್ಟೆ ತತ್ತ್ವತಂಡುಲ' – ಹೀಗೆ ಮಾಡಿದಾಗ 'ವಿವೇಚಿತತತ್ತ್ವ' ದೊರೆತು ಅದು ನಮಗೆ 'ನಿತ್ಯಭೋಜನ'ವಾಗುತ್ತದೆ.

ಆಲೋಚನೆಗಳು ಕಾಲದ ಬೇರಿನಲ್ಲಿ ಮೊಳೆಯುತ್ತವೆ ಎಂಬುದು ಮುಖ್ಯವಾದ ಅಂಶ. ಭೂತ, ಭವಿಷ್ಯ ಮತ್ತು ವರ್ತಮಾನದ ಕಾಲದೊಳಕ್ಕೆ ಇಳಿದ ಆಲೋಚನೆಗಳ ಬೇರು ಅಲ್ಲಿಂದ ಭಾವದ ಉಸಿರನ್ನು ಹೆಕ್ಕಿ ತರುತ್ತವೆ. ಬಹುತೇಕ ನಮ್ಮ ಆಲೋಚನೆಗಳು ಭೂತ ಅಥವಾ ಭವಿಷ್ಯಕ್ಕೆ ಸಂಬಂಧಿಸಿದವು. ಇವೇ ಆತಂಕಕ್ಕೂ ಕಾರಣವಾಗುವವು. ಆಗಿಹೋಗಿದ್ದರ ಬಗ್ಗೆ ಚಿಂತಿಸಿ ಫಲವಿಲ್ಲದಿದ್ದರೂ ಮನಸ್ಸು ಅದರ ಸುತ್ತಲೇ ಗಿರಕಿ ಹೊಡೆಯುತ್ತಿರುತ್ತದೆ. ಅಥವಾ ಮುಂದೇನು, ಮತ್ತೇನು ಎಂಬ ಚಿಂತೆಗೆ ಒಳಗಾಗಿರುತ್ತದೆ. ಇವೆರಡರ ನಡುವೆ ವರ್ತಮಾನ ಕಳೆದುಹೋಗುತ್ತದೆ. ಹಳೆಯ ಅನುಭವಗಳಿಂದ ಪಾಠ ಕಲಿಯುವುದು, ಭವಿಷ್ಯದ ಬಗ್ಗೆ ಆಲೋಚಿಸುವುದು ತಪ್ಪಲ್ಲ. ಆದರೆ ಅದರ ಬಗ್ಗೆ ಚಿಂತಿಸುವುದು ಸರಿಯಲ್ಲ. ಖಲೀಲ್ ಗಿಬ್ರಾನ್ ಹೇಳುತ್ತಾನೆ: 'ನಮ್ಮ ಆತಂಕ ಉದ್ಭವಿಸುವುದು ಭವಿಷ್ಯದ ಆಲೋಚನೆಯಿಂದಲ್ಲ, ಆದರೆ ಅದನ್ನು ನಿಯಂತ್ರಿಸಬೇಕೆಂಬ ಬಯಕೆಯಲ್ಲಿ' (Our anxiety does not come from thinking about the future, but from wanting to control it). ಇಲ್ಲಿ ಮತ್ತೊಂದು ಸೂಕ್ಷ್ಮವೂ ಇದೆ. ನಮ್ಮ ಮಾತುಗಳಿಗೆಲ್ಲ ಕಾರಣ ಈ ಆತಂಕ, ಉದ್ವೇಗ ಎಂಬುದೇ. ಉದ್ವೇಗಕ್ಕೆ ಮತ್ತೆ ಕಾರಣ ಆಲೋಚನೆ. ಮಹಾತ್ಮರಿಗೆ ಮಾತಿನ ಅಗತ್ಯವೇ ಕಂಡುಬರುವುದಿಲ್ಲ. ಅವರಲ್ಲಿ ಆಲೋಚನಾತರಂಗವೇ ಇಲ್ಲ, ಈ ಜಗತ್ತಿನ ಆಲೋಚನೆಗಳಿಗೆ ಅವರು ಪ್ರತಿಕ್ರಿಯೆ ನೀಡಬೇಕಾಗಿಲ್ಲ ಎಂಬ ಅರಿವು ಮೂಡಿದ ಮೇಲೆ ಅಲ್ಲಿ ಮಾತು ಅನವಶ್ಯಕ ಗದ್ದಲವೆನಿಸಿಕೊಳ್ಳುತ್ತದೆ. ಹೀಗಾಗಿ ಮಹಾತ್ಮರು ಮುನಿಗಳಾಗುತ್ತಾರೆ, ಮೌನಿಗಳಾಗುತ್ತಾರೆ, ರಮಣರಾಗುತ್ತಾರೆ, ರಾಮಕೃಷ್ಣರಾಗುತ್ತಾರೆ. ಮೌನದ ಸಹನೆ ಕಟ್ಟೆಯೊಡೆದು ಮಾತಾಗುತ್ತದೆ. ಖಲೀಲ್ ಗಿಬ್ರಾನ್ ಇದನ್ನು ಎಷ್ಟೊಂದು ಸೊಗಸಾಗಿ ಹೇಳಿದ್ದಾನೆ ನೋಡಿ:

'ಆಲೋಚನೆಗಳೊಂದಿಗಿನ ನಿನ್ನ ಶಾಂತಿ ಕೊನೆಗೊಂಡಾಗ ನೀನು ಮಾತನಾಡುತ್ತಿ;
ಮತ್ತು ನಿನ್ನ ಹೃದಯದ ಏಕಾಂತದಲ್ಲಿ
ನೀನು ಇರಲಾರದಾದಾಗ ನಿನ್ನ ತುಟಿಗಳ
ಮೂಲಕ ಬದುಕಲಾರಂಭಿಸುತ್ತೀ,
ಶಬ್ದಗಳು ಗಮನಬದಲಿಕೆ ಮತ್ತು
ಕಾಲಕ್ಷೇಪವಾಗಿರುತ್ತವೆ.
ನಿನ್ನ ಮಾತುಗಳು ಆಲೋಚನೆಗಳ
ಅರ್ಧಕೊಲೆಯೇ, ಏಕೆಂದರೆ ಆಲೋಚನೆ
ಎಂಬುದು ಆಕಾಶದ ಹಕ್ಕಿ, ಅದನ್ನು
ಮಾತಿನ ಪಂಜರದಲ್ಲಿರಿಸಿದಾಗ ಅದು ರೆಕ್ಕೆ
ಬಿಚ್ಚಬಹುದೇ ಹೊರತು ಹಾರಲಾರದು.'

ಇವೆಲ್ಲ ಬಹಳ ರಮ್ಯವಾದ ಆಲೋಚನೆಗಳು. ಆದರೆ ಪ್ರಾಯೋಗಿಕವೆಷ್ಟು ಎಂಬ ಸಂದೇಹ ಬಾರದಿರದು. ನಿಜ, ಆದರೆ ಈ ಆದರ್ಶಗಳು, ಎತ್ತರದ ಗಮನಿಕೆಗಳು ನಮ್ಮ ಮನದ ಮುಂದಿರದಿದ್ದರೆ ಮತ್ತೆ ಮತ್ತೆ 'ನಾವು ಅಲ್ಪರು, ನಮ್ಮಿಂದೇನಾದೀತು' ಎಂಬ ದೀನಭಾವದ ಆಲೋಚನೆಗಳು ತುಂಬಿಕೊಳ್ಳುತ್ತವೆ. ದೈನ್ಯತೆಗೂ ಸರಳತೆಗೂ ಬಹಳ ವ್ಯತ್ಯಾಸವಿದೆ. ಸರಳತೆ ಸಜ್ಜನಿಕೆಯ ಬಿಂಬವಾದರೂ ಅದು ದೈನ್ಯತೆಯಾಗಬಾರದು. ದೀನ ಆಲೋಚನೆಗಳು ನಮ್ಮನ್ನು ದುರ್ಬಲರನ್ನಾಗಿಸುತ್ತದೆ. ಆಲೋಚನೆಗಳ ನಿಯಂತ್ರಣದಲ್ಲಾಗಲೀ ಅವುಗಳ ಉದಾತ್ತೀಕರಣದಲ್ಲಾಗಲೀ ನಾವು ಸೋಲಬಹುದು ಆದರೆ ಅದರಿಂದ ಚಿಂತಿತರಾಗಬಾರದು. ಸ್ವಾಮಿ ವಿವೇಕಾನಂದರೆನ್ನುತ್ತಾರೆ: 'ದೌರ್ಬಲ್ಯದ ಕುರತಾಗಿ ಆಲೋಚಿಸುವುದರಿಂದ ಪ್ರಯೋಜನವಿಲ್ಲ. ಶಕ್ತಿ ನೀಡಿ. ಶಕ್ತಿ ದೊರೆಯುವುದು ಸದಾ ದುರ್ಬಲತೆಯ ಬಗ್ಗೆ ಚಿಂತಿಸುವುದರಿಂದ ಅಲ್ಲ. ದುರ್ಬಲತೆಗೆ ಔಷಧಿ ಅದರ ಕುರಿತ ಚಿಂತೆಯಲ್ಲ, ಶಕ್ತಿಯ ಬಗ್ಗೆ ಆಲೋಚಿಸಿ, ಜನರಿಗೆ ಅವರೊಳಗದಾಗಲೇ ಇರುವ ಶಕ್ತಿಯ ಮನವರಿಕೆ ಮಾಡಿಕೊಡಿ'.

ಪ್ರಸ್ತುತ ಜಗತ್ತಿನ ವಿದ್ಯಮಾನಗಳನ್ನು ಗಮನಿಸುವಾಗ, ಈ ಮಾತುಗಳ ಮಹತ್ವದ ಅರಿವಾಗುತ್ತದೆ. ಎತ್ತ ನೋಡಿದರೂ ನಕಾರಾತ್ಮಕ ವಿಚಾರಗಳೇ ಹರಿದು ಬರುತ್ತಿದೆ ಎಂಬಂತಿರುವಾಗ ಮನಸ್ಸಿನಲ್ಲಿ ಆಲೋಚನೆಗಳೂ ಅಂತೆಯೇ ಹರಿಯತ್ತವೆ. ಕೊರೊನಾ, ಅಲ್ಲೆಲ್ಲೋ ಕೊಲೆ, ಸುಲಿಗೆ, ಅತ್ಯಾಚಾರ, ಪ್ರಪಂಚದ ಇನ್ನೊಂದು ಭಾಗದಲ್ಲಿ ವಿಪ್ಲವ, ಜನರ ಆಕ್ರಂದನ ಇವೆಲ್ಲ ಮನ ಕಲಕುವಂತಹವು, ನಿರಾಶೆಗೆ ದೂಡುವಂತಹವು. ಆದರೆ ಇವುಗಳೆಲ್ಲದರ ಹಿಂದೆಯೂ ಮನಸ್ಸುಗಳಿವೆ, ಆಲೋಚನೆಗಳಿವೆ! ಹಾಗಾದರೆ ಜಗತ್ತಿನ ಶುದ್ಧೀಕರಣ ನಮ್ಮ ಒಳಗಿನಿಂದಲೇ ಆರಂಭವಾಗಲಿ. ನಮ್ಮೊಳಗಿರುವ ದುಷ್ಟ, ದುರ್ಬಲ ಆಲೋಚನೆಗಳನ್ನು ಬದಿಗೊತ್ತಿ ಅವುಗಳ ಜಾಗದಲ್ಲಿ ಪ್ರೀತಿ, ವಿಶ್ವಾಸದಿಂದ ಕೂಡಿದ ಶಕ್ತ ಆಲೋಚನೆಗಳನ್ನು ಬಿತ್ತಿ ಬೆಳೆಯೋಣ. ❖



ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 50

676) ಕೆಳಗಿನ ಯಾವ ನದಿ ಪಶ್ಚಿಮಾಭಿಮುಖವಾಗಿ ಹರಿಯುವುದಿಲ್ಲ?
ಎ) ನೇತ್ರಾವತಿ ಬಿ) ತಪತಿ
ಸಿ) ಅಘನಾಶಿನಿ ಡಿ) ದಾಮೋದರ

677) ಹೊಂದಿಸಿ ಬರೆಯಿರಿ.

ಗ್ರಹ	ಬಣ್ಣ
ಅ. ಬುಧ	1. ಕೆಂಪು
ಆ. ಶುಕ್ರ	2. ಕಂದು
ಇ. ಭೂಮಿ	3. ಹಳದಿ
ಈ. ಮಂಗಳ	4. ನೀಲಿ

ಅ ಆ ಇ ಈ
ಎ) 2 3 4 1 ಬಿ) 2 3 1 4
ಸಿ) 1 2 3 4 ಡಿ) 2 1 3 4

678) SIAL ಮತ್ತು SIMA ಪದಗಳು ಯಾವುದಕ್ಕೆ ಸಂಬಂಧಿಸಿವೆ?
ಎ) ಶಿಲಾಗೋಳ ಬಿ) ಮಿಶ್ರಗೋಳ
ಸಿ) ಕೇಂದ್ರಗೋಳ ಡಿ) ವಾಯುಗೋಳ

679) ಗ್ಯಾಬ್ರೊ, ಬಾಸಾಲ್ಟ್ ಶಿಲೆಗಳು ಯಾವುದಕ್ಕೆ ಉದಾಹರಣೆ?
ಎ) ಅಗ್ನಿಶಿಲೆ ಬಿ) ಪದರು ಶಿಲೆ
ಸಿ) ರೂಪಾಂತರ ಶಿಲೆ ಡಿ) ಮರಳು ಶಿಲೆ

680) ಸಾಗರದ ಆಳವನ್ನು ಯಾವ ಉಪಕರಣದಿಂದ ಅಳೆಯುತ್ತಾರೆ?
ಎ) ಪ್ಯಾಥೋ ಮೀಟರ್
ಬಿ) ಪೆರಿ ಮೀಟರ್
ಸಿ) ಹೈಡ್ರೋ ಮೀಟರ್
ಡಿ) ಹೈಗ್ರೊ ಮೀಟರ್

681) ಭಾರತ ಸರ್ಕಾರದ ಅತ್ಯುಚ್ಛ ಕಾನೂನು ಅಧಿಕಾರಿ ಯಾರು?
ಎ) ಭಾರತ ಸರ್ಕಾರದ ಕಾನೂನು ಸಚಿವರು
ಬಿ) ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು
ಸಿ) ಭಾರತದ ಸಾಲಿಸಿಟರ್ ಜನರಲ್
ಡಿ) ಭಾರತದ ಅಟಾರ್ನಿ ಜನರಲ್

682) ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಚುನಾವಣಾ ಆಯೋಗದ ಕಾಯ್ದೆ ಅನ್ವಯ ಸ್ಥಾಪಿಸಲಾಗಿದೆ.
2. ಸಮುದಾಯದ ಕೆಲಸಗಳಲ್ಲಿ ಸಾರ್ವಜನಿಕರ ಭಾಗವಹಿಸುವಿಕೆ ಬಲವಂತರಾಯ್ ಸಮಿತಿಯ ಪ್ರಮುಖ ಕಾಳಜಿಯಾಗಿತ್ತು.
ಎ) 1 ಮಾತ್ರ ಸರಿ ಬಿ) 2 ಮಾತ್ರ ಸರಿ
ಸಿ) 1 ಮತ್ತು 2 ಸರಿ ಡಿ) 1 ಮತ್ತು 2 ತಪ್ಪು

683) ಭಾರತದ ಸಂಸದೀಯ ಪ್ರಜಾಪ್ರಭುತ್ವ ಮತ್ತು ದ್ವಿಸದನಗಳ ವ್ಯವಸ್ಥೆಯ ಪರಿಕಲ್ಪನೆಗಳನ್ನು ಯಾವ ದೇಶದ ಸಂವಿಧಾನದಿಂದ ಎರವಲು ಪಡೆಯಲಾಗಿದೆ?
ಎ) ಬ್ರಿಟಿಷ್ ಸಂವಿಧಾನ ಬಿ) ರಷ್ಯಾ ಸಂವಿಧಾನ
ಸಿ) ಐರಿಷ್ ಸಂವಿಧಾನ ಡಿ) ಅಮೆರಿಕ ಸಂವಿಧಾನ

684) ರಾಜ್ಯವೊಂದರಲ್ಲಿ ವಿಧಾನ ಪರಿಷತ್ತನ್ನು ಸೃಷ್ಟಿಸುವ ಅಥವಾ ವಿಸರ್ಜಿಸುವ ಕೆಲಸವನ್ನು ಯಾರು ಮಾಡಬಹುದು?
ಎ) ರಾಜ್ಯ ವಿಧಾನ ಸಭೆಯ ಶಿಫಾರಸಿನ ಮೇರೆಗೆ ಸಂಸತ್ತು ಮಾಡಬಹುದು
ಬಿ) ಸಂಸತ್ತು ಮಾತ್ರ ಮಾಡಬಹುದು
ಸಿ) ರಾಜ್ಯ ವಿಧಾನಸಭೆ ಮಾತ್ರ ಮಾಡಬಹುದು
ಡಿ) ರಾಜ್ಯದ ರಾಜ್ಯಪಾಲರ ಶಿಫಾರಸಿನ ಮೇರೆಗೆ ರಾಷ್ಟ್ರಪತಿಯವರು ಮಾಡಬಹುದು

685) ತನ್ನ ಹುದ್ದೆಯನ್ನು ತಪ್ಪಾಗಿ ಮತ್ತು ಕಾನೂನು ಬಾಹಿರವಾಗಿ ಹೊಂದಿರುವ ವ್ಯಕ್ತಿಯ ವಿರುದ್ಧ ಹೊರಡಿಸುವ ರಿಟ್
ಎ) ಹೇಬಿಯಸ್ ಕಾರ್ಪಸ್ ಬಿ) ಮ್ಯಾಂಡ ಮಸ್
ಸಿ) ಕೂ ವಾರಂಟೊ ಡಿ) ಸರ್ಟಿಯೋರರಿ

686) ಭಾರತ ಸಂವಿಧಾನದ ಪೀಠಿಕೆಯಲ್ಲಿ ಸಮಾಜವಾದಿ ಮತ್ತು ಜಾತ್ಯತೀತ ಎಂಬ ಪದಗಳನ್ನು ಸೇರಿಸಿದ ತಿದ್ದುಪಡಿ ಶಾಸನ
ಎ) 41ನೇ ತಿದ್ದುಪಡಿ ಶಾಸನ
ಬಿ) 42ನೇ ತಿದ್ದುಪಡಿ ಶಾಸನ
ಸಿ) 43ನೇ ತಿದ್ದುಪಡಿ ಶಾಸನ
ಡಿ) 44ನೇ ತಿದ್ದುಪಡಿ ಶಾಸನ

687) ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಹಣಕಾಸಿನ ಮಸೂದೆಯನ್ನು ಸಂಸತ್ತಿನ ಯಾವುದೇ ಸದನದಲ್ಲಾಗಲಿ ಮಂಡಿಸಬಹುದು.
2. ಹಣಕಾಸಿನ ಮಸೂದೆಯ ಮಂಡನೆಯ ಮುನ್ನ ಲೋಕಸಭಾಪತಿಯವರ ಒಪ್ಪಿಗೆ ಪಡೆಯುವ ಅಗತ್ಯವಿದೆ.
- ಸರಿಯಾದ ಹೇಳಿಕೆ ಆಯ್ಕೆಮಾಡಿ
ಎ) 1 ಮಾತ್ರ ಸರಿ ಬಿ) 2 ಮಾತ್ರ ಸರಿ
ಸಿ) 1 ಮತ್ತು 2 ಸರಿ ಡಿ) 1 ಮತ್ತು 2 ತಪ್ಪು

688) 'Psephology' ಎಂಬ ಪದ ಯಾವುದಕ್ಕೆ ಸಂಬಂಧಿಸಿದೆ?
ಎ) ಚುನಾವಣೆಗಳು ಬಿ) ಒತ್ತಡ ಗುಂಪುಗಳು
ಸಿ) ರಾಜಕೀಯ ಪಕ್ಷಗಳು ಡಿ) ಸಾರ್ವಜನಿಕ ಅಭಿಪ್ರಾಯ

689) ಭಾರತೀಯ ಸಂವಿಧಾನದ ಅನ್ವಯ ಉಚ್ಛ ನ್ಯಾಯಾಲಯಗಳಿಗೆ ಕೆಲವೊಂದು ರಿಟ್‌ಗಳನ್ನು ಹೊರಡಿಸಲು ಅವಕಾಶ ಮಾಡಿಕೊಡುವ ಅನುಚ್ಛೇದ ಯಾವುದು?
ಎ) ಅನುಚ್ಛೇದ 225 ಬಿ) ಅನುಚ್ಛೇದ 226
ಸಿ) ಅನುಚ್ಛೇದ 227 ಡಿ) ಅನುಚ್ಛೇದ 228

690) ಕೆಳಕಂಡ ಯಾವ ಹಕ್ಕನ್ನು ಮೂಲಭೂತ ಹಕ್ಕುಗಳಲ್ಲಿ ಸ್ಪಷ್ಟವಾಗಿ ತಿಳಿಸಿಲ್ಲ ಆದರೆ ನ್ಯಾಯಾಲಯಗಳ ಅನೇಕ ತೀರ್ಪುಗಳಲ್ಲಿ ಇದನ್ನು ಹಾಗೆಂದು ಎತ್ತಿ ಹಿಡಿಯಲಾಗಿದೆ.
ಎ) ಕಾನೂನಿನ ಮುಂದೆ ಸಮಾನತೆ
ಬಿ) ಸಾರ್ವಜನಿಕ ಉದ್ಯೋಗದಲ್ಲಿ ತಾರತಮ್ಯ ಮಾಡದಿರುವ ಹಕ್ಕು
ಸಿ) ಪತ್ರಿಕಾ ಸ್ವಾತಂತ್ರ್ಯದ ಹಕ್ಕು
ಡಿ) ಸಂಘ ಅಥವಾ ಒಕ್ಕೂಟಗಳನ್ನು ರಚಿಸುವ ಹಕ್ಕು

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 49ರ ಉತ್ತರಗಳು: 661. ಎ, 662. ಬಿ, 663. ಎ, 664. ಎ, 665. ಸಿ, 666. ಡಿ, 667. ಸಿ, 668. ಎ, 669. ಬಿ, 670. ಡಿ, 671. ಎ, 672. ಡಿ, 673. ಸಿ, 674. ಬಿ, 675. ಎ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಂಬಿಕೆ ಎಂಬುದು ನಾವು ಉಸಿರಾಡುವ ಗಾಳಿಯಿದ್ದಂತೆ- ಅದು ಇರುವಾಗ ಯಾರೂ ಅದನ್ನು ಗಮನಿಸುವುದಿಲ್ಲ, ಅದು ಇಲ್ಲದಿದ್ದಾಗ ಎಲ್ಲರ ಗಮನಕ್ಕೂ ಬರುತ್ತದೆ.

-ವಾರನ್ ಬಫೆಟ್

ಶಾಲೆಗಳಲ್ಲಿ ಹೊಸಬೆಳಕು ಸ್ವಾಗತಾರ್ಹ ಗಣೇಶೋತ್ಸವ: ಕಾದು ನೋಡುವ ತಂತ್ರ

ಕೋವಿಡ್ ನಿಯಂತ್ರಣ ಮಾರ್ಗಸೂಚಿ ಅನುಸರಿಸಿ 6ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಸೆಪ್ಟೆಂಬರ್ 6ರಿಂದ ಭೌತಿಕ ತರಗತಿಗಳನ್ನು ಆರಂಭಿಸುವ ರಾಜ್ಯ ಸರ್ಕಾರದ ನಿರ್ಧಾರವು ಮಕ್ಕಳ ಹಿತದೃಷ್ಟಿಯಿಂದ ಅಗತ್ಯವಾಗಿದ್ದ ಕ್ರಮ. 9, 10 ಮತ್ತು ಪಿಯು ತರಗತಿಗಳ ಆರಂಭಕ್ಕೆ ಸರ್ಕಾರ ಕಳೆದ ವಾರ ಅವಕಾಶ ಮಾಡಿಕೊಟ್ಟಿತ್ತು. ಈಗ ಎರಡನೇ ಹಂತದಲ್ಲಿ ಕೋವಿಡ್ ದೃಢ ಪ್ರಮಾಣ ದರ ಶೇಕಡ 2ಕ್ಕಿಂತ ಕಡಿಮೆ ಇರುವ ತಾಲ್ಲೂಕುಗಳಲ್ಲಿ 6ನೇ ತರಗತಿಯಿಂದ ಶಾಲೆಗಳನ್ನು ಆರಂಭಿಸಲು ಮುಂದಾಗಿದೆ. ವಾರದಲ್ಲಿ ಐದು ದಿನ ತರಗತಿ ನಡೆಸಲು ತೀರ್ಮಾನಿಸುವ ಮೂಲಕ ಶೈಕ್ಷಣಿಕ ವಲಯದಲ್ಲಿ ಉತ್ಸಾಹ ಮೂಡಲು ಅವಕಾಶ ಕಲ್ಪಿಸಿದೆ. ಒಂದೂವರೆ ವರ್ಷದಿಂದ ಮನೆಯಲ್ಲಿಯೇ ಉಳಿಯುವಂತಾದುದರಿಂದ, ಬಹುತೇಕ ಮಕ್ಕಳು ಕಲಿಕೆಯ ಉತ್ಸಾಹ ಕಳೆದುಕೊಳ್ಳುವ ಹಂತಕ್ಕೆ ತಲುಪಿದ್ದರು. ಪರ್ಯಾಯ ಕಲಿಕೆಯ ರೂಪದಲ್ಲಿ ಸರ್ಕಾರ ರೂಪಿಸಿದ್ದ ಆನ್‌ಲೈನ್ ಶಿಕ್ಷಣ ಕಾರ್ಯಕ್ರಮ ಎಲ್ಲ ಮಕ್ಕಳನ್ನೂ ತಲುಪುವುದು ಸಾಧ್ಯವಾಗಿರಲಿಲ್ಲ. ಹಾಗಾಗಿ, ಮಕ್ಕಳಲ್ಲಿ ಕಲಿಕೆಯ ಉತ್ಸಾಹ ಉಳಿಸುವುದಕ್ಕಾಗಿ ಶಾಲೆಗಳನ್ನು ಆರಂಭಿಸುವುದು ಸರ್ಕಾರಕ್ಕೆ ಅನಿವಾರ್ಯವಾಗಿತ್ತು.



ಶಾಲಾ ಕಾಲೇಜುಗಳ ಪುನರಾರಂಭವನ್ನು ಧಾರ್ಮಿಕ ಆಚರಣೆಗಳ ಜೊತೆಗೆ ಹೋಲಿಸಲಾಗದು

ಶಾಲೆಗಳನ್ನು ತೆರೆಯುವ ದಿಸೆಯಲ್ಲಿ ಹಂತ ಹಂತವಾಗಿ ಮುಂದುವರಿಯುತ್ತಿರುವ ಸರ್ಕಾರ, ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಸಂಬಂಧಿಸಿದಂತೆ ಕಾದು ನೋಡುವ ಎಚ್ಚರಿಕೆಯ ನಿರ್ಧಾರ ಕೈಗೊಂಡಿರುವುದು ಸರಿಯಾಗಿದೆ. ಗಣೇಶೋತ್ಸವ ಆಚರಣೆಗೆ ಸಂಬಂಧಿಸಿದಂತೆ ಸೆ. 5ರಂದು ಮತ್ತೊಮ್ಮೆ ಉನ್ನತ ಮಟ್ಟದ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳುವುದಾಗಿ ಸರ್ಕಾರ ತಿಳಿಸಿದೆ. ಗಣೇಶೋತ್ಸವ ಆಚರಿಸುವ ಸಂಘ-ಸಂಸ್ಥೆಗಳ ಪ್ರತಿನಿಧಿಗಳ ಜತೆ ಸಮಾಲೋಚನೆ ನಡೆಸಿ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲೆಯ ಪೊಲೀಸ್ ವರಿಷ್ಠರಿಗೆ ಸೂಚಿಸಲಾಗಿದೆ. ವರದಿ ಪಡೆದ ಬಳಿಕ, ಕೋವಿಡ್ ಪರಿಸ್ಥಿತಿಯನ್ನು ಆಧರಿಸಿ ಪುನಃ ಚರ್ಚೆ ನಡೆಸಲು ನಿರ್ಧರಿಸಲಾಗಿದೆ. ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಅವಕಾಶ ಮಾಡಿಕೊಡುವಂತೆ ಆಡಳಿತಾರೂಢ ಬಿಜೆಪಿಯ ಕೆಲವು ನಾಯಕರು ಬಹಿರಂಗವಾಗಿ ಮಾಡಿದ್ದ ಒತ್ತಾಯಕ್ಕೆ ಸರ್ಕಾರ ಕಾದು ನೋಡುವ ತಂತ್ರ ಅನುಸರಿಸಿರುವುದು ವಿವೇಕದ ನಡವಳಿಕೆ. ಗಣೇಶೋತ್ಸವ ಆಚರಣೆಗೆ ಸರ್ಕಾರ ನಿರ್ಬಂಧ ವಿಧಿಸಿದರೆ ತಾವು ಸುಮ್ಮನಿರುವುದಿಲ್ಲ ಎಂದು ಆಡಳಿತ ಪಕ್ಷದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದರು. ಗಣೇಶೋತ್ಸವ ಆಚರಣೆಗೆ ಅವಕಾಶ ಕಲ್ಪಿಸುವಂತೆ ಸಂಸದ ಪ್ರತಾಪ್ ಸಿಂಹ, ಸರ್ಕಾರದ ಮೇಲೆ ಒತ್ತಡ ಹೇರಿದ್ದರು. ಮಸೀದಿಗಳಲ್ಲಿ ಮತ್ತು ಚರ್ಚ್‌ಗಳಲ್ಲಿ ಪ್ರಾರ್ಥನೆ ಸಲ್ಲಿಸುವ ಉದ್ದೇಶದಿಂದ ಜನ ಗುಂಪು ಸೇರುತ್ತಿದ್ದಾರೆ. ಅವರಿಗಿಲ್ಲದ ನಿರ್ಬಂಧವು ಹಿಂದೂಗಳ ಗಣೇಶೋತ್ಸವಕ್ಕೆ ಏಕೆ ಅನ್ವಯವಾಗಬೇಕು ಎಂದು ಅಭಿಪ್ರಾಯಪಟ್ಟಿದ್ದ ಅವರು, ಕೋವಿಡ್ ಮಾರ್ಗಸೂಚಿ ಅನುಸರಿಸಿ ಗಣೇಶೋತ್ಸವಕ್ಕೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದರು. ಶ್ರೀರಾಮ ಸೇನೆ ಸಂಘಟನೆ ಕೂಡ ಗಣೇಶೋತ್ಸವ ಆಚರಣೆಗೆ ಅವಕಾಶ ಕಲ್ಪಿಸಬೇಕೆಂದು ಆಗ್ರಹಿಸಿತ್ತು. ಆದರೆ, ಕೊರೊನಾ ಸೋಂಕಿನ ಸಂದರ್ಭದಲ್ಲಿ ಹಬ್ಬ, ಉತ್ಸವ, ಜಾತ್ರೆಗಳನ್ನು ನಡೆಸಬೇಕೇ ಬೇಡವೇ ಎನ್ನುವ ತೀರ್ಮಾನವನ್ನು ಕೈಗೊಳ್ಳಬೇಕಾದುದು ತಜ್ಞರ ಅಭಿಪ್ರಾಯಗಳನ್ನು ಅವಲಂಬಿಸಿಯೇ ಹೊರತು, ರಾಜಕಾರಣಿಗಳು ಅಥವಾ ಸಾರ್ವಜನಿಕರ ಅಭಿಪ್ರಾಯ ಆಧರಿಸಿ ಅಲ್ಲ ಎನ್ನುವುದನ್ನು ಸರ್ಕಾರ ಮರೆಯಬಾರದು. ಕೊರೊನಾ ಸೋಂಕು ನಿಯಂತ್ರಣದ ಉದ್ದೇಶದಿಂದ ಕಳೆದ ವರ್ಷ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಸರ್ಕಾರ ಹಲವು ನಿರ್ಬಂಧಗಳನ್ನು ವಿಧಿಸಿತ್ತು. ಈ ವರ್ಷ ಆತಂಕವೇನೂ ದೂರವಾಗಿಲ್ಲ. ಕೊರೊನಾ ಪ್ರಕರಣಗಳು ಯಾವಾಗ ಬೇಕಾದರೂ ಹೆಚ್ಚಾಗಬಹುದು. ಸಂಭಾವ್ಯ ಮೂರನೇ ಅಲೆಯಲ್ಲಿ ಆಸ್ಪತ್ರೆಗಳಲ್ಲಿ ಐಸಿಯು ಹಾಸಿಗೆಗಳ ಕೊರತೆ ಎದುರಾಗಬಹುದು; ಮಕ್ಕಳು ಹೆಚ್ಚಿನ ಆತಂಕ ಎದುರಿಸಬೇಕಾಗಬಹುದು ಎಂದು ಖಾಸಗಿ ಆಸ್ಪತ್ರೆಗಳ ಒಕ್ಕೂಟ ಹೇಳಿದೆ. ನುರಿತ ವೈದ್ಯಕೀಯ ಸಿಬ್ಬಂದಿ ಹಾಗೂ ಲಸಿಕೆಯ ಕೊರತೆಗೆ ಉತ್ತರ ಕಂಡುಕೊಳ್ಳುವುದು ಇನ್ನೂ ಸಾಧ್ಯವಾಗಿಲ್ಲ. ಎರಡನೇ ಅಲೆಯಲ್ಲಿ ಎದುರಾದ ವೈದ್ಯಕೀಯ ಸವಲತ್ತುಗಳ ಕೊರತೆ ಮತ್ತೆ ಎದುರಾದರೆ ಆರೋಗ್ಯ ಕ್ಷೇತ್ರದಲ್ಲಿ ಉಂಟಾಗಬಹುದಾದ ಬಿಕ್ಕಟ್ಟನ್ನು ಊಹಿಸಿಕೊಳ್ಳುವುದೂ ಕಷ್ಟ. ಇಂತಹ ಸಂದಿಗ್ಧ ಸಂದರ್ಭದಲ್ಲಿ ರಾಜಕೀಯ ಸಮಾವೇಶಗಳನ್ನು ನಡೆಸುವುದು ಮತ್ತು ಯಾವುದೇ ಬಗೆಯ ಸಾರ್ವಜನಿಕ ಉತ್ಸವಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸುವುದು ಪ್ರಬುದ್ಧ ಹಾಗೂ ಜನಪರ ರಾಜಕಾರಣದ ಲಕ್ಷಣವಲ್ಲ.

ಶಾಲಾ ಕಾಲೇಜುಗಳ ಪುನರಾರಂಭವನ್ನು ಧಾರ್ಮಿಕ ಆಚರಣೆಗಳ ಜೊತೆಗೆ ಹೋಲಿಸಲಾಗದು. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಶಾಲಾ ಕಾಲೇಜುಗಳನ್ನು ತೆರೆಯುವುದು ಸರ್ಕಾರಕ್ಕೆ ಅನಿವಾರ್ಯವಾಗಿತ್ತು. ಕೋವಿಡ್ ಮಾರ್ಗಸೂಚಿಯನ್ನು ಶಾಲೆಗಳಲ್ಲಿ ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸಾರ್ವಜನಿಕ ಸ್ಥಳಗಳಲ್ಲಿ ಅನುಷ್ಠಾನಕ್ಕೆ ತರುವುದು ಕಷ್ಟ. ರಾಜಕೀಯ ಸಮಾವೇಶಗಳನ್ನು ಗಮನಿಸಿದರೆ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಕೋವಿಡ್ ಮಾರ್ಗಸೂಚಿ ಎಷ್ಟರಮಟ್ಟಿಗೆ ಪಾಲನೆಯಾಗುತ್ತಿದೆ ಎನ್ನುವುದನ್ನು ತಿಳಿಯಬಹುದು. ಜೀವನಕ್ಕೆ ಅವಶ್ಯಕವಾದ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿದಂತೆ, ಹಬ್ಬಹರಿದಿನಗಳ ಆಚರಣೆಗೆ ಅವಕಾಶ ಕೊಡಬೇಕು ಎಂದು ಅಪೇಕ್ಷಿಸುವುದು ಯುಕ್ತವಲ್ಲ. ಹಬ್ಬಗಳನ್ನು ಸಾರ್ವಜನಿಕವಾಗಿ ಆಚರಿಸುವ ಬದಲು ಮನೆಯಲ್ಲಿ ಕುಟುಂಬದೊಟ್ಟಿಗೆ ಆಚರಿಸಲು ಸಾಧ್ಯವಿದೆ. ಆರೋಗ್ಯದ ಬಿಕ್ಕಟ್ಟಿಗೆ ದಾರಿ ಮಾಡಿಕೊಡಬಲ್ಲ ಯಾವುದೇ ರೀತಿಯ ದುಡುಕುತನವನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಇರುವವರು ಪ್ರದರ್ಶಿಸಬಾರದು.

ದಿನದ ಟ್ವೀಟ್

ಸರಿಯಾದ ನಿರ್ಧಾರವಲ್ಲ

ಸೌಂದರ್ಯೀಕರಣ ಮತ್ತು ನವೀಕರಣದ ಹೆಸರಿನಲ್ಲಿ ಜಲಿಯನ್ ವಾಲಾಬಾಗ್‌ನ ಮೂಲ ಸ್ಮಾರಕದ ಸ್ವರೂಪವನ್ನು ಬದಲಾಯಿಸಿದ್ದು ಅತ್ಯಂತ ತಪ್ಪು ನಿರ್ಧಾರ. ಅದನ್ನು ಸಕಾಲದಲ್ಲಿ ಸಂರಕ್ಷಿಸಬೇಕಾಗಿತ್ತು ಮತ್ತು ಹೊರ ಆವರಣದಲ್ಲಿ ಮಾತ್ರ ಆಧುನಿಕ ಸೌಲಭ್ಯಗಳನ್ನು ಕಲ್ಪಿಸಬೇಕಾಗಿತ್ತು. ಅಲ್ಲಿ ಬೆಳಕಿನ ಪ್ರದರ್ಶನ ಕಲ್ಪಿಸಿರುವುದು ಸೂಕ್ತ ಎಂದು ನನಗೆ ಅನಿಸುವುದಿಲ್ಲ. ಭ್ರಮನಿರಸನವಾಗಿದೆ!

ಅನುರಾಗ್ ಸಿಂಗ್ ರಾಣಾ, ಎಂಜಿನಿಯರ್

ಕಿಡಿನುಡಿ

ಬೇರೆ ದೇಶಗಳಲ್ಲಿ ಸರ್ಕಾರ ಬದಲಾದರೂ ಶಿಕ್ಷಣ ನೀತಿಗಳು ಬದಲಾಗುವುದಿಲ್ಲ. ನಮ್ಮ ದೇಶದಲ್ಲಿ ಸರ್ಕಾರ ಬದಲಾದಂತೆ ಶಿಕ್ಷಣ ನೀತಿಗಳು ಬದಲಾಗುತ್ತವೆ. ಇದರಿಂದ ಶಿಕ್ಷಣ ಕ್ಷೇತ್ರಕ್ಕೆ ತೊಂದರೆಯಾಗುತ್ತದೆ.



ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ

25 ವರ್ಷಗಳ ಹಿಂದೆ

ಶನಿವಾರ, 31-8-1996

• ಸಿಇಟಿ: ಮುಂದೂಡಿಕೆ ಪ್ರಶ್ನಿಸಿ ಮೇಲ್ಮನವಿ

ಬೆಂಗಳೂರು, ಆ. 30– ವೈದ್ಯಕೀಯ ಮತ್ತು ದಂತ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪ್ರಕ್ರಿಯೆಯನ್ನು ಎರಡು ವಾರ ಮುಂದೂಡಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುತ್ತಿರುವುದಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಂ.ಸಿ. ನಾಣಯ್ಯ ಇಂದು ಇಲ್ಲಿ ತಿಳಿಸಿದರು.

ಹೈಕೋರ್ಟ್ ಆದೇಶದಿಂದಾಗಿ ಬೇರೆ ದಾರಿಯೇ ಇಲ್ಲದೆ ಪ್ರವೇಶ ಸಂಬಂಧದಲ್ಲಿ ಇಂದಿನಿಂದ ಆರಂಭವಾಗಬೇಕಿದ್ದ ಸಂದರ್ಶನವನ್ನು ಮುಂದಕ್ಕೆ ಹಾಕಲೇಬೇಕಾಯಿತು. ಇದರಿಂದಾಗಿ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಆಗಿರುವ ತೊಂದರೆ ನಿವಾರಿಸಲು ಸಾಧ್ಯವಾದ ಎಲ್ಲ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಮ್ಮನ್ನು ಭೇಟಿಯಾದ ಸುದ್ದಿಗಾರರಿಗೆ ತಿಳಿಸಿದರು.

ಖಾಸಗಿ ಕಾಲೇಜುಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ನೀಡುತ್ತಾ ನಿಯಮ ಉಲ್ಲಂಘಿಸುತ್ತಿವೆ ಎಂದು ‘ಸಿಟಿಜನ್ ಆಫ್ ಇಂಡಿಯಾ ವೇದಿಕೆ’ಯ ಶಿವಭಾಸ್ಕರ ಸ್ವಾಮಿ ಎಂಬುವರು ಬರೆದ ಪತ್ರವನ್ನು ಹೈಕೋರ್ಟ್ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಾಗಿ ಪರಿಗಣಿಸಿ ವಿಚಾರಣೆ ನಡೆಸುತ್ತಿದೆ.

50 ವರ್ಷಗಳ ಹಿಂದೆ

ಮಂಗಳವಾರ, 31-8-1971

• ಕಲ್ಪನಾ, ರಾಜಕುಮಾರ್, ಪುಟ್ಟಣ್ಣ ಇವರಿಗೆ ರಾಜ್ಯ ಪ್ರಶಸ್ತಿ

ಬೆಂಗಳೂರು, ಆ. 30– ಶರಪಂಜರಕ್ಕೆ ರಾಜ್ಯ ಸರ್ಕಾರದ 1980–81ರ ಚಲನಚಿತ್ರ ಪ್ರಶಸ್ತಿ ಬಂದಿದೆ. ರಾಜಕುಮಾರ್ (ಕುಲ ಗೌರವ) ಅವರು ಶ್ರೇಷ್ಠ ನಟ ಮತ್ತು ಕಲ್ಪನಾ (ಶರಪಂಜರ) ಅವರು ಶ್ರೇಷ್ಠ ನಟಿಯೆಂದು ರಾಜ್ಯಗೌರವ ಪಡೆದಿದ್ದಾರೆ.

ಎರಡನೇ ಬಹುಮಾನಕ್ಕಾಗಿ ‘ಸಂಸ್ಕಾರ’ವನ್ನು, ಮೂರನೇ ಬಹುಮಾನಕ್ಕಾಗಿ ‘ಕುಲ ಗೌರವ’ವನ್ನು ಆಯ್ಕೆ ಸಮಿತಿ ಆರಿಸಿದೆಯೆಂದು ವರದಿಯಾಗಿದೆ.

ವಿವರಗಳಿವು: ಶ್ರೇಷ್ಠ ಚಿತ್ರ– ಶರಪಂಜರ (ನಿರ್ದೇಶಕ: ಎಸ್.ಆರ್. ಪುಟ್ಟಣ್ಣ ಕಣಗಾಲ್), ದ್ವಿತೀಯ ಬಹುಮಾನ–ಸಂಸ್ಕಾರ (ನಿರ್ದೇಶಕ– ಪಟ್ಟಾಭಿ ರಾಮರೆಡ್ಡಿ), 3ನೇ ಬಹುಮಾನ– ಕುಲಗೌರವ (ನಿರ್ದೇಶಕ– ಪೇಕೇಟಿ ಶಿವರಾಂ) ಸಹಾಯಕ ನಟ–ಬಿ.ಆರ್. ಜಯರಾಂ (ಸಂಸ್ಕಾರ), ಸಹಾಯಕ ನಟಿ– ಜಯಶ್ರೀ (ಅಮರ ಭಾರತಿ), ಕಥೆ–ಯು.ಆರ್. ಅನಂತ ಮೂರ್ತಿ (ಸಂಸ್ಕಾರ), ಚಿತ್ರಕಥೆ–ಎಸ್. ಆರ್. ಪುಟ್ಟಣ್ಣ ಕಣಗಾಲ್ (ಶರಪಂಜರ), ಸಂಭಾಷಣೆ– ಉದಯಶಂಕರ್ (ಕುಲ ಗೌರವ), ಸಂಗೀತ ನಿರ್ದೇಶಕ– ಸಲೀಲ್ ಚೌಧುರಿ (ಸಂಶಯಫಲ), ಛಾಯಾಗ್ರಹಣ– ಟಾಮ್ ಕೊವಾನ್ (ಸಂಸ್ಕಾರ), ಧ್ವನಿಗ್ರಹಣ– ಶ್ರೀನಿವಾಸ್ (ಕುಲಗೌರವ), ಸಂಕಲನ– ಭಕ್ತವತ್ಸಲ (ಕುಲಗೌರವ).

ಅಭಿಮತ

ತನುವ ಕೊಟ್ಟು ಗುರುವನೊಲಿಸಬೇಕು ಎಂದರು ಅವರು; ಧನ ಕೊಟ್ಟವರಿಗೆ ಮನಸೋತರೇ ಇವರು?

ಮಳೆ ಬಂದು ಬಣ್ಣ ಬಯಲಾಯ್ತು!



ಅನುಸಂಧಾನ

ರವೀಂದ್ರ ಭಟ್ಟ

ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬಸವರಾಜ ಬೊಮ್ಮಾಯಿ ಅವರು ಕೆಲವು ಉತ್ತಮ ನಿರ್ಧಾರಗಳನ್ನು ಕೈಗೊಂಡಿದ್ದಾರೆ. ಹೋದಲ್ಲೆಲ್ಲಾ ಗೌರವ ವಂದನೆ ನೀಡುವ ಪದ್ಧತಿಗೆ ತಿಲಾಂಜಲಿ ನೀಡಿದ್ದಾರೆ. ಮುಖ್ಯಮಂತ್ರಿಗೆ ಇರುವ ಝೀರೊ ಟ್ರಾಫಿಕ್ ಸೌಲಭ್ಯ ಬೇಡ ಎಂದಿದ್ದಾರೆ. ಸಮಾರಂಭಗಳಲ್ಲಿ ಹೂವು ಹಣ್ಣು ಬದಲು ಪುಸ್ತಕಗಳನ್ನು ನೀಡಿ ಎಂಬ ಆದೇಶ ಹೊರಡಿಸಿದ್ದಾರೆ. ಹೈಕಮಾಂಡ್ ಅನುಮತಿ ಬೇಕಾಗದ, ಯಡಿಯೂರಪ್ಪ ಅವರು ಸಮ್ಮತಿ ಸೂಚಿಸುವ ಅಗತ್ಯವಿಲ್ಲದ ಕೆಲವು ಸಣ್ಣಪುಟ್ಟ ಕ್ರಮಗಳನ್ನು ಕೈಗೊಂಡು ತಮ್ಮತನ ಮೆರೆದಿದ್ದಾರೆ.

ಇಂತಹ ಸಣ್ಣ ಸಣ್ಣ ನಿರ್ಧಾರಗಳೇ ಅವರನ್ನು ಮೇಲಕ್ಕೇರಿಸಿವೆ. ಇನ್ನೂ ಕೆಲವು ಇಂತಹ ನಿರ್ಧಾರ ಕೈಗೊಳ್ಳುವ ಹುಮ್ಮಸ್ಸು ತೋರಿದ್ದಾರೆ. ಅದೇ ರೀತಿ ಅವರು ‘ಮುಖ್ಯಮಂತ್ರಿಯಾಗಿ ನಾನು ಯಾವುದೇ ಮಠಾಧೀಶರ ಕಾಲಿಗೆ ಬೀಳುವುದಿಲ್ಲ, ಬಹಿರಂಗವಾಗಿ ಯಾವ ದೇವಾಲಯಕ್ಕೂ ಹೋಗುವುದಿಲ್ಲ. ನನ್ನ ಸಂಪುಟದ ಸದಸ್ಯರೂ ಇದನ್ನು ಪಾಲಿಸಬೇಕು’ ಎಂಬ ಸೂಚನೆಯನ್ನು ನೀಡಿಬಿಟ್ಟರೆ, ಕನಕನ ನಾಡಿನಿಂದ ಬಂದ ಅವರು ನಿಜಾರ್ಥದಲ್ಲಿ ಬಸವಣ್ಣನ ಅನುಯಾಯಿಯಾಗುತ್ತಾರೆ.

ಮುಖ್ಯಮಂತ್ರಿಯಾದವರು ದೇವರ ದರ್ಶನಕ್ಕೆ ಹೋಗುವುದು, ಸ್ವಾಮೀಜಿಗಳಿಗೆ ಶಿರಸಾಷ್ಟಾಂಗ ನಮಸ್ಕರಿಸುವುದು ನಮಗೆ ಹೊಸದೇನಲ್ಲ. ಮುಖ್ಯಮಂತ್ರಿ ಮಾತ್ರ ಅಲ್ಲ, ಪ್ರಧಾನಿ, ರಾಷ್ಟ್ರಪತಿ ಹುದ್ದೆಯಲ್ಲಿರುವವರೂ ಮಠಾಧೀಶರ ಕಾಲಿಗೆ ಬೀಳುತ್ತಾರೆ. ಸಾಂವಿಧಾನಿಕ ಹುದ್ದೆಯಲ್ಲಿ ಇರುವ ವ್ಯಕ್ತಿಯೊಬ್ಬ ಹೀಗೆ ಮಾಡುವುದು ಸರಿಯಲ್ಲ ಎಂದು ಅವರಿಗೂ ಅನ್ನಿಸುವುದಿಲ್ಲ, ಇದು ತಪ್ಪು ಎಂದು ಪ್ರಜೆಗಳಿಗೂ ಅನ್ನಿಸುವುದಿಲ್ಲ. ಇದು ನಮ್ಮ ದುರಂತ.


ಈ ಹಿಂದೆ ಎಚ್.ಡಿ.ಕುಮಾರಸ್ವಾಮಿ ಅವರೂ ದೇವಾಲಯಗಳನ್ನು ಸುತ್ತುವ, ವಾರದಲ್ಲಿ ನಾಲ್ಕಾರು ಸ್ವಾಮೀಜಿಗಳಿಗೆ ನಮಿಸುವ ಕೆಲಸ ಮಾಡಿದ್ದರು. ಬಿ.ಎಸ್. ಯಡಿಯೂರಪ್ಪ ಅವರೂ ಈ ಕಾರ್ಯದಲ್ಲಿ ಹಿಂದೆ ಬೀಳಲಿಲ್ಲ. ಮಠಾಧಿಪತಿಗಳಿಗೆ ವಂದಿಸುವ ಕೆಲಸವನ್ನು ಬೊಮ್ಮಾಯಿ ಅವರೂ ಸಂಪ್ರದಾಯದಂತೆ ಮುಂದುವರಿಸಿದ್ದಾರೆ. ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತವರು, ವಿಧಾನ ಸೌಧದಲ್ಲಿ ಆಡಳಿತ ನಡೆಸುತ್ತಿರುವವರು ಮಠಾಧೀಶರ ಕಾಲಿಗೆ ಬೀಳಬೇಕೇ ವಿನಾ ಮಠಾಧೀಶರ ಕಾಲಿಗೆ ಅಲ್ಲ. ಮುಖ್ಯಮಂತ್ರಿ, ಇತರ ಸಚಿವರು ಹೀಗೆ ಮಠಾಧೀಶರ ಕಾಲಿಗೆ ಬೀಳುತ್ತಾ ಸಾಗುತ್ತಿದ್ದರೆ ಮಠಾಧೀಶರು ಮರೆತು ಹೋಗುತ್ತಾರೆ. ಮಠಾಧೀಶರೂ ರಾಜಕಾರಣಿಗಳನ್ನು ಮರೆತುಬಿಡುವ ಅಪಾಯ ಕೂಡ ಇದೆ.

ಬಸವರಾಜ ಬೊಮ್ಮಾಯಿ ಅವರು ವೈಯಕ್ತಿಕವಾಗಿ ಯಾರ ಕಾಲಿಗೆ ಬಿದ್ದರೂ ತಪ್ಪಲ್ಲ. ಅದು ಅವರ ಆಯ್ಕೆ. ಅದನ್ನು ಯಾರೂ ಪ್ರಶ್ನೆ ಮಾಡಲಾಗದು. ಮಾಡಬಾರದು ಕೂಡ. ಆದರೆ ಮುಖ್ಯಮಂತ್ರಿಯಾಗಿ, ಸಂವಿಧಾನ ಬದ್ಧವಾಗಿ ರಾಜ್ಯದ ನೇತೃತ್ವ ವಹಿಸಿದ ವ್ಯಕ್ತಿ ಬಹಿರಂಗವಾಗಿ ಪದೇ ಪದೇ ಮಠಾಧೀಶರಿಗೆ ಶರಣಾಗುವುದು ತಪ್ಪು ಸಂದೇಶ ನೀಡುವುದಲ್ಲದೆ ಮುಂದಿನ ಪೀಳಿಗೆಗೆ, ಮುಖ್ಯಮಂತ್ರಿಯೊಬ್ಬ ಹೀಗೇ ಇರಬೇಕೇನೋ ಎನ್ನುವ ಭಾವನೆ ಬರುವುದಕ್ಕೂ ಕಾರಣವಾಗಬಹುದು. ಎಲ್ಲ ಮಠಾಧೀಶರಿಗೂ ಮುಖ್ಯಮಂತ್ರಿ ತಮ್ಮ ಬಳಿಗೆ ಬರಲಿ ಎಂಬ ಆಸೆ ಮೂಡಿದರೂ ಅಚ್ಚರಿಯಿಲ್ಲ.

ರಾಜ್ಯದ ಅಭಿವೃದ್ಧಿಗೆ, ದೀನದಲಿತರ ಕಲ್ಯಾಣಕ್ಕೆ ರಾಜ್ಯದ ಮಠಾಧೀಶರು ಬಹಳಷ್ಟು ಕೊಡುಗೆ ನೀಡಿದ್ದಾರೆ. ತ್ರಿವಿಧ ದಾಸೋಹದ ಮೂಲಕ ಹಲವರ ಬಾಳಲ್ಲಿ ಬೆಳಕು ಮೂಡಿಸಿದ್ದಾರೆ. ಕರ್ನಾಟಕ ಶೈಕ್ಷಣಿಕವಾಗಿ ಮುಂದುವರಿಯಲು ಮಠಾಧೀಶರ ಕೊಡುಗೆ ಇದೆ. ಆರೋಗ್ಯ ಕ್ಷೇತ್ರದಲ್ಲಿಯೂ ಮಠಗಳು ಗಣನೀಯ ಸೇವೆ ಸಲ್ಲಿಸಿವೆ. ಅದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಅಧ್ಯಾತ್ಮ ಜೀವಿಗಳಾಗಿ ಬದುಕುತ್ತಿರುವ, ಸಮಾಜಕ್ಕೆ ಒಳಿತನ್ನೇ ಬಯಸುತ್ತಿರುವ ಬಹಳಷ್ಟು ಸ್ವಾಮೀಜಿಗಳು ಈಗಲೂ ನಮ್ಮೊಡನೆ ಇದ್ದಾರೆ. ರಾಜಕಾರಣಿಗಳನ್ನು ಕಂಡರೆ ದೂರ ಸರಿಯುವ ಮಠಾಧೀಶರೂ ಇದ್ದಾರೆ. ಸರ್ಕಾರವಾಗಲಿ, ರಾಜಕಾರಣಿಗಳಾಗಲಿ ಹಣ ನೀಡಿದರೆ ಅದನ್ನು ತಿರಸ್ಕರಿಸುವ ಮಠಾಧೀಶರು ನಮ್ಮೊಡನೆ ಇದ್ದಾರೆ. ಆದರೆ ಕೆಲವೇ ಕೆಲವು ಸ್ವಾಮೀಜಿಗಳು ಅತಿ ಹೆಚ್ಚು ವಾಚಾಳಿತನ ತೋರುತ್ತಿರುವುದು ರಾಜ್ಯದ ರಾಜಕೀಯ ರಂಗವನ್ನೂ ಬದಲಾಯಿಸಿದೆ, ಅಧ್ಯಾತ್ಮ ವಲಯವನ್ನೂ ಬದಲಾಯಿಸಿದೆ. ಇದು ರಾಜಕೀಯಕ್ಕೂ ಒಳ್ಳೆಯದಲ್ಲ, ಸಮಾಜಕ್ಕೂ ಒಳ್ಳೆಯದಲ್ಲ.

‘ತನುವ ಕೊಟ್ಟು ಗುರುವನೊಲಿಸಬೇಕು, ಮನವ ಕೊಟ್ಟು ಲಿಂಗವನೊಲಿಸಬೇಕು, ಧನವಕೊಟ್ಟು ಜಂಗಮವನೊಲಿಸಬೇಕು, ಈ ತ್ರಿವಿಧವ ಹೊರಗು ಮಾಡಿ, ಹರೆಯ ಹೊಯಿಸಿ ಕುರುಹ ಪೂಜಿಸುವ ಗೊರವರ ಮೆಚ್ಚ ಕೂಡಲಸಂಗಮದೇವ’ ಎಂದು ಬಸವಣ್ಣ ಹೇಳಿದ್ದಾರೆ. ತನುವ ಕೊಟ್ಟು ಗುರುವನೊಲಿಸುವ ಪರಿಯನ್ನು ಬಿಟ್ಟು ಧನವ ಕೊಟ್ಟು ಗುರುವನೊಲಿಸುವ ಪದ್ಧತಿ ರಾಜ್ಯದಲ್ಲಿ ಶುರುವಾಗಿ ಬಹಳ ಕಾಲ ಆಯಿತು. ಧನವ ಕೊಡಲು ಅಧಿಕಾರಸ್ಥರಿಗೆ ನಾಚಿಕೆಯಾಗುತ್ತಿಲ್ಲ. ತೆಗೆದುಕೊಳ್ಳುವ ಗುರುಗಳಿಗೂ ಅಂತಹ ಭಾವನೆ ಇದ್ದ ಹಾಗೆ ಕಾಣುತ್ತಿಲ್ಲ.

ಮುಖ್ಯಮಂತ್ರಿಯೊಬ್ಬರು ಯಾವುದೋ ಕಾರಣಕ್ಕೆ ಮಠಗಳಿಗೆ ಹಣ ನೀಡುವ ಪದ್ಧತಿ ಆರಂಭಿಸಿದರು. ನಂತರ ಅದು ಸಂಪ್ರದಾಯವೇ ಆಗಿ ಹೋಯಿತು. ಮುಂದೆ ಬಂದ ಮುಖ್ಯಮಂತ್ರಿಗಳೂ ಅದನ್ನು ಮುಂದುವರಿಸಿದರು. ರಾಜ್ಯದಲ್ಲಿ ಮಠಾಧೀಶರು ನಿಜವಾದ ಅರ್ಥದಲ್ಲಿ ಸೇವೆ ಸಲ್ಲಿಸುವ ಕಾಲಕ್ಕೆ ಯಾವ ಸರ್ಕಾರವೂ ಅವರಿಗೆ ನೆರವು ನೀಡುತ್ತಿರಲಿಲ್ಲ. ಭಕ್ತರು ಕೊಟ್ಟ ಹಣದಲ್ಲಿಯೇ ಅವರು ಸೇವಾ ಕಾರ್ಯ ನಡೆಸಿದ್ದರು ಎನ್ನುವುದನ್ನು ಮರೆಯುವಂತಿಲ್ಲ.



ಇತ್ತೀಚಿನ ದಿನಗಳಲ್ಲಿ ಮಠಾಧೀಶರು ಅಗತ್ಯಕ್ಕಿಂತ ಹೆಚ್ಚಾಗಿ ರಾಜ್ಯದ ಆಡಳಿತದಲ್ಲಿ ಮೂಗು ತೂರಿಸುವಂತಾಗಿದೆ. ಧನ ಕೊಡಲು ಮುಂದೆ ಬರುವ ರಾಜಕಾರಣಿಗಳನ್ನು ನಿಜವಾಗಿಯೂ ಸ್ವಾಮೀಜಿಗಳು ದೂರ ಇಡಬೇಕಿತ್ತು. ‘ಹತ್ತಿರ ಬಂದರೆ ನೋಡ್’ ಎಂಬ ಎಚ್ಚರಿಕೆಯನ್ನು ನೀಡಬೇಕಿತ್ತು. ಅದರ ಬದಲಾಗಿ, ಕೊಲೆ ಪ್ರಕರಣದಲ್ಲಿ ಜೈಲು ಸೇರಿ ಜಾಮೀನಿನ ಮೇಲೆ ಬಿಡುಗಡೆಯಾದ ರಾಜಕಾರಣಿಗಳನ್ನು ಹೂಮಳೆಗೈದು ಸ್ವಾಗತಿಸುವುದು, ಪೇಟ ತೊಡಿಸಿ ಸನ್ಮಾನಿಸುವ ಮಟ್ಟಕ್ಕೆ ಇಳಿದುಬಿಟ್ಟಿದ್ದಾರೆ. ನಾಚಿಕೆ ಎನ್ನುವುದು ಇಷ್ಟು ದುಬಾರಿಯಾದರೆ ಹೇಗೆ ಸ್ವಾಮಿ?

ಜೈಲಿನಿಂದ ಹೊರಬಂದವರು ಪೇಟ ತೊಟ್ಟು ಕುದುರೆ ಏರಬಹುದು. ಆದರೆ ಸಮಾಜದ ನೈತಿಕತೆ ಪಾತಾಳಕ್ಕೆ ಇಳಿಯುತ್ತದೆ. ‘ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ’ ಎಂಬ ಬಸವಣ್ಣ ಅವರ ಮಾತನ್ನು ಮಠಾಧೀಶರೇ ಪಾಲಿಸದಿದ್ದರೆ ಭಕ್ತರ ಪಾಡೇನು?

ಒಬ್ಬ ‘ಪ್ರಗತಿಪರ’ ಸ್ವಾಮೀಜಿ ಪತ್ರಿಕಾಗೋಷ್ಠಿ ಕರೆದು ಬಿಜೆಪಿಯಲ್ಲಿನ ಭಿನ್ನಮತವನ್ನು ಹೋಗಲಾಡಿಸಬೇಕು ಎಂದು ಸಲಹೆ ನೀಡುತ್ತಾರೆ. ಇನ್ನೊಬ್ಬ ಪ್ರಗತಿಪರ ಸ್ವಾಮೀಜಿ ಯಡಿಯೂರಪ್ಪ ಪರ ವಕಾಲತ್ತು ವಹಿಸುತ್ತಾರೆ. ನೂರಾರು ಸ್ವಾಮೀಜಿಗಳು ಸೇರಿ ಸಮಾವೇಶವನ್ನು ನಡೆಸಿ ಒಬ್ಬ ವ್ಯಕ್ತಿಯ, ಒಂದು ಪಕ್ಷದ ಪರ ಘೋಷಣೆ ಕೂಗುತ್ತಾರೆ. ಒಬ್ಬ ಸ್ವಾಮೀಜಿ ಯಾರನ್ನು ಮಂತ್ರಿ ಮಾಡಬೇಕು ಎಂದು ಆದೇಶ ಹೊರಡಿಸಿದರೆ, ಇನ್ನೊಬ್ಬ ಸ್ವಾಮೀಜಿ ಯಾವ ಖಾತೆ ನೀಡಬೇಕು ಎಂದು ಹೇಳುತ್ತಾರೆ.

ಕರ್ನಾಟಕದ ಸದ್ಯದ ರಾಜಕೀಯವನ್ನು ನೋಡಿದರೆ ಜನಪ್ರತಿನಿಧಿಗಳಿಗಿಂತ ಪೀಠಾಧಿಪತಿಗಳೇ ಹೆಚ್ಚು ಸಕ್ರಿಯರಾಗಿದ್ದಾರೆ. ನಿರ್ಧಾರವನ್ನು ಕೈಗೊಳ್ಳುತ್ತಾರೆ. ಅದನ್ನು ಪಾಲಿಸಲೇಬೇಕು ಎಂದು ಒತ್ತಡ ಹಾಕುತ್ತಾರೆ. ಒಂದು ಅರ್ಥದಲ್ಲಿ ಬಹಳಷ್ಟು ಸ್ವಾಮೀಜಿಗಳು ಬಸವಣ್ಣ ಹೇಳಿದ ಹಾಗೆ ‘ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ, ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯ’ ಎಂಬ ಮಾತನ್ನು ನಿಜ ಮಾಡಲು ಹೊರಟಹಾಗೆ ಕಾಣುತ್ತಿದೆ. ಈ ವಚನವನ್ನು ಬಸವಣ್ಣನವರು ‘ನುಡಿಗೆ ತಕ್ಕ ನಡೆಯ ಕಂಡಡೆ ಕೂಡಲಸಂಗಮದೇವನೊಳಗಿಪ್ಪನಯ್ಯ’ ಎಂದು ಮುಕ್ತಾಯಗೊಳಿಸಿದ್ದಾರೆ. ಇದರ ಅರ್ಥವನ್ನು ಸ್ವಾಮೀಜಿಗಳಿಗೂ ರಾಜಕಾರಣಿಗಳಿಗೂ ತಿಳಿಹೇಳಬೇಕಾದ ಪರಿಸ್ಥಿತಿ ಬಂದಿರುವುದು ದುರಂತ.

ಕಾಡಿನ ರಾಜನಾಗಬೇಕು ಎಂದು ನರಿಯೊಂದು ಬಣ್ಣ ಬಳಿದುಕೊಂಡು ಪ್ರಾಣಿಗಳನ್ನು ಹೆದರಿಸಿ ಸಿಂಹಾಸನ ಏರಬಹುದು. ಆದರೆ ಜೋರು ಮಳೆ ಬಂದರೆ ಬಣ್ಣ ಬಯಲಾಗುತ್ತದೆ. ರಾಜ್ಯದಲ್ಲಿ ಈಗ ಆಗಿರುವುದೂ ಅದೇ. ಇಲ್ಲೀಗ ಸಾಕಷ್ಟು ಮಳೆಯಾಗಿದೆ. ಬಹಳಷ್ಟು ಜನರ ಮುಖದ ಮೇಲಿರುವ ಬಣ್ಣ ತೊಳೆದು ಹೋಗಿ ನಿಜರೂಪ ಕಾಣುತ್ತಿದೆ. ಆದರೆ ನಾವು ನಿಜರೂಪ ಒಪ್ಪಿಕೊಳ್ಳುತ್ತಿಲ್ಲ. ಮತ್ತೆ ಬಣ್ಣ ಬಳಿದುಕೊಳ್ಳಲು ಅವಕಾಶ ನೀಡುತ್ತಿದ್ದೇವೆ. ಛೆ ಛೇ.

ಚುರುಮುರಿ



ಚಪಲಾಂಗದ ಭವಿಷ್ಯ

• ಲಿಂಗರಾಜು ಡಿ.ಎಸ್.

‘ಇದೇನ್ಲಾ ಮೈಸೂರಿಗೋಗಿದ್ರಂತೆ? ಏನು ಕಡಿದು ಕಟ್ಟೆ ಹಾಕಕ್ಕೋಗಿದ್ರಿ?’ ತುರೇಮಣೆಗೆ ಕಿಚಾಯಿಸಿದೆ.

‘ದೇಸದೇಲಿ ಜನಸಾಮಾನ್ಯರ ಬದುಕು ಮುಳ್ಳಸೆ ಮ್ಯಾಲೆ ಬಿದ್ದದೆ ಕನೋ. ವಸಾ ಗ್ರಹಸಚಿವರು ಮೈಸೂರು ಪೊಲೀಸ್ ಅಕಾಡೆಮೀಲಿ ಮುಂದೆ ಕಳಸಿಗೆ ಮಡಿಕ್ಯಂಡು ಎನ್‌ಕೌಂಟರ್ ಮಾಡೋ ಅಭ್ಯಾಸ ಮಾಡ್ತಿದ್ರು. ಅವರು ಹಾರಿಸಿದ ಗುಂಡು ಒಂದೂ ಗುರಿ ತಲುಪ್ತಾನೇ ಇರನಿಲ್ಲ. ಅದಿಕ್ಕೇ ನಾನು ಒಂದು ಐಡೀರಿಯಾ ಕೊಟ್ಟು ಬಂದೆ ಕಲಾ!’ ಅಂತ ಕೊಚ್ಚಿಗ್ಯಂಡರು.

‘ಅದೇನೋ ತಮ್ಮ ಘನಂದಾರಿ ಐಡಿಯಾ?’ ಅಂತ ಕೇಳಿದೆ.

‘ನೋಡ್ಲಾ, ಮೊದ್ಲು ಗುಂಡು ಹಾರಿಸ್ಬಕು. ಅದು ಎಕ್ಕಡಿಕೋ ಹೋಗಿ ತಗುಲ್ತದೆ. ಆಮೇಲೆ ಅದುರ ಸುತ್ತ ಚಾಕ್‌ಪೀಸಲ್ಲಿ ಒಂದು ಸೊನ್ನೆ ಬರೆಯದು. ಗುರಿ ತಲುಪಿದಂಗೇ ಅಲ್ಲುವ್ಲಾ?’ ಅಂದ್ರು.

‘ಅಧಿಕಾರಿಗಳೆಲ್ಲಾ ಹಿಂಗೇ ಟಾರ್ಗೆಟ್ ಮುಟ್ಟದು ಕನೇಳಿ!’ ಅಂತ ನಿಟ್ಟುಸಿರು ಬುಟ್ಟೆ.

‘ಮೈಸೂರು ಮಯೇಸಣ್ಣ ಅತ್ಯಾಚಾರಿಗಳ ಎನ್‌ಕೌಂಟರ್ ಆಗ್ಲಿ ಅಂದ್ರೆ, ಹೊಸಪೇಟೆ ಸಿಂಗಣ್ಣ ಎಲ್ಲಾನು ಕತ್ತರಿಸಿ ಅಂದುತ್ತಲ್ಲ ಅದುಕ್ಕೆ ಲಾರಿ ತುಂಬಾ ಅತ್ಯಾಚಾರಿಗಳ ಪಟ್ಟಿ ತುಂಬಿಕ್ಯಂಡೋಗಿದ್ದೆ. ಇನ್ನೂ ಸಿದ್ದೇಸಣ್ಣ, ಹುಲಿ ಸಿದ್ದರಾಮಣ್ಣ, ಈಸೂರಪ್ಪಾರಪ್ಪರ ತಕ್ಕೋಗ್ಬೇಕು!’ ಅಂದ್ರು.

‘ಅಲ್ಲಾ ಸಾ, ಅತ್ಯಾಚಾರಿಗಳ ಪಟ್ಟ ಲಾರಿ ತುಂಬೋವಷ್ಟದೆ ಅಂದ್ರೆ ಎಲ್ಲಾರೂ ಅತ್ಯಾಚಾರಿಗಳೇ ಅಂತೀರಾ?’ ನನ್ನ ಅನುಮಾನ ಹೇಳಿದೆ.

‘ಲೇ ಹೈವಾನ್, ಸಾಮಾನ್ಯ ಅತ್ಯಾಚಾರಿಗಳು, ಧಾರ್ಮಿಕ, ರಾಜಕೀಯ ಅತ್ಯಾಚಾರಿಗಳು, ಮಾತಲ್ಲೇ ಅತ್ಯಾಚಾರ ಮಾಡೋರು, ಕಣ್ಣಲ್ಲೇ ತಿವಿಯೋರು ಅಂತ ನಾನಾ ಟೈಪ್ ಅದೆ. ಸಾಮಾನ್ಯರು ಎನ್‌ಕೌಂಟರಾದ್ರೆ ಬ್ಯಾರೇವು ಸಾಕ್ಸಿಗಳಿಗೇ ಮಾಮಾಚಾರ ಮಾಡಿ ಬಚಾವಾಯ್ತವೆ!’ ಅಂತ ಸತ್ಯ ನುಡಿದ್ರು.

‘ಅದುಕ್ಕೇ ನಿಮಗೆ ಗ್ರಹ ಸಚೀವರಂಗೆ ರಾತ್ರಿವತ್ತು ನಿದ್ದೆ ಬತ್ತಿಲ್ಲ ಅನ್ನಿ?’ ಅಂದೆ.

‘ಥೂ ಏನು ಮಾಡದ್ಲಾ, ಇಂಪ್ಲೂಯನ್ಸ್ಡ್ ಅತ್ಯಾಚಾರಿಗಳಿಗೆ ಎಲ್ಲಾನೂ ಕತ್ತರಿಸಿ ಹಾಕಿದರೆ ಚಪಲಾಂಗದ ಭವಿಷ್ಯ ಹ್ಯಂಗೆ ಅಂತ ಚಿಂತಾಗ್ಯದೆ!’

ಸಂಗತ

ಪಾಷಾಣದ ಪಾಶ ಹರಿಯಬೇಕಿದೆ

ಜೀವಿಗಳು ಮತ್ತು ಪರಿಸರದ ಸ್ವಾಸ್ಥ್ಯದ ಮೇಲಾಗುವ ಗಂಭೀರ ಪರಿಣಾಮಗಳ ಅರಿವಿಲ್ಲದೆಯೋ ಇಲ್ಲಾ ಉಪೇಕ್ಷೆಯಿಂದಲೋ ರಾಸಾಯನಿಕಗಳ ಬಳಕೆ ಹದ ತಪ್ಪಿದೆ

• ಡಾ. ಮುರಳೀಧರ ಕಿರಣಕೆರೆ

ಹಸುವಿನ ಚಿಕಿತ್ಸೆಗಾಗಿ ಆ ರೈತನ ಮನೆಯಲ್ಲಿದ್ದೆ. ‘ಸಾರ್, ಈ ಕಡೆ ನಿಲ್ಲಿ. ಅಲ್ಲಿ ಕಟ್ಟಿರುವೆಗಳ ಸಂತೆನೇ ಇದೆ’ ಎಂದು ಎಚ್ಚರಿಸುತ್ತಾ ನಿಂಬೆಯ ಸುವಾಸನೆಯುಳ್ಳ ಗುಲಾಬಿ ವರ್ಣದ ಪೌಡರನ್ನು ಇರುವೆಗಳ ಸಾಲಿನ ಮೇಲೆ ಸುರಿದಿದ್ದ. ‘ಮಳೆಗಾಲ್ದಲ್ಲಿ ಒಂಚೂರು ಬಿಸ್ಲು ಹೊರಟ್ರೆ ಸಾಕು ಹೀಗೆ ಎದ್ದುಬಿಡ್ತವೆ. ಇವುಗಳ ಕಾಟಕ್ಕೆ ಈ ಪುಡಿ ಹೈ ಕ್ಲಾಸ್ ಸಾರ್. ಹಾಕೋದ್ರೊಳಗೆ ನೆಗ್ದು ಬೀಳ್ತವೆ. ರೇಟೂ ಬಾಳಾ ಕಮ್ಮಿ, ಪ್ಯಾಕೇಟಿಗೆ ಬರೇ ಐದು ರೂಪಾಯಿ’ ಎಂದು ಗುಣಗಾನ ಮಾಡುತ್ತಾ ಮತ್ತಷ್ಟು ಎರಚಿ ಸಂತೋಷಪಟ್ಟ. ನಾನು ತಡೆಯುವ ಮುನ್ನವೇ ಅವನ ಒಂದು ವರ್ಷದ ಮೊಮ್ಮಗು ಪುಡಿಯನ್ನು ತುಳಿದುಕೊಂಡು ಅಂಗಳಕ್ಕೋಡಿತು. ಆ ದೃಶ್ಯ ಕಂಡು ಬೆಚ್ಚಿಬಿದ್ದೆ!

‘ಅದು ವಿಷ ಮಾರಾಯ. ಮಗು ಮೆಟ್ಟಂಡು ಓಡಾಡ್ತಿದೆ. ಮೊದ್ಲು ಅದರ ಕಾಲು ತೊಳೆಸು’ ನನ್ನ ಗಾಬರಿಯ ಉದ್ಗಾರಕ್ಕೆ ಅವನದ್ದು ತಣ್ಣನೆ ಪ್ರತಿಕ್ರಿಯೆ: ‘ಇಲ್ಲ ಸಾರ್, ಈ ಪುಡಿ ಇರುವೆಗಳಿಗೆ ಮಾತ್ರ ವಿಷ. ಮಕ್ಳು ಮರಿಗೆ ಏನೂ ಆಗಲ್ಲ’. ಕೀಟನಾಶಕ ರಾಸಾಯನಿಕಗಳ ಬಗ್ಗೆ ಕನಿಷ್ಠ ತಿಳಿವಳಿಕೆಯೂ ಇಲ್ಲದವನಿಗೆ ಸಂಭವನೀಯ ಅಪಾಯಗಳ ಬಗ್ಗೆ ತಿಳಿಸಿ ಹೇಳಿದೆ. ಆ ಕ್ಷಣದಲ್ಲಿ ಎಲ್ಲವೂ ಅರ್ಥವಾದಂತೆ ತಲೆಯಾಡಿಸಿದರೂ ಬಹುಜನರ ಆಯ್ಕೆಯ ಈ ಸುಲಭದ ದಾರಿಯನ್ನು ಬಿಡುತ್ತಾನೆಂಬ ನಂಬಿಕೆ ಮೂಡಿಸುವಂತಿರಲಿಲ್ಲ ಅವನ ಚರ್ಯೆ.

ಇದು, ಒಂದು ಮನೆಯ ಕತೆ ಖಂಡಿತಾ ಅಲ್ಲ. ಹಳ್ಳಿ ಪಟ್ಟಣಗಳ ಭೇದವಿಲ್ಲದೆ ಎಲ್ಲೆಡೆಯೂ ಕಾಣಸಿಗುವುದು ಇಂಥದ್ದೇ ಆತಂಕಕಾರಿ ದೃಶ್ಯಗಳು. ಇರುವೆ, ಜಿರಲೆ, ನೊಣ, ಸೊಳ್ಳೆ, ಚಿಗಟ, ಉಣ್ಣೆಗಳ ಸಂಹಾರಕ್ಕೆ ವಿಷಗಳ ಬಳಕೆ ಎಗ್ಗಿಲ್ಲದೆ ನಡೆಯುತ್ತಿದೆ. ಜನ-ಜಾನುವಾರು, ಪಶು-ಪಕ್ಷಿ, ಜಲಚರ, ಪರಿಸರದ ಸ್ವಾಸ್ಥ್ಯದ ಮೇಲಾಗುವ ಗಂಭೀರ ಪರಿಣಾಮಗಳ ಅರಿವಿಲ್ಲದೆಯೋ ಅಥವಾ ಉಪೇಕ್ಷೆಯಿಂದಲೋ ರಾಸಾಯನಿಕಗಳ ಬಳಕೆ ಹದ ತಪ್ಪಿದೆ.

ಹಿತವಾದ ವಾಸನೆ, ಆಕರ್ಷಕ ಬಣ್ಣ, ಕೈಗೆಟುಕುವ ದರ, ಬಳಸಲು ಸುಲಭವೆನಿಸುವ ಬಗೆ ಬಗೆಯ ವಿನ್ಯಾಸ, ಶೀಘ್ರ ಫಲಿತಾಂಶ, ಮೋಡಿಗೊಳಿಸುವ ಜಾಹೀರಾತು... ಧಾರಾಳವಾಗಿ ಉಪಯೋಗಿಸಲು ಇಂಥವೇ ಹತ್ತಾರು ಕಾರಣಗಳು. ಹುಡಿ, ಹರಳು, ಗುಳಿಗೆ, ದ್ರಾವಣ, ಬತ್ತಿ, ಜೆಲ್, ಸ್ಪ್ರೇ, ಕೇಕ್, ಕಾಯಿಲ್, ಚಾಕ್‌ಪೀಸ್‌ಗಳೆಂಬ ದಶಾವತಾರಗಳಲ್ಲಿ ಮೆರೆಯುತ್ತಿರುವ ಕೀಟನಾಶಕಗಳದ್ದು ತಡೆರಹಿತ ಓಟ.

ಕ್ರಿಮಿನಾಶಕಗಳು ಕ್ರಿಮಿ, ಕೀಟಗಳಿಗೆ ಮಾತ್ರ ವಿಷಕಾರಿ; ಮಾನವ, ಪಶುಪಕ್ಷಿಗಳಿಗಲ್ಲ ಎಂಬುದು ಬಹುತೇಕ ಬಳಕೆದಾರರ ಬಲವಾದ ನಂಬಿಕೆ. ಆದರೆ ವಾಸ್ತವ ಹೀಗಿಲ್ಲ. ಈ ರಾಸಾಯನಿಕಗಳೆಲ್ಲಾ ಘೋರ ವಿಷಗಳೇ. ಕ್ರಿಮಿಗಳನ್ನು ಕೊಲ್ಲುವ ಪಾಷಾಣ ಇತರ ಜೀವಿಗಳ ಮೇಲೂ ಪರಿಣಾಮ ಬೀರುವುದೆಂಬುದನ್ನು ಅರಿಯಲು ವಿಜ್ಞಾನವನ್ನು ಆಳವಾಗಿ ಓದಬೇಕೆಂದೇನೂ ಇಲ್ಲ. ಸಾಮಾನ್ಯ ಜ್ಞಾನವಿದ್ದರೆ ಸಾಕು. ಆದರೆ, ನಮ್ಮಲ್ಲಿ ಅನೇಕರಿಗೆ ಈ ಪರಿಯ ಸಾಮಾನ್ಯ ತಿಳಿವಳಿಕೆಯೂ ಇಲ್ಲದಿರುವುದು ನಿಜಕ್ಕೂ ದೊಡ್ಡ ದುರಂತ.

ಕೀಟಗಳ ನಾಶಕ್ಕೆ ಅವುಗಳ ಗಾತ್ರದ ಕಾರಣ ಸಣ್ಣ ಪರಿಮಾಣದ ವಿಷ ಸಾಕು. ಈ ಪ್ರಮಾಣ ಮಾನವ ಸೇರಿದಂತೆ ಇತರ ಪ್ರಾಣಿಗಳ ಮೇಲೆ ಗಂಭೀರ ಪರಿಣಾಮ ಬೀರದಿದ್ದರೂ ನಿರಂತರ ಸಂಪರ್ಕ ಹಲವು ದುಷ್ಪರಿಣಾಮಗಳನ್ನು ತಂದೊಡ್ಡುತ್ತಾ ಸ್ವಾಸ್ಥ್ಯ ಹದಗೆಡಿಸುತ್ತದೆ. ತಲೆನೋವು, ವಾಕರಿಕೆ, ವಾಂತಿ, ಭೇದಿಯಂತಹ ತೊಂದರೆಗಳ ಜೊತೆಗೆ ದೀರ್ಘಾವಧಿಯಲ್ಲಿ ನರದೌರ್ಬಲ್ಯ, ಸಂಧಿವಾತ, ಪಾರ್ಶ್ವವಾಯು, ಕ್ಯಾನ್ಸರ್, ಹೃದಯಬೇನೆ, ಸಂತಾನಹೀನತೆ, ಅಂಗವೈಕಲ್ಯದಂತಹ ಹಲವು ಸಮಸ್ಯೆಗಳು ಬದುಕನ್ನು ಭಾರವಾಗಿಸಬಹುದು!



ಪಶುಸಂಗೋಪನಾ ಕ್ಷೇತ್ರದಲ್ಲೂ ರಾಸಾಯನಿಕ ಪೀಡೆನಾಶಕಗಳ ಬಳಕೆ ಯಥೇಚ್ಛವಾಗಿದೆ. ಉಣ್ಣೆ, ಚಿಗಟ, ಹೇನುಗಳ ನಿವಾರಣೆಗೆ ಪದೇ ಪದೇ ವಿಷಕಾರಿ ರಾಸಾಯನಿಕಗಳನ್ನು ಬಳಸಲಾಗುತ್ತಿದೆ. ಜಾನುವಾರುಗಳ ಚರ್ಮದಿಂದ ಹೀರಲ್ಪಡುವ ಈ ರಾಸಾಯನಿಕಗಳು ಅವುಗಳ ಆರೋಗ್ಯಕ್ಕೆ ಹಾನಿ ಮಾಡುವುದಲ್ಲದೆ ಹಾಲು, ಮಾಂಸದ ಮೂಲಕ ಬಳಕೆದಾರರ ದೇಹ ಸೇರಿ ಸಮಸ್ಯೆಗಳ ಸರಪಣಿ ಮುಂದುವರಿಸುತ್ತವೆ. ಕೊಟ್ಟಿಗೆಯಲ್ಲಿನ ಉರಿನೊಣಗಳ ಹತೋಟಿಗೆ ಕೀಟನಾಶಕ ಸಿಂಪಡಿಸುವುದು, ಜಾನುವಾರುಗಳ ಕೋಡು, ಮೈಮೇಲೆ ಕೀಟನಾಶಕದ ಚಾಕ್ ತುಂಡಿನಿಂದ ಗೀಟುಗಳನ್ನು ಎಳೆಯುವುದು ಈಗ ಸಾಮಾನ್ಯವಾಗಿದೆ. ಇನ್ನು ಇಲಿ, ಹೆಗ್ಗಣಗಳಿಗೆ ಇಟ್ಟ ಪಾಷಾಣವನ್ನು ಆಕಸ್ಮಿಕವಾಗಿ ತಿಂದೋ ಇಲ್ಲಾ ಇದರಿಂದ ಕಲುಷಿತ ನೀರನ್ನು ಕುಡಿದೋ ಸಾವನ್ನಪ್ಪಿದ ಜಾನುವಾರುಗಳು, ನಾಯಿಗಳ ಸಂಖ್ಯೆ ಅಂಕಿ ಅಂಶಗಳಿಗೆ ನಿಲುಕದ್ದು.

ಕಳೆನಾಶಕ, ಕೀಟನಾಶಕಗಳ ಹಾನಿಕರ ಪಾರ್ಶ್ವ ಪರಿಣಾಮಗಳ ಬಗ್ಗೆ ರೈತರಿಗೆ ಅರಿವು ಮೂಡಿಸುವುದು ಸವಾಲಿನ ಕೆಲಸ. ಜಾನುವಾರುಗಳ ಜೊತೆಗೆ ಪರಿಸರದ ಸ್ವಚ್ಛತೆ, ನೈರ್ಮಲ್ಯ ಕಾಪಾಡುವುದು, ರಾಸಾಯನಿಕ ವಿಷಗಳನ್ನು ಅತಿ ಅಗತ್ಯವಿದ್ದಾಗ ಮಾತ್ರ ಸೂಕ್ತ ನಿಗಾದೊಂದಿಗೆ ಮಿತಿಯಲ್ಲಿ ಬಳಸುವುದು, ಸುರಕ್ಷಿತ ಸಾವಯವ ವಸ್ತುಗಳನ್ನು ಬಳಸಿ ಪೀಡೆಗಳನ್ನು ನಿಯಂತ್ರಿಸುವುದು, ಸಸ್ಯಜನ್ಯ ಪದಾರ್ಥಗಳ ಧೂಮ ಹಾಕುವುದು ಸದ್ಯಕ್ಕೆ ನಮ್ಮ ಮುಂದಿರುವ ವಿಷ ದೂರವಿರಿಸುವ ಆಯ್ಕೆಗಳು.

ಹೌದು, ಪಾಷಾಣದ ಪಾಶ ತುಂಡರಿಸಲು ಅರಿವು ಮಾತ್ರವೇ ಪರಿಣಾಮಕಾರಿ ಅಸ್ತ್ರ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ, ತೀರ್ಥಹಳ್ಳಿ

ವಾಚಕರ ವಾಣಿ

ಬೇಟೆಗಾರರ ಬೇಟೆಯಾಡಲು ಕೈಜೋಡಿಸಿ

ಶಿರಸಿ ತಾಲ್ಲೂಕಿನಲ್ಲಿ ಪ್ರಾಣಿ ಉರುಳಿಗೆ ಸಿಲುಕಿ ಕಪ್ಪು ಚಿರತೆಯೊಂದು ಬಲಿಯಾಗಿರುವುದು (ಪ್ರ.ವಾ., ಆ. 28) ನೋವಿನ ಸಂಗತಿ. ಶಿರಸಿ ಭಾಗದಲ್ಲಿ ಮೊದಲ ಬಾರಿಗೆ ಕಾಣಸಿಕ್ಕಂತಹ ಈ ಕಪ್ಪು ಚಿರತೆ ನಿಸರ್ಗದ ಅಪರೂಪದ ಸೃಷ್ಟಿಗಳಲ್ಲೊಂದು. ಇದೇ ತೆರನಾಗಿ ಮುಂಗುಸಿ, ಕಬ್ಬೆಕ್ಕು, ಉಡ, ನರಿ, ಮೊಲ, ಮುಳ್ಳುಹಂದಿಗಳಲ್ಲದೆ ಹಲವಾರು ಪಕ್ಷಿಗಳನ್ನೂ ಬೇಟೆಗಾರರು ಯಾವುದೇ ಅಡೆತಡೆ ಇಲ್ಲದೆ ಪ್ರತಿನಿತ್ಯ ಬೇಟೆಯಾಡುತ್ತಿದ್ದಾರೆ. ಕಾನೂನಿನ ಬಗ್ಗೆ ಕಿಂಚಿತ್ತೂ ಗೌರವ, ಭಯವಿಲ್ಲದಿರುವುದು ಅವರ ಅಟ್ಟಹಾಸಕ್ಕೆ ಕಾರಣವಾಗಿದೆ.

ಎಷ್ಟೋ ವೇಳೆ ಇವರು ಪ್ರಾಣಿಗಳನ್ನು ಬೇಟೆಯಾಡಿ ನಿರ್ದಯವಾಗಿ ಕೊಲ್ಲುವ ಚಿತ್ರ ಮತ್ತು ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ಶೌರ್ಯ ಪ್ರದರ್ಶನ ಮಾಡುತ್ತಾರೆ. ಅರಣ್ಯ ಇಲಾಖೆಯ ಜೊತೆಗೆ ಸಾರ್ವಜನಿಕರೂ ಸಹಕರಿಸಿ ಇಂತಹ ಬೇಟೆಗಾರರಿಗೆ ಶಿಕ್ಷೆಯಾಗುವಂತೆ ಮಾಡಬೇಕು. ಆಗಮಾತ್ರ ವನ್ಯಜೀವಿಗಳ ಸಂರಕ್ಷಣೆ ಸಾಧ್ಯ. ಇಲ್ಲವಾದಲ್ಲಿ ಮೊದಲು ಅವುಗಳ ಅಳಿವು, ನಂತರದ್ದು ನಮ್ಮದೇ, ಅಲ್ಲವೆ?

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಇದು ಕೃತಿಚೌರ್ಯವಲ್ಲ, ಭಾವಚೌರ್ಯ!

ನಾನು ವಿದ್ಯಾರ್ಥಿ ದೆಸೆಯಲ್ಲಿ ಕನ್ನಡದ ನವ ಸಂವೇದನಾಶೀಲ ಚಿಂತಕರಾದ ಲಂಕೇಶ್, ತೇಜಸ್ವಿ, ಚಿದಾನಂದ ಮೂರ್ತಿ, ಎಂ.ಎಂ.ಕಲಬುರ್ಗಿ ಮುಂತಾದವರ ಕೆಲವು ವಿಮರ್ಶಾ ಮತ್ತು ಸಂಶೋಧನಾ ಲೇಖನಗಳನ್ನು ಓದುತ್ತಿದ್ದಾಗ, ನನ್ನೊಳಗಿನ ಬರಹಗಾರನೂ ಜಾಗೃತನಾಗುತ್ತ ಹೋಗುತ್ತಿದ್ದ. ಅವರೆಲ್ಲರ ಆಲೋಚನಾ ಕ್ರಮಗಳು, ಸಾಹಿತ್ಯ ಹಾಗೂ ಸಂಸ್ಕೃತಿಯ ವಿಚಾರಗಳು ಹೊಸ ಮಾದರಿಗಳನ್ನು ನನಗೆ ಪರಿಚಯಿಸಿದವು. ಜೊತೆಗಿವು ಸೃಜನಶೀಲ ಮನಸ್ಸುಗಳಿಗೆ ಪರಿಕಲ್ಪನಾತ್ಮಕವಾಗಿ ಅಕ್ಷರ ಭಿತ್ತಿಯಾಗಿ ಪಡಿಯಚ್ಚು ಮೂಡಿಸಿಕೊಳ್ಳಲು ಸಹಾಯಕವಾಗುತ್ತಿದ್ದವು ಕೂಡ. ಆದರಿಂದು ಬಹುತೇಕ ಅಕಡೆಮಿಕ್ ಬರಹಗಾರರ ಕೃತಿಗಳು ಕನ್ನಡ ಪುಸ್ತಕ ಭಂಡಾರಗಳನ್ನು ಆಕ್ರಮಿಸಿಕೊಳ್ಳುತ್ತಿವೆ. ಇವುಗಳಲ್ಲಿ ಸ್ವಂತಿಕೆ ಹೋಗಲಿ ಸರಿಯಾದ ಪರಾಮರ್ಶೆಯನ್ನು ಸಹ ಕಾಣಲು ಸಾಧ್ಯವಾಗುತ್ತಿಲ್ಲ. ಇದು ನಿಜಕ್ಕೂ ಬೇಸರದ ಸಂಗತಿ.

ವಿದ್ಯಾರ್ಥಿಗಳು ಪಠ್ಯವನ್ನು ಓದಿ ಪರೀಕ್ಷೆಗಳಲ್ಲಿ ಕೇಳಲಾದ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಸಾರಾಂಶವನ್ನು ಸಂಗ್ರಹಿಸಿ ಬರೆದಂತೆ ಇತ್ತೀಚಿನ ಹಲವು ಬರಹಗಳು ಕಂಡುಬರುತ್ತಿವೆ. ಅಂದರೆ ಮೂಲ ಲೇಖಕನ ಚಿಂತನೆಯನ್ನು ತನ್ನದೆಂದು ಪ್ರತಿಬಿಂಬಿಸಿಕೊಳ್ಳುವ ಚಾಲಾಕಿತನ. ಇದು ಕೃತಿಚೌರ್ಯವಲ್ಲ, ನಿಜ. ಆದರೆ ಅದರ ಪರಿಷ್ಕೃತ ಕುರೂಪವಾದ ಭಾವಚೌರ್ಯ!

ಡಾ. ಸಂಪತ್ ಬೆಟ್ಟಗೆರೆ, ಮೂಡಿಗೆರೆ

ಮೇಯರ್ ಸ್ಥಾನ ಆಲಂಕಾರಿಕವಾದುದಲ್ಲ

ಮೈಸೂರು ನಗರಸಭೆಯು ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೆ ಏರಿದಾಗಿನಿಂದ ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದ ಹಲವಾರು ಮಹನೀಯರು ಈ ಹುದ್ದೆಯನ್ನು ಅಲಂಕರಿಸಿದ್ದಾರೆ. ಮಹಾಪೌರರ ಹುದ್ದೆಯನ್ನು ಒಂದು ಪೂಜನೀಯ ಹುದ್ದೆ ಎಂದು ಪರಿಗಣಿಸಲಾಗಿದೆ. ಅವರು ಮಹಾನಗರದ ಪ್ರಥಮ ಪ್ರಜೆ ಕೂಡ ಆಗಿರುವುದರಿಂದ ಅವರ ಹುದ್ದೆಗೆ ಸಾಕಷ್ಟು ಮೆರುಗು ಇದೆ. ಮಹಾನಗರಕ್ಕೆ ಮೂಲ ಸೌಕರ್ಯ ಕಲ್ಪಿಸುವ ಎಲ್ಲಾ ವಾರ್ಡುಗಳ ಉಸ್ತುವಾರಿ ಅವರಿಗೆ ಸೇರಿರುತ್ತದೆ. ಮೈಸೂರು ನಗರಕ್ಕೆ ಯಾರೇ ಗಣ್ಯ ವ್ಯಕ್ತಿಗಳು ಆಗಮಿಸಿದರೂ, ಅವರನ್ನು ಸ್ವಾಗತಿಸಿ ಬರಮಾಡಿಕೊಳ್ಳುವ ಕರ್ತವ್ಯವೂ ಮೇಯರ್ ಅವರದಾಗಿರುತ್ತದೆ. ಆದರೆ, ವಾಸ್ತವವಾಗಿ, ಮೇಯರ್ ಸ್ಥಾನವನ್ನು ಒಂದು ಆಲಂಕಾರಿಕ ಗೊಂಬೆಯ ಹಾಗೆ ಬೆಳೆಸುತ್ತಿರುವುದು ವಿಷಾದನೀಯ ಸಂಗತಿ.

ಈ ಬಗ್ಗೆ ಅನೇಕ ಮಾಜಿ ಮಹಾಪೌರರು ಬಹಿರಂಗವಾಗಿಯೇ ನೋವು ವ್ಯಕ್ತಪಡಿಸಿ, ತಾವು ನೆಪಮಾತ್ರಕ್ಕೆ ಮೇಯರ್, ಎಲ್ಲಾ ವಾಸ್ತವಾಧಿಕಾರಗಳು ಕಾರ್ಪೊರೇಷನ್ ಆಯುಕ್ತರ ಬಳಿಯೇ ಇವೆ ಎಂದು ಅಲವತ್ತುಕೊಂಡಿದ್ದಾರೆ. ದಸರಾ ಸೇರಿದಂತೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲಿ ಮೇಯರ್ ಅವರನ್ನು ಅಲಕ್ಷಿಸಿರುವ ಹತ್ತು ಹಲವು ಉದಾಹರಣೆಗಳು ನಮ್ಮ ಮುಂದಿವೆ. ಅದೇನೇ ಇರಲಿ, ಮೇಯರ್ ಹುದ್ದೆಗೆ ಸಲ್ಲಬೇಕಾದ ಘನತೆ ಮತ್ತು ಗೌರವವನ್ನು ನೀಡಬೇಕಾದದ್ದು ಸಂಬಂಧಪಟ್ಟವರ ಕರ್ತವ್ಯ.

ಕೆ.ವಿ.ವಾಸು, ಮೈಸೂರು

ಖ್ಯಾತನಾಮರ ಹೆಸರಿಟ್ಟು ಮೇಲ್ಪಂಕ್ತಿಯಾಗಲಿ

ಸರ್ಕಾರ ಏನೇ ಮಾಡಿದರೂ ಅದನ್ನು ವಿವೇಚನೆ ಇಲ್ಲದೆ ಸಮರ್ಥಿಸಲು ಕೆಲವರು ತುದಿಗಾಲಲ್ಲಿ ನಿಂತಿರುತ್ತಾರೆ. ಎ.ಸೂರ್ಯಪ್ರಕಾಶ್ ಅವರ ಅಂಕಣ ಬರಹ (ಪ್ರ.ವಾ., ಆ. 24) ಇದಕ್ಕೊಂದು ತಾಜಾ ಉದಾಹರಣೆ. ‘ರಾಜೀವ್ ಗಾಂಧಿ ಖೇಲ್ ರತ್ನ’ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ‘ಮೇಜರ್ ಧ್ಯಾನಚಂದ್ ಖೇಲ್ ರತ್ನ’ ಎಂದು ಬದಲಿಸಿರುವುದನ್ನು ಅರಗಿಸಿಕೊಳ್ಳಲು ಕಾಂಗ್ರೆಸ್ ಪಕ್ಷಕ್ಕೆ ಕಷ್ಟವಾಗುತ್ತಿದೆ ಎಂದಿದ್ದಾರೆ. ಆದರೆ ಧ್ಯಾನಚಂದ್ ಹೆಸರಿನ ಕ್ರೀಡಾ ಪ್ರಶಸ್ತಿಯೊಂದು ಈಗಾಗಲೇ ಇರುವಾಗ ಇನ್ನೊಂದು ಪ್ರಶಸ್ತಿಗೆ ಅವರ ಹೆಸರಿಡುವ ಅಗತ್ಯವೇನಿತ್ತು? ನಿಜ, ಕಾಂಗ್ರೆಸ್ ಪಕ್ಷದ ನಿರಂತರ ಆಳ್ವಿಕೆಯಲ್ಲಿ ದೇಶದ ಪ್ರಮುಖ ಸ್ಥಳಗಳಿಗೆ ನೆಹರೂ, ಇಂದಿರಾ ಗಾಂಧಿ ಕುಟುಂಬದ ಹೆಸರುಗಳನ್ನೇ ಇಟ್ಟಿರುವುದು ದುರಂತ. ಆದರೆ ಹೊಸ ಸ್ಥಳ, ಪ್ರಶಸ್ತಿಗಳಿಗೆ ಇತರ ಪ್ರಸಿದ್ಧ ವ್ಯಕ್ತಿಗಳ ಹೆಸರಿಡುವ ಮೂಲಕ ಮೇಲ್ಪಂಕ್ತಿಯಾಗಬೇಕೆ ವಿನಾ ಈ ರೀತಿ ಇರುವ ಹೆಸರುಗಳನ್ನೇ ಬದಲಿಸುವ ಮೂಲಕ ಅಲ್ಲ.

ಸುವರ್ಣ ಚತುಷ್ಪಥ ರಸ್ತೆಗೆ ಇಟ್ಟಿದ್ದ ಅಟಲ್ ಬಿಹಾರಿ ವಾಜಪೇಯಿ ಅವರ ಹೆಸರನ್ನು, ಹೈದರಾಬಾದ್ ವಿಮಾನ ನಿಲ್ದಾಣಕ್ಕಿದ್ದ ಎನ್.ಟಿ.ರಾಮರಾವ್ ಅವರ ಹೆಸರನ್ನು ಕಾಂಗ್ರೆಸ್ ಪಕ್ಷ ಬದಲಿಸಿದ್ದು ಪ್ರಮಾದ. ನಿರಂತರವಾಗಿ ಮುಂದುವರಿಯುವ ಯೋಜನೆ, ಪ್ರಶಸ್ತಿಗಳಿಗೆ ನಿರ್ದಿಷ್ಟ ರಾಜಕೀಯ ಪಕ್ಷದ ನಾಯಕರ ಹೆಸರನ್ನು ಇಡುವುದು ಸರಿಯಲ್ಲ. ಇಟ್ಟರೆ ಅವು ಅನ್ಯ ಪಕ್ಷಗಳ ಆಡಳಿತದಲ್ಲಿ ರೋಗಗ್ರಸ್ತವಾಗುತ್ತವೆ. ಇಂದಿರಾ ಕ್ಯಾಂಟೀನ್ ಆ ಗತಿ ಕಂಡಿದೆ. ಗುಜರಾತಿನ ವಲ್ಲಭಭಾಯಿ ಪಟೇಲ್ ಕ್ರೀಡಾಂಗಣಕ್ಕೆ ಈಚೆಗೆ ನರೇಂದ್ರ ಮೋದಿಯವರ ಹೆಸರು ಇಟ್ಟದ್ದು ಏಕೆ ಎಂದು ಸೂರ್ಯಪ್ರಕಾಶ್ ಅವರು ಉತ್ತರಿಸುವರೇ?


ಎನ್.ಎಮ್.ಕುಲಕರ್ಣಿ, ಹೆಗ್ಗೋಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪರೀಕ್ಷೆಯೂ ಹೆಚ್ಚು ಪ್ರಕರಣವೂ ಹೆಚ್ಚು

ಕೇರಳದಲ್ಲಿ ಪ್ರತಿದಿನ 20 ಸಾವಿರಕ್ಕೂ ಹೆಚ್ಚು ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿವೆ. ಆದರೆ ರಾಜ್ಯದ ಜನಸಂಖ್ಯೆಯ ಅನುಪಾತದಲ್ಲಿ ನೋಡಿದರೆ ಕೇರಳವು ಪ್ರತಿದಿನ ಹೆಚ್ಚು ಕೋವಿಡ್ ಪರೀಕ್ಷೆಗಳನ್ನು ನಡೆಸುತ್ತಿದೆ. ಹೀಗಾಗಿ ಕೋವಿಡ್ ದೃಢಪಡುವ ಪ್ರಮಾಣವೂ ಅತ್ಯಧಿಕವಾಗಿದೆ. ಕೋವಿಡ್ ಪರೀಕ್ಷೆ, ಪಾಸಿಟಿವಿಟಿ, ಮರಣ ದರ ಇತ್ಯಾದಿಯತ್ತ ಒಂದು ನೋಟ ಇಲ್ಲಿದೆ:

ಪರೀಕ್ಷೆಗಳು ▸ ಕೇರಳ | ಮಹಾರಾಷ್ಟ್ರ | ಕರ್ನಾಟಕ | ತಮಿಳುನಾಡು | ಉತ್ತರ ಪ್ರದೇಶ — ದೃಢಪಟ್ಟ ಪ್ರಕರಣಗಳು ▸




ಲಕ್ಷಕ್ಕೆ 90 ಸಾವಿರ ಪರೀಕ್ಷೆ

- ಒಂದು ಲಕ್ಷ
- ಪ್ರತಿ ಲಕ್ಷ ಜನತೆಯಲ್ಲಿ ಪರೀಕ್ಷೆಗೆ ಒಳಪಟ್ಟವರು
- ಪ್ರತಿ ಲಕ್ಷದಲ್ಲಿ ಕೋವಿಡ್ ದೃಢಪಟ್ಟವರು

● ಕೇರಳದಲ್ಲಿ ಪ್ರತಿ ಒಂದು ಲಕ್ಷ ಜನರಲ್ಲಿ 89,040 ಜನರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದೆ. ಪ್ರತಿ ಒಂದು ಲಕ್ಷದಲ್ಲಿ 11.409 ಜನರಿಗೆ ಕೋವಿಡ್ ದೃಢಪಟ್ಟಿದೆ. ಪ್ರತಿ ಲಕ್ಷ ಜನರಲ್ಲಿ ಕೇವಲ 43,928 ಜನರನ್ನು ಪರೀಕ್ಷೆಗೆ ಒಳಪಡಿಸುತ್ತಿರುವ ಮಹಾರಾಷ್ಟ್ರದಲ್ಲಿ, ಪ್ರತಿ ಒಂದು ಲಕ್ಷದಲ್ಲಿ 5,285 ಜನರಲ್ಲಿ ಮಾತ್ರ ಕೋವಿಡ್ ದೃಢಪಡುತ್ತಿದೆ. ಉತ್ತರ ಪ್ರದೇಶದಲ್ಲಿ ಈ ಎರಡೂ ಸಂಖ್ಯೆ ಅತ್ಯಂತ ಕಡಿಮೆ ಇದೆ. ಜನಸಂಖ್ಯೆಗೆ ಹೋಲಿಸಿದರೆ ಉಳಿದ ರಾಜ್ಯಗಳಲ್ಲಿ ಕಡಿಮೆ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಹೀಗಾಗಿ ಹೆಚ್ಚಿನ ಮಂದಿ ಕೋವಿಡ್ ಪರೀಕ್ಷೆಗೇ ಒಳಪಟ್ಟಿಲ್ಲ

ಪರೀಕ್ಷೆಗಳು ಮತ್ತು ದೃಢಪಟ್ಟ ಪ್ರಕರಣಗಳು
(7 ದಿನಗಳ ಸರಾಸರಿ)



● ಕಡಿಮೆ ಜನಸಂಖ್ಯೆ ಇರುವ ಕೇರಳದಲ್ಲಿ ಪ್ರತಿದಿನ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ನಡೆಸುತ್ತಿರುವಷ್ಟೇ ತಪಾಸಣೆಗಳನ್ನು ನಡೆಸಲಾಗುತ್ತಿದೆ. ಬೇರೆ ರಾಜ್ಯಗಳಲ್ಲಿ ಕಡಿಮೆ ಸಂಖ್ಯೆ ಪ್ರಕರಣಗಳಷ್ಟೇ ದೃಢಪಡುತ್ತಿವೆ. ಆದರೆ ಕೇರಳದಲ್ಲಿ ಹೆಚ್ಚಿನ ಪ್ರಕರಣಗಳು ಪತ್ತೆಯಾಗುತ್ತಿವೆ. ಆದರೆ ಯಾವ ರಾಜ್ಯವೂ ಪ್ರತಿದಿನ ನಡೆಸುತ್ತಿರುವ ಪರೀಕ್ಷೆಗಳಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆಗಳು ಮತ್ತು ಪ್ರತಿಕಾಯ ಪರೀಕ್ಷೆಗಳ ಪ್ರಮಾಣ ಎಷ್ಟು ಎಂಬ ಮಾಹಿತಿಯನ್ನು ಬಹಿರಂಗಪಡಿಸಿಲ್ಲ. ಎರಡೂ ಪರೀಕ್ಷೆಗಳ ನಿಖರತೆಯಲ್ಲಿ ವ್ಯತ್ಯಾಸವಿರುವ ಕಾರಣ ರಾಜ್ಯಗಳು ನಡೆಸುತ್ತಿರುವ ಪರೀಕ್ಷೆಗಳು ಮತ್ತು ಕೋವಿಡ್ ದೃಢತೆ ಪ್ರಮಾಣದ ನಡುವಣ ತುಲನೆ ವೈಜ್ಞಾನಿಕವಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ

ಲಸಿಕೆ: ಈವರೆಗಿನ ಪ್ರಗತಿ


ಕೇರಳ | ಮಹಾರಾಷ್ಟ್ರ | ಕರ್ನಾಟಕ | ತಮಿಳುನಾಡು | ಉತ್ತರ ಪ್ರದೇಶ | ದೇಶ

● ದೇಶದಾದ್ಯಂತ ಕೋವಿಡ್ ಲಸಿಕೆ ನೀಡಿಕೆಗೆ ಗಮನಾರ್ಹ ಒತ್ತು ಸಿಗಬೇಕಿದೆ ಎಂದು ಅಂಕಿ–ಅಂಶಗಳು ಹೇಳುತ್ತವೆ. ಒಟ್ಟಾರೆಯಾಗಿ ದೇಶದಾದ್ಯಂತ ಎರಡೂ ಡೋಸ್ ಲಸಿಕೆ ಪಡೆದವರ ಪ್ರಮಾಣ ಶೇ 10.9ರಷ್ಟು ಮಾತ್ರ


● ಲಸಿಕೆ ನೀಡಿಕೆಯಲ್ಲಿ ಕೇರಳವು ಎಲ್ಲ ರಾಜ್ಯಗಳಿಗಿಂತ ಮುಂದಿದೆ. ಕೇರಳ ಹೊರತುಪಡಿಸಿದರೆ, ಕರ್ನಾಟಕದಲ್ಲಿ ಗಮನಾರ್ಹ ಪ್ರಗತಿ ಇದೆ. ಕನಿಷ್ಠ ಒಂದು ಡೋಸ್ ಪಡೆದವರು ಹಾಗೂ ಎರಡೂ ಡೋಸ್ ಪಡೆದವರ ಪ್ರಮಾಣದಲ್ಲಿ ರಾಜ್ಯ ಎರಡನೇ ಸ್ಥಾನದಲ್ಲಿದೆ

● ದೊಡ್ಡ ರಾಜ್ಯವಾದ ಉತ್ತರ ಪ್ರದೇಶದಲ್ಲಿ ಲಸಿಕೆಯ ಎರಡೂ ಡೋಸ್ ಪಡೆದವರ ಪ್ರಮಾಣ ಶೇ 5ರಷ್ಟನ್ನೂ ದಾಟಿಲ್ಲ

ಕನಿಷ್ಠ ಒಂದು ಡೋಸ್
(ಶೇಕಡಾವಾರು ಪ್ರಮಾಣ)



ಎರಡೂ ಡೋಸ್ ಪಡೆದವರು
(ಶೇಕಡಾವಾರು ಪ್ರಮಾಣ)





ಆಧಾರ: ಪಿಐಬಿ, ಕೋವಿಡ್19ಇಂಡಿಯಾ.ಒಆರ್‌ಪಿ
ವರದಿ: ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ.

ಪಾಸಿಟಿವಿಟಿ, ಮರಣ ಪ್ರಮಾಣ


ಕೇರಳ | ಮಹಾರಾಷ್ಟ್ರ | ಕರ್ನಾಟಕ | ತಮಿಳುನಾಡು | ಉತ್ತರ ಪ್ರದೇಶ | ದೇಶ

ಪಾಸಿಟಿವಿಟಿ ಪ್ರಮಾಣ (%)

● ದೇಶದಲ್ಲಿ ಕೋವಿಡ್ ದೃಢ ಪ್ರಮಾಣವು (ಪಾಸಿಟಿವಿಟಿ ದರ) ಕೇರಳದಲ್ಲಿ ಅತಿ ಹೆಚ್ಚು. ಇಲ್ಲಿ ಶೇ 18.5ರಷ್ಟು ಪಾಸಿಟಿವಿಟಿ ದರ ಕಂಡುಬಂದಿದ್ದರೆ, ಉತ್ತರ ಪ್ರದೇಶದಲ್ಲಿ ಇದರ ಪ್ರಮಾಣ ಶೂನ್ಯ

● ದೇಶದ ಅತಿಹೆಚ್ಚು ಪ್ರಕರಣಗಳು ವರದಿಯಾಗಿರುವ ಮಹಾರಾಷ್ಟ್ರದಲ್ಲಿ ಇದರ ಪ್ರಮಾಣ ಶೇ 2.4ರಷ್ಟಿದೆ. ಕರ್ನಾಟಕಕ್ಕಿಂತ ತಮಿಳುನಾಡಿನಲ್ಲಿ ಪಾಸಿಟಿವಿಟಿ ದರ ಅಧಿಕವಾಗಿದೆ

● ಒಟ್ಟಾರೆ ದೇಶದ ಪಾಸಿಟಿವಿಟಿ ಪ್ರಮಾಣ ಶೇ 2.3




ಕೋವಿಡ್ ಸಾವಿನ ಪ್ರಮಾಣ (%)

● ಕೇರಳದಲ್ಲಿ ಪ್ರಸ್ತುತ ಅತಿಹೆಚ್ಚು ಪ್ರಕರಣಗಳು ವರದಿಯಾಗುತ್ತಿದ್ದರೂ, ಅಲ್ಲಿ ಮರಣ ಪ್ರಮಾಣ ಅಷ್ಟಿಲ್ಲ. ಕೋವಿಡ್‌ನಿಂದಾಗಿ ಅಲ್ಲಿ ಸಾವಿನ ಪ್ರಮಾಣ ಶೇ 0.5ರಷ್ಟು

● ಮಹಾರಾಷ್ಟ್ರದಲ್ಲಿ ದೇಶದ ಅತಿಹೆಚ್ಚು ಕೋವಿಡ್ ಸಾವುಗಳು ವರದಿಯಾಗಿದ್ದು, ಶೇ 2.1ರಷ್ಟು ಮಂದಿ ಮೃತಪಟ್ಟಿದ್ದಾರೆ.

● ಇನ್ನುಳಿದಂತೆ ತಮಿಳುನಾಡು, ಕರ್ನಾಟಕ, ಉತ್ತರ ಪ್ರದೇಶದಲ್ಲಿ ಸಾವಿನ ಪ್ರಮಾಣ ಶೇ 1.3ರಷ್ಟಿದೆ



ಕೋವಿಡ್ ಗುಣಮುಖರ ಪ್ರಮಾಣ (%)



● ಎರಡನೇ ಅಲೆಯ ಬಳಿಕ ಪರಿಸ್ಥಿತಿ ಸುಧಾರಿಸಿದ್ದು, ಕೋವಿಡ್‌ನಿಂದ ಗುಣಮುಖರಾದವರ ರಾಷ್ಟ್ರೀಯ ಸರಾಸರಿ ಶೇ 97.5ರಷ್ಟಿದೆ

● ದೇಶದಲ್ಲಿ ಈಗ ಹೆಚ್ಚು ಸೋಂಕಿತರು ಕಂಡುಬರುತ್ತಿರುವ ಕೇರಳದಲ್ಲಿ, ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಗುಣಮುಖರ ಪ್ರಮಾಣ ಕಡಿಮೆಯಿದೆ

ಪಂಜಾಬ್ ಕಾಂಗ್ರೆಸ್ ಭಿನ್ನಮತಕ್ಕೆ ಮದ್ದಿಲ್ಲ

ಪ್ರಜಾವಾಣಿ ವಾರ್ತೆ



ನವಜೋತ್ ಸಿಂಗ್ ಸಿಧು ಹಾಗೂ ಅಮರಿಂದರ್ ಸಿಂಗ್

ನವದೆಹಲಿ: ಪಂಜಾಬ್ ಕಾಂಗ್ರೆಸ್ ಘಟಕದ ಆಂತರಿಕ ಭಿನ್ನಮತವು, ತನ್ನ ಕೈಗೆ ತಾನೇ ಹಗ್ಗ ಕಟ್ಟಿಕೊಂಡಂತಹ ಸ್ಥಿತಿಗೆ ಆ ಪಕ್ಷವನ್ನು ತಂದು ನಿಲ್ಲಿಸಿದೆ. ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರು ಮುಂಬರುವ 2022ರ ವಿಧಾನಸಭಾ ಚುನಾವಣೆಯ ಕ್ಯಾಪ್ಟನ್ ಎಂದು ಈ ಹಿಂದೆ ಪಕ್ಷ ಘೋಷಿಸಿತ್ತು. ಹೀಗೆ ಹೇಳಿ ಕೆಲವು ದಿನ ಕಳೆಯುವಷ್ಟರಲ್ಲಿ, ಗಾಂಧಿ ಕುಟುಂಬದ (ಸೋನಿಯಾ, ರಾಹುಲ್, ಪ್ರಿಯಾಂಕಾ) ನೇತೃತ್ವದಲ್ಲಿ ಚುನಾವಣೆ ಎದುರಿಸುವುದಾಗಿ ಭಾನುವಾರ ಪಕ್ಷ ಹೇಳಿದೆ.

ಎರಡೂ ಕಡೆಯಿಂದ ತೀವ್ರ ಒತ್ತಡಕ್ಕೆ ಸಿಲುಕಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರೀಶ್ ರಾವತ್ ಅವರು ತಮ್ಮನ್ನು ಪಂಜಾಬ್ ಉಸ್ತುವಾರಿ ಸ್ಥಾನದಿಂದ ಬಿಡುಗಡೆ ಮಾಡಿ ಎಂದು ಪಕ್ಷದ ಹೈಕಮಾಂಡ್‌ಗೆ ಮನವಿ ಮಾಡುವ ಮಟ್ಟಕ್ಕೆ ಭಿನ್ನಮತ ದೊಡ್ಡದಾಗಿದೆ. ಉತ್ತರಾಖಂಡದಲ್ಲಿ ಚುನಾವಣಾ ಸಿದ್ಧತೆಗಳ ಮೇಲೆ ಗಮನ ಕೇಂದ್ರೀಕರಿಸುವ ಅಗತ್ಯವಿದೆ ಎಂದು ಅವರು ಮನವರಿಕೆ ಮಾಡಲು ಯತ್ನಿಸಿದ್ದಾರೆ.

‘ಸೋನಿಯಾ, ರಾಹುಲ್, ಪ್ರಿಯಾಂಕಾ ಅವರ ನಾಯಕತ್ವದಲ್ಲಿ ನಾವು ಚುನಾವಣೆ ಎದುರಿಸಲಿದ್ದೇವೆ. ಅವರೇ ನಮ್ಮ ಅಸ್ಮಿತೆ. ಅವರೇ ನಮ್ಮ ನಾಯಕರು’ ಎಂದು ರಾವತ್ ಹೇಳಿದ್ದಾರೆ.

‘ನಾವು ಕ್ಯಾಪ್ಟನ್ ಅಮರಿಂದರ್ ಸಿಂಗ್ ನೇತೃತ್ವದಲ್ಲಿ 2022ರ ಪಂಜಾಬ್ ಚುನಾವಣೆಯಲ್ಲಿ ಸ್ಪರ್ಧಿಸುತ್ತೇವೆ’ ಎಂದು ರಾವತ್ ಅವರು ಕೇವಲ ಐದು ದಿನಗಳ ಹಿಂದೆ, ಅಂದರೆ ಆಗಸ್ಟ್ 25ರಂದು ಹೇಳಿಕೆ ನೀಡಿದ್ದರು. ಆದರೆ ಅಮರಿಂದರ್ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಹೊರಕ್ಕೆ ಕಳಿಸುವ ಯೋಚನೆಯಲ್ಲಿರುವ ಸಿಧು ಅವರ ಬಣಕ್ಕೆ ರಾವತ್ ಅವರ ಈ ಮಾತು ಸರಿಕಾಣಲಿಲ್ಲ.

> **ಅಮರಿಂದರ್ ನಾಯಕತ್ವದಲ್ಲಿ ಚುನಾವಣೆ ನಡೆಯಲಿದೆ ಎಂದು ಯಾವಾಗ ನಿರ್ಧರಿಸಲಾಯಿತು ಎಂಬುದನ್ನು ರಾವತ್ ಸ್ಪಷ್ಟಪಡಿಸಬೇಕು**
> **ಪರ್ಗತ್ ಸಿಂಗ್,** ಸಿಧು ಬಣದ ಮುಖಂಡ

> **ಪಕ್ಷವು ಮುಖ್ಯಮಂತ್ರಿ ಅಮರಿಂದರ್, ಪಿಸಿಸಿ ಮುಖ್ಯಸ್ಥ ಸಿಧು ಮತ್ತು ಪರ್ಗತ್ ಸಿಂಗ್ ಮೇಲೆ ಭಾರಿ ವಿಶ್ವಾಸ ಇರಿಸಿದೆ**
> **ಹರೀಶ್ ರಾವತ್,** ಪಂಜಾಬ್ ಉಸ್ತುವಾರಿ ನಾಯಕ

ಈ ಮಾತುಗಳು ಭಿನ್ನಮತೀಯರಿಗೆ ಕಿರಿಕಿರಿಯುಂಟು ಮಾಡಿದವು. ‘ನೀವು ನನಗೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಬಿಡದಿದ್ದರೆ, ನಾನು ಸಂಪೂರ್ಣ ಹಾಳುಗೆಡವುತ್ತೇನೆ’ ಎಂದು ಸಿಧು ಕಿಡಿಕಾರಿದ್ದರು.

ತಮ್ಮ ಹೇಳಿಕೆಗೆ ರಾವತ್ ತಿದ್ದುಪಡಿ ಮಾಡಿಕೊಂಡರು. ‘ಸೋನಿಯಾ, ರಾಹುಲ್ ಸೇರಿದಂತೆ ರಾಷ್ಟ್ರಮಟ್ಟದಲ್ಲಿ ಪಕ್ಷ ಅನೇಕ ಪ್ರಮುಖರನ್ನು ಹೊಂದಿದೆ. ಹಾಗೆಯೇ ಸ್ಥಳೀಯ ಮಟ್ಟದಲ್ಲಿ ಅಮರಿಂದರ್ ಸಿಂಗ್, ನವಜೋತ್ ಸಿಂಗ್ ಸಿಧು ಮತ್ತು ಪರ್ಗತ್ ಸಿಂಗ್ ಅವರಂತಹ ಹಲವಾರು ಮುಖಗಳಿವೆ. ಯಾವಾಗ ಮತ್ತು ಏನು ಹೇಳಬೇಕು ಎಂಬುದು ನನಗೆ ತಿಳಿದಿದೆ’ ಎಂದು ಹೇಳಿದರು.

ಗೊಂದಲದ ಗೂಡು

ರಾವತ್ ಅವರ ಈ ಹಿಂದಿನ ಮತ್ತು ಈಗಿನ ಹೇಳಿಕೆಗಳನ್ನು ಗಮನಿಸಿದರೆ ಪಂಜಾಬ್ ಕಾಂಗ್ರೆಸ್‌ನಲ್ಲಿ ತೀವ್ರ ಭಿನ್ನಮತವಿದೆ ಎಂಬುದು ತಿಳಿಯುತ್ತದೆ. ಮೂವರು ಸದಸ್ಯರ ಉನ್ನತ ಮಟ್ಟದ ಸಮಿತಿಯನ್ನು ಪಕ್ಷ ರಚಿಸಿದ್ದರೂ, ಗೊಂದಲ ಪರಿಹರಿಸಲು ಸಾಧ್ಯವಾಗಿಲ್ಲ. ಮುಖ್ಯಮಂತ್ರಿ ಅಮರಿಂದರ್ ಅವರ ಆಕ್ಷೇಪದ ನಡುವೆಯೂ ಪಿಸಿಸಿ ಅಧ್ಯಕ್ಷರನ್ನಾಗಿ ಸಿಧು ನೇಮಕಕ್ಕೆ ಸಮಿತಿ ಶಿಫಾರಸು ಮಾಡಿತ್ತು.

ಕ್ಯಾಪ್ಟನ್ ನೇತೃತ್ವದ ಸರ್ಕಾರದ ವಿರುದ್ಧ ಪ್ರಬಲವಾದ ಆಡಳಿತ ವಿರೋಧಿ ಅಲೆ ಇದೆ ಎಂಬುದಾಗಿ ಆಂತರಿಕ ವರದಿಗಳು ಹೇಳುತ್ತವೆ. ಸದ್ಯಕ್ಕೆ ಅಮರಿಂದರ್ ನಾಯಕತ್ವ ಒಪ್ಪಲು ಸಿಧು ಮುಕ್ತ ಮನಸ್ಸು ಹೊಂದಿದ್ದಾರೆ. ಆದರೆ, ನಾಯಕತ್ವ ಕುರಿತಂತೆ ದೀರ್ಘಾವಧಿಯ ಕಾರ್ಯತಂತ್ರ ರೂಪಿಸಲು ಪಕ್ಷಕ್ಕೆ ಸಾಧ್ಯವಾಗುತ್ತಿಲ್ಲ.

2017ರ ಚುನಾವಣೆಯ ಆರಂಭದಲ್ಲಿ ಅಮರಿಂದರ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಕಾಂಗ್ರೆಸ್ ಘೋಷಿಸಿರಲಿಲ್ಲವಾದರೂ, ಪ್ರಚಾರದ ಕೊನೆಯ ಹಂತದಲ್ಲಿ ಪ್ರಕಟಣೆ ಹೊರಡಿಸಿತ್ತು. ಆದರೆ ಈ ಬಾರಿ ಅಮರಿಂದರ್ ಮತ್ತು ಸಿಧು ಅವರ ಮಧ್ಯೆ ಒಬ್ಬರನ್ನು ಹೆಸರಿಸಿದರೆ, ಪಕ್ಷ ಇಬ್ಭಾಗವಾಗುವ ಆತಂಕ ಇದೆ. ಪಕ್ಷದ ಈ ಭಿನ್ನಮತವು ಪ್ರತಿಪಕ್ಷಗಳ ಹಾದಿಯನ್ನು ಸುಗಮಗೊಳಿಸುವ ಭೀತಿಯೂ ಇದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ



ಬದುಕಿನ ಸುಂದರತೆಗೆ ಮೂರು ರಸಗಳು

ಸುಂದರದ ರಸ ನೂರು; ಸಾರವದರೊಳು ಮೂರು |
ಹೊಂದಿಪ್ಪುವವು ಮೋಹ ಕರುಣೆ ಶಾಂತಿಗಳ ||
ಒಂದರಿಂದೊಂದು ಬೆಳೆಯಾದಂದು ಜೀವನವು |
ಚೆಂದಗೊಂಡುಜ್ಜುಗವೊ – ಮಂಕುತಿಮ್ಮ || 455 ||

ಪದ-ಅರ್ಥ: ಸಾರವದರೊಳು = ಸಾರವು(ಸತ್ವ) + ಅದರೊಳು, ಬೆಳೆಯಾದಂದು = ಬೆಳೆದಾಗ, ಚೆಂದಗೊಂಡುಜ್ಜುಗವೊ = ಚೆಂದಗೊಂಡ + ಉಜ್ಜುಗ(ಕಾರ್ಯ)ವೆ

ವಾಚ್ಯಾರ್ಥ: ಸೌಂದರ್ಯಕ್ಕೆ ನೂರಾರು ರಸಗಳು. ಅವುಗಳಲ್ಲಿ ಸಾರವತ್ತಾದವುಗಳು ಮೂರು, ಅವು ಮೋಹ, ಕರುಣೆ ಮತ್ತು ಶಾಂತಿ. ಅವು ಒಂದಕ್ಕೊಂದು ಪೂರಕವಾಗಿ ಬೆಳೆದಾಗ ಜೀವನವು ಚೆಂದವಾದ ಕಾರ್ಯವಾಗುತ್ತದೆ.

ವಿವರಣೆ: ರಸವೆಂದರೆ ಸವಿ, ರುಚಿ. ಯಾವ ಗುಣದಿಂದಾಗಿ ಒಂದು ವಸ್ತು ನಮಗೆ ಇಷ್ಟವಾಗುತ್ತದೋ, ಯಾವುದನ್ನು ಪಡೆಯಬೇಕೆಂಬ ಉತ್ಕಟತೆ ಉಂಟಾಗುತ್ತದೆಯೋ ಅದು ಅದರ ರಸ. ಮಾವಿನ ಹಣ್ಣು ಬಹಳ ಇಷ್ಟವೆಂದರೆ, ಅದು ಹಣ್ಣಿನ ರಸದ ದ್ರವತ್ವವಲ್ಲ, ಅದರ ಆಕಾರವಲ್ಲ, ಬಣ್ಣವಲ್ಲ. ಅವೆಲ್ಲ ತಕ್ಕಮಟ್ಟಿಗೆ ಕಾರಣವಾಗಿದ್ದರೂ, ಮೂಲವಾಗಿ ಹಣ್ಣಿನ ತಿರುಳಿನಲ್ಲಿರುವ, ನಾಲಗೆಗೆ ಸುಖ ಕೊಡುವ ರುಚಿಯೇ ರಸ. ತಿಂದಾಗ ಉಂಟಾಗುವ ಸುಖದ ಹುಟ್ಟು ಎಲ್ಲಿ? ಮಾವಿನಹಣ್ಣಿನಲ್ಲೋ, ತಿನ್ನುವ ಬಾಯಿಯಲ್ಲೋ? ಇವೆರಡರಲ್ಲೂ ಅಲ್ಲ, ಆ ಎರಡರ ಸಂಯೋಗದಲ್ಲಿ ಹುಟ್ಟುವುದು ಸುಖ. ಮಾವಿನಹಣ್ಣಿನ ತಿರುಳಿಗೂ, ತಿನ್ನುವವನ ಹಲ್ಲು, ನಾಲಗೆಗೂ ಹೊಂದಿಕೆಯಾದಾಗ ಸುಖ. ಅದೇ ರಸಾನುಭವ. ಅದಕ್ಕೇ ಕನಕದಾಸರು ಹೇಳಿದರು, ‘ಸಿಹಿಯು ಸಕ್ಕರೆಯೊಳಗೋ, ಸಕ್ಕರೆಯು ಸಿಹಿಯೊಳಗೋ| ಸಿಹಿಯು ಸಕ್ಕರೆ ಎರಡೂ ಜಿಹ್ವೆಯ ಒಳಗೋ||’

ಬದುಕಿನಲ್ಲಿ ನಮಗೆ ರಸಾನುಭವ ದಿನನಿತ್ಯ ಆಗುತ್ತಿರುತ್ತದೆ. ಅದು ಹೊರಗಿನಿಂದಲೂ, ಒಳಗಿನಿಂದಲೂ ಆಗುವಂಥದ್ದು. ಹೊರಗಡೆ ಪ್ರವಾಸಕ್ಕೆ ಹೋದಾಗ ರಮಣೀಯ ದೃಶ್ಯಗಳನ್ನು ನೋಡಿದಾಗ, ಒಳ್ಳೆಯ ಸಂಗೀತವನ್ನು ಕೇಳಿದಾಗ, ನಮಗಿಷ್ಟವಾದ ಊಟವನ್ನು ಮಾಡಿದಾಗ, ನಮ್ಮ ಗೌರವಕ್ಕೆ ಪಾತ್ರರಾದವರ ಮಾತುಗಳನ್ನು ಕೇಳಿದಾಗ, ಮಕ್ಕಳ, ಆತ್ಮೀಯರ ಏಳಿಗೆಯನ್ನು ಕಂಡಾಗ ರಸಾನುಭವವಾಗುತ್ತದೆ. ಹಾಗೆಯೇ ಅಂತರ್ಯದಲ್ಲಿ ಅದರ ಅನುಭೂತಿ ಆಗುವುದುಂಟು. ಬಾಲ್ಯದ ಸುಂದರ ಪ್ರಸಂಗಗಳನ್ನು ನೆನೆದಾಗ, ಪೂಜೆ ಮಾಡುವಾಗ, ಧ್ಯಾನ ಮಾಡುವಾಗ, ಯಾವುದೋ ಉನ್ನತ ವಿಚಾರದ ಚಿಂತನೆ ಮಾಡುವಾಗ ರಸದ ಅನುಭವವಾಗುತ್ತದೆ. ಭರತ ತನ್ನ ನಾಟ್ಯಶಾಸ್ತ್ರದಲ್ಲಿ ರಸವಾಗುವಂತಹ ಎಂಟು ಸ್ಥಾಯೀಭಾವಗಳನ್ನು ಗುರುತಿಸುತ್ತಾನೆ. ಅವು ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ ಮತ್ತು ಅದ್ಭುತ. ಮುಂದೆ ಅದನ್ನು ಉದ್ಭಟ ಮತ್ತು ರುದ್ರಟರು ಬೆಳೆಸಿ ಶಾಂತಿ ರಸವನ್ನು ಸೇರಿಸಿದರು. ಸಾಮಾನ್ಯವಾಗಿ ಅವುಗಳನ್ನು ನವರಸಗಳೆಂದು ಕರೆದರು. ಈ ನವರಸಗಳು ನಮ್ಮ ಬದುಕನ್ನು ನೂರಾರು ರೀತಿಯಲ್ಲಿ ತಟ್ಟುತ್ತವೆ. ಕಗ್ಗ ಹೇಳುತ್ತದೆ, ಈ ಎಲ್ಲ ರಸಗಳ ಸಾರವಿರುವುದು ಮೂರರಲ್ಲಿ. ಅವು ಮೋಹ, ಕರುಣೆ ಮತ್ತು ಶಾಂತಿ. ಅವು ಒಂದರಿಂದ ಮತ್ತೊಂದು ಬೆಳೆಯುವಂಥವುಗಳು. ಮೋಹ ಮಿತಿಯಲ್ಲಿದ್ದಾಗ, ಉಚಿತವಾದ ಸ್ಥಳದಲ್ಲಿ ಕರುಣೆ ತೋರಿದಾಗ, ಮನದಲ್ಲಿ ಶಾಂತಿಯ ಅವತರಣ-ವಾಗುತ್ತದೆ. ಆಗ ಬದುಕೆಂಬುದು ಸಂತೋಷದ, ಸಂಭ್ರಮದ ನೆಲೆಯಾಗುತ್ತದೆ.

ದಿನ ಭವಿಷ್ಯ

ಮಂಗಳವಾರ ಆಗಸ್ಟ್ 31, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ಶ್ರಾವಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ನವಮೀ ಗಂ. 48-33 (ರಾ. 1-40) ಮಂಗಳವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 6-10 (ಬೆ. 8-43) ಹರ್ಷ ನಾಮ ಯೋಗ ಗಂ. 6-45 ತೈತಲ ಕರಣ ಗಂ. 16-4 ವಿಷ ಗಂ. 21-38 ಅಮೃತ ಶೇಷ ಗಂ. 1-46 ಅಮೃತ ಗಂ. 48-9 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-12 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 8 9

ಮೇಷ: ಕನ್ಯೆಯರಿಗೆ ವಿಶೇಷ ಉಡುಗೊರೆ ಸ್ವೀಕರಿಸುವ ಅವಕಾಶ. ಕಾರ್ಯನೈಪುಣ್ಯತೆಯಿಂದಾಗಿ ಸ್ನೇಹಿತರ ನಡುವೆ ಗೌರವಕ್ಕೆ ಪಾತ್ರರಾಗಲಿದ್ದೀರಿ. ರೈತರಿಗೆ ಸಂತೋಷದ ದಿನ. ಹೊಸ ಆಯಾಮಕ್ಕೆ ಸಿದ್ಧತೆ.

ವೃಷಭ: ಕೌಟುಂಬಿಕ ಕಲಹಗಳ ಇತ್ಯರ್ಥ. ಬಹುನಿರೀಕ್ಷಿತ ವ್ಯವಹಾರವೊಂದರಲ್ಲಿ ಯಶಸ್ಸಿನ ಸುದ್ದಿ ಕೇಳಿಬರಲಿದೆ. ಸಂಗಾತಿಯ ನೆಮ್ಮದಿಯ ಮಾತುಗಳಿಂದ ಸಂತೋಷಗೊಳ್ಳುವಿರಿ. ಮಕ್ಕಳ ಆರೋಗ್ಯದೆಡೆಗೆ ಗಮನವಿರಲಿ.

ಮಿಥುನ: ರಾಜಕಾರಣಿಗಳಿಗೆ ಒತ್ತಡದ ದಿನ. ಕಾರ್ಯಬಾಹುಳ್ಯದಿಂದ ಸ್ವಲ್ಪಮಟ್ಟಿನ ವಿರಾಮ ದೊರಕಿ ಮಾನಸಿಕ ನೆಮ್ಮದಿ. ಸಾರ್ವಜನಿಕ ರಂಗದಲ್ಲಿ ಇರುವವರಿಗೆ ಪುರಸ್ಕಾರ.

ಕರ್ಕಾಟಕ: ನ್ಯಾಯ ತೀರ್ಮಾನ ಮಾಡುವಲ್ಲಿ ಹೆಚ್ಚಿನ ಮುತುವರ್ಜಿ ವಹಿಸುವಿರಿ. ತೈಲ ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ಹಿನ್ನಡೆ. ಸರ್ಕಾರಿ ನೌಕರರಿಗೆ ಸಹೋದ್ಯೋಗಿಗಳಿಂದ ಸಕಾಲಿಕ ನೆರವಿನಿಂದಾಗಿ ಸಂತೋಷದ ವಾತಾವರಣ.

ಸಿಂಹ: ಕಾರ್ಖಾನೆ, ಕೃಷಿ ಕ್ಷೇತ್ರದ ಕೆಲಸಗಾರರಿಗೆ ಕಾರ್ಯಸಿದ್ಧಿಯಿಂದಾಗಿ ಸಮಾಧಾನಕರ ದಿನ. ವಿಶೇಷ ಸಮಾರಂಭವೊಂದರಲ್ಲಿ ಭಾಗವಹಿಸುವ ಸಾಧ್ಯತೆ. ವಾತ ಸಂಬಂಧಿ ರೋಗ ಬಾಧೆಯಿಂದ ಸುಧಾರಿಸಿಕೊಳ್ಳಲಿದ್ದೀರಿ.

ಕನ್ಯಾ: ವಿವಾಹಾಪೇಕ್ಷಿತರಿಗೆ ವಿವಾಹ ಕೂಡಿಬರುವ ಸಾಧ್ಯತೆ. ಸಾಲದಿಂದ ಮುಕ್ತಿ ಹೊಂದುವುದರೊಂದಿಗೆ ನೆಮ್ಮದಿಯು ಮೂಡಲಿದೆ. ಕನ್ಯೆಯರಿಗೆ ಮಾನಸಿಕ ಗೊಂದಲದ ದಿನವಾಗಲಿದೆ.

ತುಲಾ: ಮನಸ್ಸಿನಲ್ಲಿ ಗೊಂದಲಕರ ವಾತಾವರಣ. ಸಮಾಧಾನಕರ ನಡವಳಿಕೆಯಿಂದಾಗಿ ಸಂಸಾರದಲ್ಲಿ ಸಂತಸ ಮೂಡಿಬರಲಿದೆ. ಮಕ್ಕಳಿಂದ ಸಂತೋಷ ಸುದ್ದಿಯನ್ನು ಕೇಳಲಿದ್ದೀರಿ. ದೃಢ ನಿರ್ಧಾರವಿರಲಿ.

ವೃಶ್ಚಿಕ: ಸರ್ಕಾರಿ ನೌಕರಿಯಲ್ಲಿರುವವರಿಗೆ ಕಾರ್ಯ ಒತ್ತಡ ಕಡಿಮೆಯಾಗಿ ಮನಸ್ಸಿಗೆ ನಿರಾಳತೆ ಮೂಡಿಬರಲಿದೆ. ಮಿತ್ರವೃಂದದವರಿಂದ ಶುಭ ವಾರ್ತೆ ಕೇಳಿಬರಲಿದೆ. ಮಿತ ವ್ಯಯ ಮಾಡುವಿರಿ.

ಧನು: ಸಾಮಾಜಿಕ ಗೌರವ ಪ್ರಾಪ್ತಿ. ವ್ಯಾಪಾರಸ್ಥರಿಗೆ ಉತ್ತಮ ಲಾಭ. ರಾಜಕೀಯ ವ್ಯಕ್ತಿಗಳಿಗೆ ಇರುಸು–ಮುರುಸು ಉಂಟಾಗಲಿದೆ. ತಾಂತ್ರಿಕ ವಿದ್ಯಾರ್ಥಿಗಳಿಗೆ ನೈಪುಣ್ಯತೆಯ ಬಗ್ಗೆ ಹೆಮ್ಮೆಯ ದಿನ.

ಮಕರ: ಉದ್ಯೋಗದಲ್ಲಿ ನೆಮ್ಮದಿ ತರುವ ದಿನ. ಶುಭ ಸುದ್ದಿಯೊಂದು ಕೇಳಿಬರಲಿದೆ. ಭೂ ಖರೀದಿ ಮಾಡುವ ಅಥವಾ ಲಾಭವಾಗುವ ಸಾಧ್ಯತೆ. ಹಿರಿಯರ ಸಾಂತ್ವನದ ಮಾತುಗಳಿಂದಾಗಿ ಆತ್ಮಸ್ಥೈರ್ಯ ವೃದ್ಧಿಯಾಗಲಿದೆ.

ಕುಂಭ: ಸೈನಿಕರಿಗೆ, ಆರಕ್ಷಣಾ ಕೆಲಸದಲ್ಲಿ ತೊಡಗಿಕೊಂಡವರಿಗೆ ಬಿಡುವಿಲ್ಲದ ದಿನ. ಜೀವನದಲ್ಲಿ ಸಾಧನೆಯೊಂದನ್ನು ಮಾಡಿದ ತೃಪ್ತಿಯನ್ನು ಹೊಂದಲಿದ್ದೀರಿ.


ಮೀನ: ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಹೆಚ್ಚಿನ ಆದಾಯ ದೊರಕಲಿದೆ. ವಿದ್ಯಾರ್ಥಿಗಳಿಗೆ ಅಭ್ಯಾಸದೆಡೆಗೆ ಚಂಚಲತೆ ಉಂಟಾಗಲಿದೆ. ವಯೋವೃದ್ಧರಿಗೆ ಆರೋಗ್ಯದಲ್ಲಿ ಏರಿಳಿತ.

ನಿಮ್ಮ ಜನ್ಮದಿನ 31-ಆಗಸ್ಟ್: ಇಂದು ಅತ್ಯಂತ ಶುಭದಾಯಕವಾಗಿದ್ದು, ಸಹೋದರರ ಹಿತವನ್ನು ಕಡೆಗಣಿಸುವುದರಿಂದಾಗಿ ತೊಂದರೆಗೀಡಾಗುವ ಸಾಧ್ಯತೆ. ದುಡುಕು ತನದಿಂದಾಗಿ ವಿರೋಧ ಕಟ್ಟಿಕೊಳ್ಳಬೇಕಾದೀತು. ಸ್ವಂತ ಉದ್ದಿಮೆಯೊಂದರ ಪ್ರಾರಂಭಕ್ಕೆ ಚಾಲನೆ ನೀಡಲಿದ್ದೀರಿ. ಸಂಗಾತಿಯಿಂದ ಸಕಾಲಿಕ ಸಲಹೆ ದೊರಕಲಿದೆ.

ಪದಬಂಧ 4705
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಪ್ಪುಗೆಯನ್ನು ಹೀಗೆ ಹೇಳಿ (4)
3.ನಿಯಮದಂತೆ ಕನ್ನಡಿಗ ಮಾಡಿಕೊಂಡ ಎಕ್ಸ್‌ಚೇಂಜ್ (4)
5.ಕೃಷ್ಣನ ಸ್ನೇಹಿತ (3)
6.ನಗರದಲ್ಲಿರುವ ಆಭರಣ (2)
8.ಹುದ್ದೆಯೂ ಆಗಬಹುದಾದ ಜಾಗ (2)
9.ಸ್ತಂಭವನ್ನು ಹೀಗೂ ಹೇಳುವರು (2)
10.ಕರ್ತಾರನ ಕೈ! (2)
12.ಪರಾಕ್ರಮವನ್ನು ಹೀಗೆ ತೋರಿಸಿ (3)
14.ಜೈನ ತೀರ್ಥಂಕರರಲ್ಲಿ ಕೊನೆಯವನು (4)
15.ಚಾರ ಹೇಳಿದ ಸುದ್ದಿ (4)

ಮೇಲಿಂದ ಕೆಳಕ್ಕೆ
1.ಊಟಕ್ಕೆ ಮೊದಲು ಮಂತ್ರ ಪೂರ್ವಕವಾಗಿ ಅಂಗೈಯಲ್ಲಿ ನೀರನ್ನು ಹೀರುವುದು (4)
2.ಕನಸು ಇಲ್ಲಿ ಸತ್ಯವಾಗಿದೆ (3)
3.ಸಮನಾಗಿಲ್ಲದಿರುವುದು (3)
4.ಮಾನವುಳ್ಳ ಒಡೆಯ (4)
7.ಈ ಬಡವ ಹಿಂದಿಯವನು! (3)
8.ಈತ ನೆಲೆಗೊಳಿಸುವವನು (3)
9.ಸಿಂಹವನ್ನು ಹೀಗೂ ಕರೆವರು (4)
11.ಸಮುದ್ರ ಇಲ್ಲಿದೆ (4)
12.ಧನ ನೀಡಿ ತಂದಿರುವ ಉಪಕರಣ ಸಾಮಗ್ರಿ (3)
13.ಮಾಸದ ಕೊನೆಗೆ ಒಂದಾಗಿ ಸೇರಿಸಿದುದು (3)



4704ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಗ್ರಗಾಮಿ 3.ಭಲ್ಲೂಕ 5.ಮಧುಕರಿ 7.ಜಟಿಲ 8.ಪಾರಿತೋಷಕ 11.ಉದ್ಧಾರ 12.ತ್ರುಕಕೀಹ 14.ಉಕ್ಕಾನು 15.ಪುರುಸೊತ್ತು

ಮೇಲಿಂದ ಕೆಳಕ್ಕೆ: 1.ಉತ್ತಮಣ 2.ಗಾಯಕ 4.ಕಮಲ 6.ರಿಪೇರಿ 7.ಜನಕ 8.ಪಾಮರ 9.ಷರತ್ತು 10.ಮೆಹನತ್ತು 11.ಉಯಿಲು 13.ಕಮರು

ಸುಡೊಕು 5091

2		6					5	
	4		5		6	3		2
3							6	
	2					9		4
			2	4	7			
	7					5		8
		9			8		4	
4		2						1
	6		4		2	7	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5090 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಮುಂಬೈ ಧಾರಣೆ

ಶೇಂಗಾ

30-8-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9550-9600
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1800 (1800)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1365 (1365)
ಪಾಮ್ ವಾರದ ಡೆಲಿವರಿ	1263 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1440)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,250 (47,700)
ಬೆಳ್ಳಿ ಕೆ.ಜಿ 63,750 (64,000)

ಆವರಣದಲ್ಲಿ ಶನಿವಾರದ ಧಾರಣೆ

ಚಿನ್ನದ ದರ ₹ 199, ಬೆಳ್ಳಿ ₹ 250ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನ, ಬೆಳ್ಳಿ ದರ ಇಳಿಕೆ ಕಂಡಿದೆ. ಚಿನ್ನದ ದರ 10 ಗ್ರಾಂಗೆ ₹ 199ರಷ್ಟು ಇಳಿಕೆ ಆಗಿ ₹ 46,389ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 250ರಷ್ಟು ಕಡಿಮೆಯಾಗಿ ₹ 62,063ರಂತೆ ಮಾರಾಟವಾಗಿದೆ.


ಸೆಪ್ಟೆಂಬರ್‌ನಿಂದ ಬೆಲೆ ಏರಿಕೆ: ಮಾರುತಿ ಸುಜುಕಿ

ನವದೆಹಲಿ (ಪಿಟಿಐ): ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವ ಕಾರಣ ಸೆಪ್ಟೆಂಬರ್‌ನಿಂದ ತನ್ನ ಎಲ್ಲ ಮಾದರಿಯ ಕಾರುಗಳ ಬೆಲೆ ಹೆಚ್ಚಿಸುವುದಾಗಿ ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಸೋಮವಾರ ತಿಳಿಸಿದೆ.

ವಿವಿಧ ರೀತಿಯ ತಯಾರಿಕಾ ವೆಚ್ಚಗಳಲ್ಲಿ ಏರಿಕೆ ಆಗುತ್ತಿರುವುದರಿಂದ ಕಳೆದ ವರ್ಷದಿಂದ ಕಂಪನಿಯ ವಾಹನಗಳ ವೆಚ್ಚವು ನಿರಂತರವಾಗಿ ಹೆಚ್ಚಾಗುತ್ತಿದೆ. ಆದ್ದರಿಂದ ವಾಹನಗಳ ಬೆಲೆ ಏರಿಕೆಯ ಮೂಲಕ ಹೆಚ್ಚುವರಿ ವೆಚ್ಚವನ್ನು ಗ್ರಾಹಕರಿಗೆ ವರ್ಗಾಯಿಸುವುದು ಅನಿವಾರ್ಯವಾಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಂಪನಿಯು ಸದ್ಯ ₹ 2.99 ಲಕ್ಷದಿಂದ ₹ 12.39 ಲಕ್ಷದವರೆಗಿನ ಬೆಲೆಯ (ಎಕ್ಸ್‌ಷೋರೂಂ) ವಾಹನಗಳನ್ನು ಮಾರಾಟ ಮಾಡುತ್ತಿದೆ.

ನಿಧನ



ಶ್ರೀ ಕಬಾಡಿ ಜಗನ್ನಾಥಸಾ

ಶ್ರೀ ಲೇಟ್ ಕಬಾಡಿ ವೆಂಕೂಸಾರವರ ಸುಪುತ್ರರು
ಮೆ॥ ಕಬಾಡಿ ಚಿಕ್ಕನಾಗೂಸಾ & ಸನ್ಸ್
ಜನನ:01.08.1943 । ನಿಧನ:29.08.2021

ಇವರು ಭಾನುವಾರ, ತಾ॥ 29.08.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ,

ದು:ಖತಪ್ತ ಪತ್ನಿ ಶ್ರೀಮತಿ ಕಬಾಡಿ ಇಂದಿರಾಬಾಯಿ ಪುತ್ರ ಶ್ರೀ ಕಬಾಡಿ ಜೆ ಸುದರ್ಶನ್, ಪುತ್ರಿಯರು, ಅಳಿಯಂದಿರು ಮತ್ತು ಕುಟುಂಬವರ್ಗದವರು, ಬಂಧುಗಳು ಮತ್ತು ಮಿತ್ರರು.

ವಿಳಾಸ: ನಂ. 477/42, 10ನೇ ಮೈನ್, ಆರ್‌ಎಂವಿ ಬಡಾವಣೆ, ಬೆಂಗಳೂರು–560080
ಫೋನ್: 080–23612115

ಜ್ಞಾನ ಭಕ್ತಿಯ ಕಡೆಗೋಲು

• ಗುರುರಾಜ ಕರಜಗಿ

ಶ್ರೀಲ ಪ್ರಭುಪಾದರ 125ನೇ ಜಯಂತಿ



ಶ್ರೀಲ ಪ್ರಭುಪಾದರು

ಅಧ್ಯಾತ್ಮ ಚಿಂತನೆಯನ್ನು ಧಾರೆಯಾಗಿಸಿದ ತತ್ವಜ್ಞಾನಿ, ವಿದ್ವಾಂಸ ಮತ್ತು ಸಂತ ಎ.ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು ನಮ್ಮ ಪ್ರಪಂಚಕ್ಕೊಂದು ಧ್ರುವತಾರೆ.


ಅವರ ಬದುಕೇ ಒಂದು ವಿಸ್ಮಯ. ಬಾಲ್ಯದಿಂದಲೇ ಬಂದ ಕೃಷ್ಣಭಕ್ತಿ. ಕಲಿತದ್ದು ಸ್ಕಾಟಿಶ್ ಚರ್ಚ್ ಕಾಲೇಜಿನಲ್ಲಿ. ಮುಂದೆ ವೈವಾಹಿಕ ಜೀವನ, ವ್ಯಾಪಾರ. ಈ ಸಮಯದಲ್ಲಿ ಗೌಡೀಯ ಮಠದ ಸಂಸ್ಥಾಪನಾಚಾರ್ಯರಾದ ಶ್ರೀಲ ಭಕ್ತಿ ಸಿದ್ಧಾಂತ ಸರಸ್ವತೀ ಠಾಕೂರರ ದರ್ಶನ. ಅದೊಂದು ಅಮೃತಕ್ಷಣ. ಗುರುಗಳು ಶಿಷ್ಯನಿಗೆ ಕೃಷ್ಣಪ್ರಜ್ಞೆಯನ್ನು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹರಡಲು ಆದೇಶಿಸಿದರು. ಅದೊಂದು ಮಾತು ಸಾಕಾಯಿತು, ಇಡೀ ಜೀವನವನ್ನೇ ಅದಕ್ಕಾಗಿ ಮುಡುಪಿಡಲು. 'ಬ್ಯಾಕ್ ಟು ಗಾಡ್ ಹೆಡ್' (ಮರಳಿ ಭಗವಂತನೆಡೆಗೆ) ಪತ್ರಿಕೆಯ ಪ್ರಕಟಣೆ, ಪ್ರಸಾರ ಕಾರ್ಯ ನಡೆಯಿತು. ಅವರ ಪರಿಶ್ರಮಕ್ಕೆ 'ಭಕ್ತಿ ವೇದಾಂತ' ಎಂಬ ಬಿರುದು ಗರಿಗಟ್ಟಿತು. ನಂತರ ಕೌಟುಂಬಿಕ ಜೀವನದಿಂದ ನಿವೃತ್ತಿ ಪಡೆದು ಸನ್ಯಾಸದೀಕ್ಷೆ. ವೃಂದಾವನದಲ್ಲಿ ಕುಳಿತು ಅತ್ಯಮೂಲ್ಯವಾದ ಶ್ರೀಮದ್ ಭಾಗವತದ ಹದಿನೆಂಟು ಸಾವಿರ ಶ್ಲೋಕಗಳಿಗೆ ಅನುವಾದ-ತಾತ್ಪರ್ಯದ ಬರವಣಿಗೆ. ಗುರುವಾಜ್ಞೆಯಂತೆ ದಾನಿಯೊಬ್ಬರ ಸಹಾಯದೊಂದಿಗೆ ತಮ್ಮ ಎಪ್ಪತ್ತನೆಯ ವರ್ಷದಲ್ಲಿ ಅಮೆರಿಕೆ ಪ್ರಯಾಣ. ಅವರೊಂದಿಗೆ ಇದ್ದದ್ದು ಕೇವಲ ನಲವತ್ತು ರೂಪಾಯಿಗಳು. ಅನಾಮಧೇಯರಾಗಿ ಆ ದೇಶವನ್ನು ಪ್ರವೇಶಿಸಿದ ಶ್ರೀಲ ಪ್ರಭುಪಾದರು ಮುಂದಿನ ಹನ್ನೆರಡು ವರ್ಷಗಳಲ್ಲಿ ಸಾಧಿಸಿದ್ದು ಬೆರಗುಹುಟ್ಟಿಸುವಂಥದ್ದು. ಅಂತರರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಸ್ಥೆಯ (ಇಸ್ಕಾನ್) ಸ್ಥಾಪನೆ, ಪ್ರಪಂಚದ ಹಲವು ನಗರಗಳಲ್ಲಿ ಕೃಷ್ಣಪ್ರಜ್ಞೆಯ ಪ್ರಸಾರ, 108 ಕೃಷ್ಣ ದೇವಾಲಯಗಳ ಸ್ಥಾಪನೆ, ಸಹಸ್ರಾರು ಜನರ ಸದಸ್ಯತ್ವ, ಹದಿನಾಲ್ಕು ಬಾರಿ ಪ್ರಪಂಚ ಪರ್ಯಟನೆ, ಮನೆ ಮನೆಗಳಲ್ಲಿ, ಮನಮನಗಳಲ್ಲಿ 'ಹರೇ ಕೃಷ್ಣ ಹರೇ ಕೃಷ್ಣ, ಕೃಷ್ಣ ಕೃಷ್ಣ ಹರೇ ಹರೇ', 'ಹರೇ ರಾಮ ಹರೇ ರಾಮ, ರಾಮ ರಾಮ ಹರೇ ಹರೇ' ನಾಮಜಪವನ್ನು ಸ್ಥಿರಗೊಳಿಸಿದ್ದು ಪವಾಡಸದೃಶ ಕಾರ್ಯ.

ಈ ಓಡಾಟ, ಪ್ರವಚನಗಳೆಂಬ ಜ್ಞಾನಪ್ರಸಾರ ಕಾರ್ಯದ ಮಧ್ಯೆ ಅವರು ಜ್ಞಾನಸೃಷ್ಟಿಯನ್ನು ಮರೆಯಲಿಲ್ಲ. ಅವರು ಸೃಜಿಸಿದ್ದು ಅಪಾರವಾದ ಅಧ್ಯಾತ್ಮಿಕ ಸಾಹಿತ್ಯ, ಭಾಗವತ, ಭಗವದ್ಗೀತೆ, ಈಶೋಪನಿಷತ್, ಸನಾತನಧರ್ಮ, ಸಾಂಖ್ಯಯೋಗ, ವೇದಾಂತ ದರ್ಶನ, ಕೃಷ್ಣ ಪ್ರಜ್ಞೆ – ಹೀಗೆ ಎಲ್ಲ ವಿಷಯಗಳಲ್ಲಿ ಎಪ್ಪತ್ತು ಸಂಪುಟಗಳ ರಚನೆ ಮತ್ತು ಪ್ರಕಟಣೆ. ಅವರ ಮೂಲ ಉದ್ದೇಶ, ವೈದಿಕ ಶಾಸ್ತ್ರಗಳನ್ನು ಇಂದಿನ ತರುಣರಿಗೆ ಅರ್ಥವಾಗುವ ರೀತಿಯಲ್ಲಿ ವಿವರಿಸುವುದು ಮತ್ತು ಅವರಲ್ಲಿ ಸನಾತನ ಧರ್ಮದ ಶ್ರದ್ಧೆಯನ್ನು ತುಂಬುವುದು, ಅವರಲ್ಲಿ ಭಕ್ತಿಯನ್ನು ನೆಲೆಯಾರಿಸುವುದು. ದ್ವಾಪರದ ಕೃಷ್ಣ ಮಾಡಿದ್ದು ಇದೇ ಕಾರ್ಯ. ಆತ ನವನೀತ ಚೋರ! ಅಂದರೆ ಬೆಣ್ಣೆ ಕಳ್ಳ. ಅದೊಂದು ಸಾಂಕೇತಿಕ ದರ್ಶನ. ಅವನೇಕೆ ಬೇರೆಯವರ ಮನೆಗೆ ನುಗ್ಗಿ ಬೆಣ್ಣೆಯನ್ನು ಕದ್ದಾನು? ಕೃಷ್ಣನಿಗೆ ಬೇಕಾದದ್ದು ಈ ಬೆಣ್ಣೆಯಲ್ಲ, ಪ್ರತಿಯೊಬ್ಬರ ಮನಸ್ಸಿನಲ್ಲಿ ಹುಟ್ಟಿದ ಭಕ್ತಿಯೆಂಬ ಬೆಣ್ಣೆ, ಅದು ಅವನಿಗೆ ಬೇಕು. ಅಷ್ಟೇ ಅಲ್ಲ, ಪ್ರತಿಯೊಬ್ಬ ಮನುಷ್ಯರ ಹೃದಯದಲ್ಲಿ ಅದು ಹುಟ್ಟುವಂತೆ ನೋಡಿಕೊಳ್ಳಬೇಕು. ಅವರ ಮನಸ್ಸನ್ನು ಕಡೆದು ಭಕ್ತಿಯ ಬೆಣ್ಣೆ ಹೊರಬರಬೇಕು.

ಇದೇ ಕೆಲಸವನ್ನು ಶ್ರೀಲ ಪ್ರಭುಪಾದರು ಅತ್ಯಂತ ಸಮರ್ಥವಾಗಿ ಮಾಡಿದರು. ಈ ಮಥಿಸುವ ಅಂದರೆ ಕಡೆಯುವ ಕೆಲಸ ಅತ್ಯಂತ ಸಾಂಕೇತಿಕವಾದದ್ದು. ಕಡೆಗೋಲಿನ, ಮೇಲಿನ ಕೋಲು ಶ್ರದ್ಧೆ. ಕೆಳಗೆ ಚೆಂಡಿನಲ್ಲಿರುವ, ಚಾಚಿಕೊಂಡಿರುವ ಪಟ್ಟಿಗಳು ನಮ್ಮ ಚಿಂತನೆಗಳು, ತಿಳಿವಳಿಕೆಗಳು ಮತ್ತು ಪಡೆದುಕೊಂಡಿದ್ದ ಜ್ಞಾನ. ಅಧ್ಯಾತ್ಮ ಸಾಧನೆಯಲ್ಲಿ ಒಂದೇ ಮುಖವಿಲ್ಲ. ಯಾವಾಗಲೂ ಎರಡು ದೃಷ್ಟಿಗಳು. ಭಗವಂತ ಏಕ-ಅನೇಕ, ಆಕಾರಿ-ನಿರಾಕಾರಿ, ಅರ್ಥ--ಅನರ್ಥ, ಕ್ಷರ-ಅಕ್ಷರ, ಚಲ-ಅಚಲ, ಭಯಕೃತ್-ಭಯನಾಶನ, ಸ್ತವಪ್ರಿಯ-ರಣಪ್ರಿಯ. ಮೂಲತಃ ಶ್ರೀಕೃಷ್ಣನ ಅಪರಂಪಾರ ದ್ವಂದ್ವಾತೀತ ಶಕ್ತಿಯನ್ನು ತೋರಿಸುವಂತೆ, ಕಡೆಗೋಲನ್ನು ಅರ್ಧ, ಅರ್ಧವಾಗಿ ತಿರುಗಿಸುತ್ತ, ಮನುಷ್ಯನ ಹೃದಯಲ್ಲಿರುವ ಪ್ರಜ್ಞೆ ಎಂಬ ಕೆನೆಯನ್ನು ಕಡೆದಾಗ ಭಕ್ತಿ ಎನ್ನುವ ಬೆಣ್ಣೆ ತೇಲಿ ಬರುತ್ತದೆ. ಅದು ಕೃಷ್ಣನಿಗೆ ಅತಿಪ್ರಿಯವಾದದ್ದು, ನೈವೇದ್ಯಯೋಗ್ಯವಾದದ್ದು. ಅದಕ್ಕೆಂದೇ ಶ್ರೀಲ ಪ್ರಭುಪಾದರು ಅಹರ್ನಿಶಿ ಜ್ಞಾನ ಪ್ರಸಾರ ಮತ್ತು ಜ್ಞಾನ ಸೃಷ್ಟಿ ಮಾಡಿದ್ದು ಈ ಮಂಥನವನ್ನು ಕೈಗೊಂಡರು. ಸಹಸ್ರಾರು ತರುಣರ ಹೃದಯಗಳನ್ನು ತಟ್ಟಿ, ಅವರ ಹೃದಯಗಳಲ್ಲಿದ್ದ ಪ್ರಜ್ಞೆಯನ್ನು ಕಲಕಿ ಭಕ್ತಿಯನ್ನು ಮೂಡಿಸಿದರು. ಶ್ರದ್ಧೆಯ ತರುಣ ಪಡೆಯನ್ನೇ ಕಟ್ಟಿದರು. ಬದುಕಿನುದ್ದಕ್ಕೂ ಆ ಪರಿಪೂರ್ಣತೆಯ ಬಗ್ಗೆ ತುಡಿಯುತ್ತ, ಅದನ್ನೇ ಪಸರಿಸುತ್ತ, ಕೃಷ್ಣಪ್ರಜ್ಞೆಯಲ್ಲಿ ಅದನ್ನು ಕಂಡರಿಸುತ್ತ, ಅನೇಕಾನೇಕ ಜೀವಿಗಳನ್ನು ಸನ್ಮಾರ್ಗಕ್ಕೆ ತಂದ ಮಹಾನ್ ಗುರು ಶ್ರೀಲ ಪ್ರಭುಪಾದರಿಗೆ, ನಮ್ಮೆಲ್ಲರ ಕೃತಜ್ಞತೆ, ಗೌರವಗಳು ಸದಾಕಾಲ ದೊರಕುತ್ತಲೇ ಇರುತ್ತವೆ.

(ಲೇಖನದ ಪೂರ್ಣಪಾಠಕ್ಕೆ prajavani.net)

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,705
ಇಂದಿನ ಅಂತ್ಯ	16,931
▲	226
ದಿನದ ಗರಿಷ್ಠ	16,951

ವಿನಿಮಯ ದರ

$ ಡಾಲರ್	73.29
£ ಪೌಂಡ್	100.75
€ ಯುರೊ	86.45
¥ ಯೆನ್ (100¥)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹420
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹421

ಹಣಕಾಸು, ಲೋಹ ವಲಯದ ಷೇರುಗಳ ಮೌಲ್ಯ ಏರಿಕೆ

ದಾಖಲೆಯ ಮಟ್ಟಕ್ಕೆ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರದ ವಹಿವಾಟಿನಲ್ಲಿ 765 ಅಂಶ ಜಿಗಿತ ಕಂಡಿತು. ದಿನದ ಅಂತ್ಯಕ್ಕೆ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 56,889 ಅಂಶಗಳಲ್ಲಿ ಕೊನೆಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 16,900 ಅಂಶಗಳ ಮಟ್ಟವನ್ನು ದಾಟಿತು.

ಜಾಗತಿಕ ಷೇರುಪೇಟೆಯ ಬೆಂಬಲ ಮತ್ತು ದೇಶಿ ಷೇರುಪೇಟೆಯಲ್ಲಿ ನಡೆದ ಉತ್ತಮ ಖರೀದಿ ವಹಿವಾಟಿನಿಂದಾಗಿ ಎರಡೂ ಷೇರುಪೇಟೆಗಳು ಉತ್ತಮ ವಹಿವಾಟು ನಡೆಸಿದವು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 40 ಪೈಸೆ ಹೆಚ್ಚಾಗಿದ್ದು ಸಹ ಸೂಚ್ಯಂಕಗಳ ಓಟಕ್ಕೆ ಬೆಂಬಲ ನೀಡಿತು. ರೂಪಾಯಿ ಮೌಲ್ಯವು ಡಾಲರ್ ಎದುರು ಮೂರು ದಿನಗಳಲ್ಲಿ 95 ಪೈಸೆಯಷ್ಟು ಹೆಚ್ಚಾಗಿದೆ. ಬಿಎಸ್‌ಇ ಸೆನ್ಸೆಕ್ಸ್ ದಿನದ ವಹಿವಾಟಿನ ಒಂದು ಹಂತದಲ್ಲಿ 56,958 ಅಂಶಗಳಿಗೆ ಏರಿಕೆ ಆಗಿತ್ತು.

ನಿಫ್ಟಿ ಸತತ ಆರನೇ ದಿನವೂ ಏರಿಕೆಯ ಓಟ ಮುಂದುವರಿಸಿದ್ದು, ನಿಫ್ಟಿ ಸೋಮವಾರ 226 ಅಂಶ ಹೆಚ್ಚಾಗಿ 16,931 ಅಂಶಗಳ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಂಡಿದೆ. ಮಧ್ಯಂತರ ವಹಿವಾಟಿನಲ್ಲಿ 16,951 ಅಂಶಕ್ಕೆ ಏರಿಕೆ ಆಗಿತ್ತು.

ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್‌ನಲ್ಲಿ ಭಾರ್ತಿ ಏರ್‌ಟೆಲ್ ಷೇರು ಮೌಲ್ಯ ಶೇ 4.44ರಷ್ಟು ಹೆಚ್ಚಾಗಿದೆ. ಹಣಕಾಸು ಮತ್ತು ಲೋಹ ವಲಯದ ಷೇರುಗಳು ಉತ್ತಮ ಚೇತರಿಕೆ ಕಂಡವು.

ಐ.ಟಿ. ವಲಯ ಹೊರತುಪಡಿಸಿ ಉಳಿದೆಲ್ಲ ಪ್ರಮುಖ ವಲಯಗಳ ಸೂಚ್ಯಂಕಗಳು ಗಳಿಕೆ ಕಂಡುಕೊಂಡವು. ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಉತ್ತಮ ಖರೀದಿ ವಹಿವಾಟಿಗೆ ಒಳಗಾದವು ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಯೋಜನಾ ಮುಖ್ಯಸ್ಥ ವಿನೋದ್ ಮೋದಿ ಹೇಳಿದ್ದಾರೆ.

ಮುಖ್ಯಾಂಶಗಳು

- ಡಾಲರ್ ಎದುರು ರೂಪಾಯಿ ಮೌಲ್ಯ 40 ಪೈಸೆ ಹೆಚ್ಚಳ
- ಬ್ರೆಂಟ್ ಕಚ್ಚಾತೈಲ ದರ ಶೇ 0.20ರಷ್ಟು ಇಳಿಕೆ
- ಬಿಎಸ್‌ಇ ಮಿಡ್, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1.72ರವರೆಗೆ ಏರಿಕೆ



ಬಂಡವಾಳ ಮೌಲ್ಯ ವೃದ್ಧಿ: ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ದಾಖಲೆ ಮಟ್ಟವಾದ ₹ 247.30 ಲಕ್ಷ ಕೋಟಿಗಳಿಗೆ ಏರಿಕೆ ಕಂಡಿದೆ. ಮೂರು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹ 5.76 ಲಕ್ಷ ಕೋಟಿಗಳಷ್ಟು ಹೆಚ್ಚಾಗಿದೆ.

ಐಪಿಒಗೆ ಸಿದ್ಧವಾಗುತ್ತಿರುವ ಓಲಾ

ನವದೆಹಲಿ (ಪಿಟಿಐ): ಓಲಾ ಕಂಪನಿಯು ತನ್ನ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸಿ (ಐಪಿಒ) ₹ 7,324 ಕೋಟಿಯಿಂದ ₹ 10,985 ಕೋಟಿವರೆಗೆ ಬಂಡವಾಳ ಸಂಗ್ರಹಿಸುವ ಉದ್ದೇಶ ಹೊಂದಿದೆ ಎಂದು ಮೂಲಗಳು ತಿಳಿಸಿವೆ. ಐಪಿಒ ಭಾಗವಾಗಿ ಕಂಪನಿಯು ಡಿಸೆಂಬರ್ ತ್ರೈಮಾಸಿಕದಲ್ಲಿ ಅಗತ್ಯ ದಾಖಲೆಗಳನ್ನು 'ಸೆಬಿ'ಗೆ ಸಲ್ಲಿಸಲಿದೆ ಎನ್ನಲಾಗಿದೆ.

ಐಪಿಒ ಪ್ರಕ್ರಿಯೆ ನಿಭಾಯಿಸುವ ವಿಚಾರವಾಗಿ ಓಲಾ ಕಂಪನಿಯು ಸಿಟಿಗ್ರೂಪ್ ಹಾಗೂ ಕೋಟಕ್ ಮಹೀಂದ್ರ ಬ್ಯಾಂಕ್ ಜೊತೆಗೂಡಿ ಕೆಲಸ ಆರಂಭಿಸಿದೆ ಎಂದು ಗೊತ್ತಾಗಿದೆ. ಈ ವಿಚಾರವಾಗಿ ಓಲಾ ಕಂಪನಿಯಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಕಂಪನಿಯ ಸಹ ಸಂಸ್ಥಾಪಕ ಭವೀಶ್ ಅಗರ್ವಾಲ್ ಅವರು ಐಪಿಒ ಆಲೋಚನೆ ಇದೆ ಎಂಬುದನ್ನು ಈಚೆಗೆ ತಿಳಿಸಿದ್ದರು. ಇದು ಮುಂದಿನ ವರ್ಷ ಆಗಬಹುದು ಎಂದು ಹೇಳಿದ್ದರು. 2011ರಲ್ಲಿ ಸ್ಥಾಪನೆ ಆದ ಓಲಾ ಕಂಪನಿಯು ಭಾರತ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಬ್ರಿಟನ್‌ನಲ್ಲಿ ಕಾರ್ಯಾಚರಣೆ ನಡೆಸುತ್ತಿದೆ.

ಶುಲ್ಕ ಹೆಚ್ಚಳಕ್ಕೆ ಒಲವು ತೋರಿದ ಏರ್‌ಟೆಲ್

ನವದೆಹಲಿ (ಪಿಟಿಐ): ದೂರಸಂಪರ್ಕ ಕಂಪನಿಗಳ ಸೇವಾ ಶುಲ್ಕ ಹೆಚ್ಚಾಗಬೇಕು, ಈ ಉದ್ಯಮದ ಮೇಲೆ ಸರ್ಕಾರ ವಿಧಿಸಿರುವ ಸುಂಕಗಳ ಪ್ರಮಾಣ ತಗ್ಗಬೇಕು ಎಂದು ಭಾರ್ತಿ ಏರ್‌ಟೆಲ್ ಕಂಪನಿಯ ಅಧ್ಯಕ್ಷ ಸುನಿಲ್ ಭಾರ್ತಿ ಮಿತ್ತಲ್ ಸೋಮವಾರ ಹೇಳಿದ್ದಾರೆ.

'ಜನರು ಪ್ರತಿ ತಿಂಗಳು ಸರಾಸರಿ 16 ಜಿಬಿ ಡೇಟಾ ಬಳಕೆ ಮಾಡುತ್ತಿದ್ದಾರೆ. ದೂರಸಂಪರ್ಕ ಉದ್ಯಮವು ಇನ್ನಷ್ಟು ಲಾಭದಾಯಕ ಆಗಬೇಕು, ಬಂಡವಾಳಕ್ಕೆ ಪ್ರತಿಯಾಗಿ ಸೂಕ್ತ ಆದಾಯ ಬರಬೇಕು ಎಂದಾದರೆ ಸೇವಾ ಶುಲ್ಕವನ್ನು ಹೆಚ್ಚಿಸಬೇಕು' ಎಂದು ಮಿತ್ತಲ್ ಅಭಿಪ್ರಾಯಪಟ್ಟಿದ್ದಾರೆ.

ಏರ್‌ಟೆಲ್ ಕಂಪನಿಯು ಶುಲ್ಕ ಹೆಚ್ಚಿಸಲು ಹಿಂದೇಟು ಹಾಕುವುದಿಲ್ಲ. ಕಳೆದ ಕೆಲವು ತಿಂಗಳುಗಳಲ್ಲಿ ಏರ್‌ಟೆಲ್ ತನ್ನ ಶುಲ್ಕದಲ್ಲಿ ತಂದಿರುವ ಬದಲಾವಣೆಗಳು ಇದಕ್ಕೆ ಸಾಕ್ಷಿ. ಕಂಪನಿಯು ತಾಳ್ಮೆ ಕಳೆದುಕೊಂಡಿದೆ ಎಂದು ಮಿತ್ತಲ್ ಹೇಳಿದ್ದಾರೆ. ಕಂಪನಿಯು ಕನಿಷ್ಠ ರಿಚಾರ್ಜ್ ಮೊತ್ತವನ್ನು ₹ 79ಕ್ಕೆ ಈಗಾಗಲೇ ಹೆಚ್ಚಿಸಿದೆ.

'ಈ ಮೊತ್ತವು ಕಾಲಕ್ರಮೇಣ ₹ 99ಕ್ಕೆ ಏರಿಕೆ ಆಗಬಹುದೇ ಎಂಬ ಪ್ರಶ್ನೆಗೆ ನನ್ನ ಉತ್ತರ ಹೌದು ಎಂದಾಗಿರುತ್ತದೆ. ಆ ಏರಿಕೆ ಯಾವಾಗ ಆಗಬಹುದು ಎಂಬುದಷ್ಟೇ ಉಳಿದಿರುವ ಪ್ರಶ್ನೆ' ಎಂದಿದ್ದಾರೆ. ಪ್ರತೀ ಗ್ರಾಹಕನಿಂದ ಪ್ರತಿ ತಿಂಗಳಿಗೆ ₹ 200 ಆದಾಯ ಬರುವಂತಹ ಸ್ಥಿತಿಗೆ ಉದ್ಯಮವು ತ್ವರಿತವಾಗಿ ಸಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಉದ್ಯಮವು ನಂತರದಲ್ಲಿ ಪ್ರತೀ ಗ್ರಾಹಕನಿಂದ ₹ 300 ಆದಾಯ ಬರುವ ಹಂತವನ್ನೂ ತಲುಪಬೇಕು. ಆಗ ಗ್ರಾಹಕರು ಹೇರಳ ಡೇಟಾ, ಸಂಗೀತ, ಮನರಂಜನೆಯ ಸೌಲಭ್ಯವನ್ನು ಪಡೆಯಬಹುದು' ಎಂದು ವಿವರಿಸಿದ್ದಾರೆ. ಈ ಉದ್ಯಮದ ಶೇಕಡ 35ರಷ್ಟು ಆದಾಯವು ಸುಂಕ ಪಾವತಿಗೇ ವಿನಿಯೋಗ ಆಗುತ್ತಿದೆ. ದೂರಸಂಪರ್ಕ ಕಂಪನಿಗಳು ಎಜಿಆರ್ (ಹೊಂದಾಣಿಕೆ ಮಾಡಿದ ಒಟ್ಟು ವರಮಾನ), ಬಾಕಿ ಪಾವತಿಗಳು ಹಾಗೂ ತರಂಗಾಂತರಕ್ಕೆ ಸಂಬಂಧಿಸಿದ ಪಾವತಿಯ ಹೊರೆಯನ್ನು ಹೊತ್ತುಕೊಂಡಿವೆ ಎಂದಿದ್ದಾರೆ.


ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	395-400
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46000
ಹಳತು	42500-51000
ಚಿತ್ರದುರ್ಗ	
ಅಪಿ	47119-47559
ಬೆಟ್ಟೆ	37829-38279
ಕೆಂಪುಗೋಟು	32110-32599
ರಾಶಿ	46639-47069
ಪುತ್ತೂರು	
ಕೋಕ	10500-26000
ಹೊಸತು	31500-46000
ಸಿದ್ದಾಪುರ	
ಬಿಳಿಗೋಟು	28890-35881
ಚಾಲಿ	39099-41209
ಕೋಕ	21689-34399
ಕೆಂಪುಗೋಟು	27599-32499
ರಾಶಿ	40599-46009
ತಟ್ಟಿಬೆಟ್ಟೆ	35199-44098
ಶಿರಸಿ	
ಬೆಟ್ಟೆ	34029-42999
ಬಿಳಿಗೋಟು	26099-37009
ಚಾಲಿ	39119-41328
ರಾಶಿ	35029-45999
ಯಲ್ಲಾಪುರ	
ಬಿಳಿಗೋಟು	33299-35916
ಚಾಲಿ	37779-41270
ಕೋಕ	28066-33436
ಕೆಂಪುಗೋಟು	31599-35499
ರಾಶಿ	43199-46600
ತಟ್ಟಿಬೆಟ್ಟೆ	38319-42299
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	17009-36852
ಗೊರಬಲು	17520-38911
ರಾಶಿ	45122-50399
ಸರಕು	52000-75699
ಸಾಗರ	
ಬಿಳಿಗೋಟು	27449-36501
ಚಾಲಿ	36889-40299
ಕೋಕ	24899-38129
ಕೆಂಪುಗೋಟು	32899-40999
ರಾಶಿ	37099-50670
ಸಿಪ್ಪೆಗೋಟು	8899-24009
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	238-471
ದ್ವಿತಳಿ (ಬಿ.ವಿ)	269-533

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13900	---	13000	--- ಸೆಂಟ್ಸ್
ಎಸಿ	6225	---	5200	
ಆರ್‌ಪಿ	6200	---	6250	ಲಂಡನ್
ಆರ್‌ಸಿ	3535	---	3625	--- ಡಾಲರ್ಸ್

ತೈಲ ಉತ್ಪಾದನೆ: ಒಪೆಕ್+ನಿಂದ ಯಥಾಸ್ಥಿತಿ ಸಾಧ್ಯತೆ



ದುಬೈ/ಲಂಡನ್ (ಪಿಟಿಐ): ಪೆಟ್ರೋಲಿಯಂ ರಫ್ತುದಾರ ರಾಷ್ಟ್ರಗಳ ಒಕ್ಕೂಟ (ಒಪೆಕ್) ಮತ್ತು ಆ ಒಕ್ಕೂಟದ ಮಿತ್ರ ರಾಷ್ಟ್ರಗಳ (ಒಪೆಕ್ +) ಪ್ರತಿನಿಧಿಗಳು ಬುಧವಾರ ಸಭೆ ಸೇರಲಿದ್ದು, ತೈಲ ಉತ್ಪಾದನೆ ನೀತಿಯಲ್ಲಿ ಬದಲಾವಣೆ ಮಾಡದಿರುವ ಸಾಧ್ಯತೆ ಇದೆ. ಈಗಾಗಲೆ ನಿರ್ಧರಿಸಿರುವಂತೆ ಉತ್ಪಾದನೆಯನ್ನು ಅಲ್ಪ ಮಟ್ಟಿಗೆ ಹೆಚ್ಚಿಸುವುದನ್ನು ಮುಂದುವರಿಸಲಿವೆ ಎಂದು ಮೂಲಗಳು ಹೇಳಿವೆ.

ಮುಂದಿನ ಹಲವು ತಿಂಗಳುಗಳವರೆಗೆ ಕಚ್ಚಾ ತೈಲ ಉತ್ಪಾದನೆಯನ್ನು ಪ್ರತಿ ದಿನ 4 ಲಕ್ಷ ಬ್ಯಾರಲ್‌ಗಳಷ್ಟು ಹೆಚ್ಚಿಸಲು ಒಪೆಕ್ + ದೇಶಗಳು ಈಗಾಗಲೇ ಒಪ್ಪಂದ ಮಾಡಿಕೊಂಡಿವೆ. ಈ ಕುರಿತು ಚರ್ಚೆ ನಡೆಸಲು ಬುಧವಾರ ಸಭೆ ಸೇರಲಿವೆ.

ತೈಲ ಬೆಲೆ ಹೆಚ್ಚಾಗುತ್ತಿದ್ದು, ಅದರಿಂದ ಜಾಗತಿಕ ಆರ್ಥಿಕ ಚೇತರಿಕೆಗೆ ಅಡ್ಡಿಯಾಗಲಿದೆ. ಹೀಗಾಗಿ ಉತ್ಪಾದನೆ ಹೆಚ್ಚಿಸುವಂತೆ ಅಮೆರಿಕವು ಒಪೆಕ್‌ಗೆ ಮನವಿ ಮಾಡಿದೆ. ಆದರೆ, ಒಪೆಕ್ + ಮೂಲಗಳ ಪ್ರಕಾರ, ಸದ್ಯದ ಬೆಲೆ ಏರಿಕೆಯು ತಾತ್ಕಾಲಿಕವಾಗಿದ್ದು, ಮೆಕ್ಸಿಕೊದಲ್ಲಿನ ಪೂರೈಕೆ ಸಮಸ್ಯೆ ಹಾಗೂ ಅಮೆರಿಕದ ಗಲ್ಫ್ ಕರಾವಳಿಯಲ್ಲಿ ವಾರಾಂತ್ಯದಲ್ಲಿ ಬೀಸಿದ ಭಾರಿ ಚಂಡಮಾರುತದಿಂದಾಗಿ ಬೆಲೆ ಏರಿಕೆ ಆಗಿದೆ.

ಸದ್ಯ ತೈಲ ಬೆಲೆಯು ಬ್ಯಾರಲ್‌ಗೆ 70 ಡಾಲರ್ ಆಸುಪಾಸಿನಲ್ಲಿ ಇದೆ. ದಿನಕ್ಕೆ 4 ಲಕ್ಷ ಬ್ಯಾರಲ್‌ಗಳಷ್ಟು ಉತ್ಪಾದನೆ ಹೆಚ್ಚಿಸುವ ಯೋಜನೆಯಂತೆಯೇ ಒಪೆಕ್ + ಮುಂದುವರಿಯಲಿದೆ ಎಂದು ಮೂಲವೊಂದು ತಿಳಿಸಿದೆ.



ಅಫ್ಗಾನಿಸ್ತಾನ ಸ್ವಾತಂತ್ರ್ಯದ ಅವಸಾನ

ಅಫ್ಗಾನಿಸ್ತಾನದಿಂದ ವಿವಿಧ ದೇಶಗಳ ನಾಗರಿಕರ ತೆರವು ಕಾರ್ಯಾಚರಣೆ ಇಂದು ಕೊನೆ: ಹೊಸ ಆಡಳಿತ ವ್ಯವಸ್ಥೆ ಶೀಘ್ರ ಅಸ್ತಿತ್ವಕ್ಕೆ

ತಾಲಿಬಾನ್ ಭೀತಿ: ಆಸರೆಗೆ ಅಫ್ಗನ್ನರ ಮೊರೆ

ಕಾಬೂಲ್ (ರಾಯಿಟರ್ಸ್): ತಾಲಿಬಾನ್ ತಮ್ಮ ಮೇಲೆ ಸೇಡು ತೀರಿಸಿಕೊಳ್ಳಬಹುದು ಎಂಬ ಭೀತಿ ಅಫ್ಗಾನಿಸ್ತಾನದ ಹಲವರಲ್ಲಿ ಈಗಲೂ ಮನೆ ಮಾಡಿದೆ. ಅಂಥವರು ಕಾಬೂಲ್ ವಿಮಾನ ನಿಲ್ದಾಣದ ಹೊರಗೆ ಜಮಾಯಿಸಿದ್ದಾರೆ. ತಮ್ಮನ್ನು ರಕ್ಷಿಸುವಂತೆ ವಿವಿಧ ದೇಶಗಳಿಗೆ ಮೊರೆ ಇಡುತ್ತಿದ್ದಾರೆ. ಅಫ್ಗಾನಿಸ್ತಾನದಿಂದ ವಿದೇಶಿಯರು ಮತ್ತು ಇತರರ ತೆರವು ಕಾರ್ಯಾಚರಣೆ ಮಂಗಳವಾರ ಕೊನೆಯಾಗಲಿದೆ.

‘ನಾವು ಅಪಾಯದಲ್ಲಿದ್ದೇವೆ’ ಎಂದು ವಿಮಾನ ನಿಲ್ದಾಣದ ಹೊರಗೆ ಇದ್ದ ಮಹಿಳೆಯೊಬ್ಬರು ಹೇಳಿದ್ದಾರೆ. ‘ಅವರು (ಅಮೆರಿಕ) ನಮ್ಮನ್ನು ರಕ್ಷಿಸಬೇಕು. ನಾವು ಅಫ್ಗಾನಿಸ್ತಾನ ತೊರೆಯಲೇಬೇಕು ಅಥವಾ ನಮಗೆ ಅವರು ಸುರಕ್ಷಿತ ತಾಣವನ್ನು ಒದಗಿಸಬೇಕು’ ಎಂದು ಆ ಮಹಿಳೆ ಆಗ್ರಹಿಸಿದ್ದಾರೆ.

ಅತಿ ಹೆಚ್ಚು ಅಪಾಯ ಇರುವ ಜನರ ತೆರವಿಗೆ ಆದ್ಯತೆ ನೀಡಲಾಗುತ್ತಿದೆ ಎಂದು ಅಮೆರಿಕದ ಅಧಿಕಾರಿಯೊಬ್ಬರು ಹೇಳಿದ್ದಾರೆ. ಇತರ ದೇಶಗಳು ಕೂಡ ಅತಿ ಹೆಚ್ಚು ಅಪಾಯ

> **ತೆರವು ಕಾರ್ಯಾಚರಣೆ ಬಳಿಕ, ಅಫ್ಗನ್ನರ ದುರಂತವು ಹೊರಜಗತ್ತಿಗೆ ಅಗೋಚರವಾಗಿಯೇ ಉಳಿಯಬಹುದು. ಆದರೆ ಅಲ್ಲಿನ ಜನಕ್ಕೆ ಇದು ನಿತ್ಯದ ನೋವು**
> **ಫಿಲಿಪ್ಪೊ ಗ್ರಾಂಡಿ,** ಯುಎನ್‌ಎಚ್‌ಸಿಆರ್ ಹೈಕಮಿಷನರ್

ಇರುವವರನ್ನು ತೆರವು ಮಾಡಲು ಯತ್ನಿಸುತ್ತಿವೆ.

ಅಮೆರಿಕದ ಸೇನೆಯು ದೇಶ ತೊರೆದ ತಕ್ಷಣ ಮಂಗಳವಾರದಿಂದ ಕಾಬೂಲ್ ವಿಮಾನ ನಿಲ್ದಾಣವನ್ನು ತಾಲಿಬಾನ್ ನಿಯಂತ್ರಣಕ್ಕೆ ತೆಗೆದುಕೊಳ್ಳಲಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಕತಾರ್‌ನ ಅಲ್ ಜಝೀರಾ ಸುದ್ದಿ ವಾಹಿನಿ ವರದಿ ಮಾಡಿದೆ.

1996ರಿಂದ 2001ರವರೆಗೆ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಳ್ವಿಕೆ ಇತ್ತು. ಈ ಅವಧಿಯಲ್ಲಿ ಇಸ್ಲಾಮಿಕ್ ಕಾನೂನು ಹೇರಿಕೆಗೆ ತಾಲಿಬಾನ್ ಪ್ರಯತ್ನಿಸಿತ್ತು. ಮೂಲಭೂತ ಸ್ವಾತಂತ್ರ್ಯವನ್ನೇ ದಮನ ಮಾಡಲಾಗಿತ್ತು. ಮಹಿಳೆಯರಿಗೆ ಯಾವುದೇ ಹಕ್ಕುಗಳು ಇರಲಿಲ್ಲ. ಹಾಗಾಗಿ, ತಾಲಿಬಾನ್ ಅಧಿಕಾರವನ್ನು ಮತ್ತೆ ಕೈವಶ ಮಾಡಿಕೊಂಡಿರುವುದು ಅಫ್ಗಾನಿಸ್ತಾನದ ಜನರಲ್ಲಿ ಭಾರೀ ಭೀತಿ ಮೂಡಿಸಿದೆ.

ಹೊಸ ಸಚಿವ ಸಂಪುಟ: ಪೂರ್ಣ ಪ್ರಮಾಣದ ಹೊಸ ಸಚಿವ ಸಂಪುಟವನ್ನು ಸದ್ಯವೇ ಘೋಷಿಸಲಾಗುವುದು. ಅದರೊಂದಿಗೆ ಜನರ ಸಂಕಷ್ಟಗಳು ಮರೆಯಾಗಲಿವೆ ಎಂದು ತಾಲಿಬಾನ್ ವಕ್ತಾರ ಝಬೀ ಉಲ್ಲಾ ಮುಜಾಹಿದ್ ಹೇಳಿದ್ದಾರೆ.

ಆದರೆ, ಅಫ್ಗಾನಿಸ್ತಾನದ ಮುಂದೆ ಹಲವು ಸವಾಲುಗಳು ಇವೆ. ದಶಕಗಳ ಯುದ್ಧ ಮತ್ತು ಸತತ ಬರಗಾಲದಿಂದಾಗಿ ಅರ್ಥ ವ್ಯವಸ್ಥೆಯು ಕುಸಿದಿದೆ. ವಿದೇಶಿ ನೆರವಿನ ರೂಪದಲ್ಲಿ ಸಿಗುತ್ತಿದ್ದ ಕೋಟ್ಯಂತರ ಡಾಲರ್ ಕೂಡ ಇನ್ನು ಸ್ಥಗಿತಗೊಳ್ಳಲಿದೆ.



ಕಾಬೂಲ್‌ನಲ್ಲಿ ಅಮೆರಿಕ ನಡೆಸಿದ ಡ್ರೋನ್ ದಾಳಿಯಲ್ಲಿ ಹಾನಿಯಾದ ವಾಹನಗಳನ್ನು ಸ್ಥಳೀಯರು ವೀಕ್ಷಿಸಿದರು —ಎಎಫ್‌ಪಿ ಚಿತ್ರಗಳು



ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ವಿರೋಧಿ ಚಳವಳಿಯ ಹೋರಾಟಗಾರರು ಸೋಮವಾರ ಶಸ್ತ್ರಾಸ್ತ್ರ ತರಬೇತಿಯಲ್ಲಿ ಭಾಗಿಯಾಗಿದ್ದರು

ತಾಲಿಬಾನ್ ನಾಯಕತ್ವ: ಮುಂದುವರಿದ ಗೋಪ್ಯತೆ?

ಕಾಬೂಲ್ (ಎಎಫ್‌ಪಿ): ಅಫ್ಗಾನಿಸ್ತಾನದ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡಾಗಿನಿಂದ, ತಾಲಿಬಾನ್ ಪಡೆಯ ಹಲವಾರು ನಾಯಕರು, ಕಮಾಂಡೊಗಳು, ಮದರಸಾದ ಶಸ್ತ್ರಸಜ್ಜಿತ ವಿದ್ಯಾರ್ಥಿಗಳು ಹಾಗೂ ಹಲವಾರು ವರ್ಷಗಳಿಂದ ಗಡಿಪಾರಾಗಿದ್ದ ನಾಯಕರು... ಹೀಗೆ ಎಲ್ಲರೂ ಒಬ್ಬೊಬ್ಬರಾಗಿ ಕಾಬೂಲ್ ಪ್ರವೇಶಿಸುತ್ತಿದ್ದಾರೆ. ಆದರೆ, ತಾಲಿಬಾನ್‌ನ ಸರ್ವೋಚ್ಚ ನಾಯಕನೊಬ್ಬ ಮಾತ್ರ ಇದುವರೆಗೆ ಬಹಿರಂಗವಾಗಿ ಕಾಣಿಸಿಕೊಂಡಿಲ್ಲ.

ತನ್ನ ನಾಯಕನ ಚಲನವಲನದ ಬಗ್ಗೆ ಯಾವಾಗಲೂ ಗೋಪ್ಯತೆಯನ್ನು ಕಾಪಾಡಿಕೊಂಡು ಬಂದಿರುವ ತಾಲಿಬಾನ್, ಈಗಲೂ ಅದೇ ಸಂಪ್ರದಾಯ ಮುಂದುವರಿಸಿದೆ ಎನ್ನಲಾಗಿದೆ.

ಆದರೆ, ತನ್ನ ಸರ್ವೋಚ್ಚ ನಾಯಕ ಹೈಬತ್ ಉಲ್ಲಾ ಅಖುಂಜಾದಾ, ಸದ್ಯಕ್ಕೆ ಕಂದಹಾರದಲ್ಲಿರುವುದಾಗಿ ತಾಲಿಬಾನ್ ವಕ್ತಾರ ಜಬೀವುಲ್ಲಾ ಮುಜಾಹಿದ್ ಹೇಳಿದ್ದಾರೆ; ಹೈಬತ್ ಉಲ್ಲಾ ಶೀಘ್ರದಲ್ಲೇ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲಿರುವುದಾಗಿ ತಾಲಿಬಾನ್ ಭಾನುವಾರ ಹೇಳಿತ್ತು. ಇದೀಗ ತನ್ನ ನಾಯಕನ ಭಾವಚಿತ್ರವನ್ನೂ ಬಿಡುಗಡೆ ಮಾಡಿದೆ.

ಏಕಾಂತವಾಸಕ್ಕೆ ಕುಖ್ಯಾತನಾಗಿದ್ದ ತಾಲಿಬಾನ್ ಸಂಸ್ಥಾಪಕ ಮುಲ್ಲಾ ಮೊಹಮ್ಮದ್ ಒಮರ್, 1990ರಲ್ಲಿ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಡಳಿತವಿದ್ದಾಗಲೂ ಕಾಬೂಲ್‌ಗೆ ಭೇಟಿ ನೀಡಿದ್ದು ಅಪರೂಪ. ಕಂದಹಾರದಲ್ಲಿಯೇ ಇದ್ದ ಆತ ಬಹಿರಂಗವಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ. ಯಾವುದೇ ನಿಯೋಗದೊಂದಿಗೆ ಭೇಟಿಗೂ ನಿರಾಕರಿಸುತ್ತಿದ್ದ. ಆದರೆ, ಆಡಳಿತದ ವಿಚಾರದಲ್ಲಿ ಅವನ ಮಾತೇ ಅಂತಿಮವಾಗಿತ್ತು. ಆತನಂತೆಯೇ, ಹೈಬತ್ ಉಲ್ಲಾ ಕೂಡ ಏಕಾಂತವನ್ನೇ ಬಯಸುವವನು ಎನ್ನುತ್ತಾರೆ ಅಂತರರಾಷ್ಟ್ರೀಯ ಬಿಕ್ಕಟ್ಟು ನಿರ್ವಹಣಾ ಸಮಿತಿಯ ಏಷ್ಯಾ ಕಾರ್ಯಕ್ರಮದ ಮುಖ್ಯಸ್ಥ ಲಾರೆಲ್ ಮಿಲ್ಲರ್.

ತನಗಿಂತಲೂ ಮುನ್ನ ಇದ್ದ ಮುಖ್ಯಸ್ಥ ಮುಲ್ಲಾ ಅಖ್ತರ್ ಮನ್ಸೂರ್, ಅಮೆರಿಕದ ಡ್ರೋನ್ ದಾಳಿಯಲ್ಲಿ ಹತನಾಗಿದ್ದು ಕೂಡ ತಾಲಿಬಾನ್ ಮುಖ್ಯಸ್ಥರ ಬಗ್ಗೆ ಗೋಪ್ಯತೆ ಕಾಪಾಡಿಕೊಳ್ಳಲು ಕಾರಣವಾಗಿರಬಹುದು. ಅಥವಾ, ಒಮ್ಮೆ ಸಾರ್ವಜನಿಕವಾಗಿ ಕಾಣಿಸಿಕೊಂಡು ಆನಂತರ ಮುಲ್ಲಾ ಒಮರ್‌ನಂತೆಯೇ ಗೋಪ್ಯ ಸ್ಥಳದಲ್ಲಿದ್ದು ಅಧಿಕಾರ ನಡೆಸುವ ಇರಾದೆಯೂ ಇರಬಹುದು ಎನ್ನುತ್ತಾರೆ ಅವರು.

ಹೈಬತ್‌ಉಲ್ಲಾಗೆ ಆರೋಗ್ಯ ಸಮಸ್ಯೆ ಇದೆ ಎಂಬ ವದಂತಿ ದಟ್ಟವಾಗಿ ಹಬ್ಬಿದೆ. ಅವರು ಕೋವಿಡ್‌ಗೆ ಒಳಗಾಗಿದ್ದಾರೆ ಎಂದೂ ಹೇಳಲಾಗುತ್ತಿದೆ. ಬಾಂಬ್ ದಾಳಿಯಲ್ಲಿ ಮೃತಪಟ್ಟಿರಬಹುದು ಎಂಬ ಊಹಾಪೋಹವೂ ಇದೆ. ಈ ಎಲ್ಲದಕ್ಕೆ ತೆರೆ ಎಳೆಯುವುದಕ್ಕಾಗಿಯೇ ಹೈಬತ್‌ಉಲ್ಲಾ ಶೀಘ್ರವೇ ಕಾಣಿಸಿಕೊಳ್ಳಲಿದ್ದಾರೆ ಎಂದು ತಾಲಿಬಾನ್ ಹೇಳಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ತಾಲಿಬಾನ್ ಸಂಸ್ಥಾಪಕ ಮುಲ್ಲಾ ಒಮರ್ ಸಾವಿನ ಸುದ್ದಿಯನ್ನೂ ಹಲವು ವರ್ಷಗಳವರೆಗೆ ಗೋಪ್ಯವಾಗಿರಿಸಲಾಗಿತ್ತು. 2015ರಲ್ಲಿ ಸಾವಿನ ಸುದ್ದಿ ಬಹಿರಂಗವಾದಾಗ ತಾಲಿಬಾನ್ ಪಡೆಯಲ್ಲಿ ಅಧಿಕಾರಕ್ಕಾಗಿ ಸಂಘರ್ಷ ಏರ್ಪಟ್ಟಿತ್ತು. ಈ ಅಂತಃಕಲಹದ ಸಂದರ್ಭದಲ್ಲಿ, 2016ರಲ್ಲಿ ಹೈಬತ್‌ಉಲ್ಲಾ ಮುಖ್ಯಸ್ಥನಾಗಿ ಅಧಿಕಾರಕ್ಕೆ ಏರಿದ.

ಅಫ್ಗಾನಿಸ್ತಾನದಲ್ಲಿ ಸರ್ಕಾರ ರಚಿಸುವ ಸವಾಲು ಇರುವ ಈ ಹೊತ್ತಿನಲ್ಲಿ ನಾಯಕತ್ವದ ನಿರ್ವಾತದ ಬಗ್ಗೆ ಏನಾದರೂ ಮಾತನಾಡಿದರೆ, ಅದು ತನ್ನ ಚಳವಳಿಯನ್ನು ಅಸ್ಥಿರಗೊಳಿಸಬಹುದು; ದಶಕಗಳ ಹೋರಾಟ ವ್ಯರ್ಥವಾಗಲಿದೆ ಎಂಬ ಆತಂಕವೂ ತಾಲಿಬಾನ್‌ಗಿದೆ. ಹೀಗಾಗಿ ಅಮೆರಿಕದ ಸೇನೆಯ ಸಂಪೂರ್ಣ ಹಿಂದೆಗೆತದ ಕಾರ್ಯ ಪೂರ್ಣಗೊಳ್ಳುವವರೆಗೆ ಅದು ಸ್ಥೈರಣೆಯಿಂದ ಇರಬಹುದು ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

ತಾಲಿಬಾನ್‌ಗೆ ಮಾರ್ಗದರ್ಶನ: ಅಮೆರಿಕಕ್ಕೆ ಚೀನಾ ಸಲಹೆ

ಬೀಜಿಂಗ್ (ಪಿಟಿಐ): ಅಫ್ಗಾನಿಸ್ತಾನದ ಪರಿಸ್ಥಿತಿ ಮೂಲಭೂತವಾಗಿ ಬದಲಾಗುತ್ತಿದೆ. ಎಲ್ಲಾ ದೇಶಗಳೂ ತಾಲಿಬಾನ್ ಅನ್ನು ಸಂಪರ್ಕಿಸಿ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡುವ ಅಗತ್ಯವಿದೆ ಎಂದು ಚೀನಾ ಅಮೆರಿಕಕ್ಕೆ ಹೇಳಿದೆ.

ಆ.31ರ ಗಡುವಿನ ಒಳಗೆ ಆಫ್ಗನ್ ನಾಗರಿಕರನ್ನು ಮತ್ತು ರಾಯಭಾರಿಗಳನ್ನು ತೆರವುಗೊಳಿಸುವ ಕಾರ್ಯದಲ್ಲಿ ಅಮೆರಿಕ ಮತ್ತು ನ್ಯಾಟೊ ಪಡೆಗಳು ನಿರತವಾಗಿವೆ. ಐ.ಎಸ್ ದಾಳಿ ಮತ್ತು ಇತರ ಕಾರಣಗಳಿಂದಾಗಿ ಅಫ್ಗಾನಿಸ್ತಾನದ ಪರಿಸ್ಥಿತಿ ಹದಗೆಡುತ್ತಿದೆ. ಇದರ ನಡುವೆಯೇ, ಅಮೆರಿಕದ ಗೃಹ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಜೊತೆ ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ದೂರವಾಣಿ ಮೂಲಕ ಭಾನುವಾರ ಚರ್ಚೆ ನಡೆಸಿದರು ಎಂದು ಚೀನಾದ ಸರ್ಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ.

ಅಫ್ಗಾನಿಸ್ತಾನಕ್ಕೆ ತುರ್ತಾಗಿ ಆರ್ಥಿಕ, ಮಾನವೀಯ ನೆರವು ನೀಡಲು ಅಮೆರಿಕ ಇತರ ರಾಷ್ಟ್ರಗಳ ಜೊತೆ ಕೆಲಸ ಮಾಡಬೇಕು. ಸಹಜವಾಗಿ ಆಡಳಿತ ನಡೆಸಲು, ಸಾಮಾಜಿಕ ಭದ್ರತೆ ಮತ್ತು ಸ್ಥಿರತೆ ನೀಡಲು, ಹಣದುಬ್ಬರ ತಗ್ಗಿಸುವ ದಿಸೆಯಲ್ಲಿ ಅಫ್ಗಾನಿಸ್ತಾನದ ಹೊಸ ರಾಜಕೀಯ ರಚನೆಗೆ ನೆರವು ನೀಡಬೇಕು ಎಂದು ವಾಂಗ್ ಹೇಳಿದ್ದಾರೆ.

ಅಫ್ಗಾನಿಸ್ತಾನದಲ್ಲಿ ಉಗ್ರರನ್ನು ಮಟ್ಟಹಾಕುವ ಗುರಿ ಇಟ್ಟುಕೊಂಡು ನಡೆಸಲಾಗಿದ್ದ ಅಫ್ಗಾನಿಸ್ತಾನ ಯುದ್ಧದ ಉದ್ದೇಶ ಸಫಲವಾಗಲಿಲ್ಲ ಎಂಬ ನಿಜಾಂಶ ಮತ್ತೆ ಸಾಬೀತಾಗಿದೆ. ಅಮೆರಿಕ ಮತ್ತು ನ್ಯಾಟೊ, ಪಡೆಗಳನ್ನು ಹಿಂಪಡೆದಿದ್ದು ಅಫ್ಗಾನಿಸ್ತಾನದ ಉಗ್ರಪಡೆಗಳು ಮತ್ತೆ ಒಟ್ಟಾಗಲು ಅವಕಾಶ ಮಾಡಿಕೊಟ್ಟಂತಾಗಿದೆ ಎಂದಿದ್ದಾರೆ.

‘ನಿರಾಶ್ರಿತರಿಗಾಗಿ ಗಡಿ ತೆರೆದಿಡಿ’

ಜಿನೀವಾ (ರಾಯಿಟರ್ಸ್): ಅಫ್ಗಾನಿಸ್ತಾನವು ಭಾರಿ ಬಿಕ್ಕಟ್ಟಿನತ್ತ ಸಾಗುತ್ತಿದೆ. ಇಲ್ಲಿನ 3.9 ಕೋಟಿ ಜನರು ಬಹುದೊಡ್ಡ ಸಂಕಷ್ಟ ಎದುರಿಸಲಿದ್ದಾರೆ ಎಂದು ವಿಶ್ವ ಸಂಸ್ಥೆಯ ನಿರಾಶ್ರಿತ ಸಂಸ್ಥೆ (ಯುಎನ್‌ಎಚ್‌ಸಿಆರ್) ಹೇಳಿದೆ.

ಈ ವರ್ಷದ ಕೊನೆಯ ಒಳಗೆ ಸುಮಾರು 5 ಲಕ್ಷ ಜನರು ದೇಶ ಬಿಟ್ಟು ಪರಾರಿ ಆಗುವ ಸಾಧ್ಯತೆ ಇದೆ. ಈ ಜನರಿಗೆ ಎಲ್ಲರೂ ಬೆಂಬಲ ನೀಡಬೇಕು. ಅಫ್ಗಾನಿಸ್ತಾನದ ಸುತ್ತಲಿನ ದೇಶಗಳು ಮತ್ತು ಇತರ ದೇಶಗಳು ನಿರಾಶ್ರಿತರಿಗಾಗಿ ಗಡಿಗಳನ್ನು ತೆರೆದಿರಿಸಬೇಕು ಎಂದು ಯುಎನ್‌ಎಚ್‌ಸಿಆರ್ ಹೈಕಮಿಷನರ್ ಫಿಲಿಪ್ಪೊ ಗ್ರಾಂಡಿ ಹೇಳಿದ್ದಾರೆ.

ಇರಾನ್ ಮತ್ತು ಪಾಕಿಸ್ತಾನ ದೇಶಗಳು ಅಫ್ಗಾನಿಸ್ತಾನದ 22 ಲಕ್ಷ ನಿರಾಶ್ರಿತರಿಗೆ ಆಶ್ರಯ ಕೊಟ್ಟಿವೆ. ಬೇರೆ ದೇಶಗಳೂ ಈ ದಿಸೆಯಲ್ಲಿ ಯೋಚಿಸಬೇಕು ಎಂದು ಅವರು ಹೇಳಿದ್ದಾರೆ.

ಅಮೆರಿಕ ಸೇಡಿಗೆ ತಾಲಿಬಾನ್ ಕಿಡಿಕಿಡಿ

ಐಎಸ್‌-ಕೆ ಉಗ್ರರು ಎಂದು ಶಂಕಿಸಿ ಅಮೆರಿಕ ನಡೆಸಿದ ಡ್ರೋನ್ ದಾಳಿಯಲ್ಲಿ ನಾಗರಿಕರು ಬಲಿಯಾಗಿದ್ದಾರೆ. ಈ ದಾಳಿಯ ಬಗ್ಗೆ ತಮಗೆ ಮಾಹಿತಿಯನ್ನೂ ನೀಡಿಲ್ಲ ಎಂದು ತಾಲಿಬಾನ್ ಆಕ್ರೋಶ ವ್ಯಕ್ತಪಡಿಸಿದೆ. ದಾಳಿಯನ್ನು ಖಂಡಿಸಿದೆ.

ವಿದೇಶಿ ನೆಲದಲ್ಲಿ ಅಮೆರಿಕದ ಕಾರ್ಯಾಚರಣೆಯು ಕಾನೂನುಬಾಹಿರ. ಭಾನುವಾರ ನಡೆಸಿದ ಡ್ರೋನ್ ದಾಳಿಯಲ್ಲಿ ಏಳು ನಾಗರಿಕರು ಮೃತಪಟ್ಟಿದ್ದಾರೆ ಎಂದು ತಾಲಿಬಾನ್ ವಕ್ತಾರ ಝಬೀವುಲ್ಲಾ ಮುಜಾಹಿದ್ ಹೇಳಿದ್ದಾರೆ.

‘ಅಫ್ಗಾನಿಸ್ತಾನಕ್ಕೆ ಯಾವುದೇ ಅಪಾಯ ಇದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕು. ಅದರ ಬದಲಿಗೆ ಸ್ವೇಚ್ಛೆಯಿಂದ ನಡೆಸಿದ ದಾಳಿಯಲ್ಲಿ ನಾಗರಿಕರು ಸತ್ತಿದ್ದಾರೆ’ ಎಂದು ಚೀನಾದ ಸಿಜಿಟಿಎನ್ ಸುದ್ದಿವಾಹಿನಿಗೆ ಅವರು ಹೇಳಿದ್ದಾರೆ.

ನಂಗರ್‌ಹರ್ ಪ್ರಾಂತ್ಯದಲ್ಲಿಯೂ ಅಮೆರಿಕವು ಶನಿವಾರ ಡ್ರೋನ್ ದಾಳಿ ನಡೆಸಿ ಇಸ್ಲಾಮಿಕ್ ಸ್ಟೇಟ್‌ನ ಇಬ್ಬರು ಉಗ್ರರನ್ನು ಹತ್ಯೆ ಮಾಡಿತ್ತು. ಈ ದಾಳಿಯನ್ನೂ ತಾಲಿಬಾನ್ ಖಂಡಿಸಿದೆ. ಅಮೆರಿಕದ ದಾಳಿಯಲ್ಲಿ ಇಬ್ಬರು ಮಹಿಳೆಯರು ಮತ್ತು ಒಂದು ಮಗು ಮೃತಪಟ್ಟಿದೆ ಎಂದು ತಾಲಿಬಾನ್ ಹೇಳಿದೆ.


ಇ.ಡಿ ವಿರುದ್ಧ ಶಿವಸೇನಾ ಸಂಸದ ವ್ಯಂಗ್ಯ

‘ಜಾರಿ ನಿರ್ದೇಶನಾಲಯವು(ಇಡಿ) ರಾಜಕೀಯ ನಾಯಕರಿಗೆ ಜಾರಿಗೊಳಿಸಿರುವ ನೋಟಿಸ್ ‘ಡೆತ್ ವಾರೆಂಟ್’ ಅಲ್ಲ. ಅದು ಪ್ರೇಮ ಪತ್ರ’

ಇ.ಡಿಯಿಂದ ರಾಜಕೀಯ ನಾಯಕರಿಗೆ ‘ಪ್ರೇಮ ಪತ್ರ’: ಸಂಜಯ್ ರಾವುತ್

ಮುಂಬೈ: ಜಾರಿ ನಿರ್ದೇಶನಾಲಯವು(ಇ.ಡಿ) ರಾಜಕೀಯ ನಾಯಕರಿಗೆ ಜಾರಿಗೊಳಿಸಿರುವ ನೋಟಿಸ್ ‘ಡೆತ್ ವಾರಂಟ್’ ಅಲ್ಲ. ಅದು ‘ಪ್ರೇಮ ಪತ್ರ’ ಎಂದು ಶಿವಸೇನಾ ಸಂಸದ ಸಂಜಯ್ ರಾವುತ್ ಅವರು ಸೋಮವಾರ ವ್ಯಂಗ್ಯವಾಡಿದ್ದಾರೆ.

ಶಿವಸೇನಾ ನಾಯಕ ಮತ್ತು ಮಹಾರಾಷ್ಟ್ರ ಸಚಿವ ಅನಿಲ್ ಪರಬ್‌ಗೆ ಇ.ಡಿಯು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದೆ. ಇದರ ಬೆನ್ನಲ್ಲೇ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ರಾವುತ್ ಅವರು,‘ ಮಹಾ ವಿಕಾಸ್ ಆಘಾಡಿ’ಯ (ಎಂವಿಎ) ಬಲಿಷ್ಠ ಗೋಡೆಯನ್ನು ಒಡೆಯುವ ಪ್ರಯತ್ನಗಳು ವಿಫಲವಾದ ನಂತರ ಇಂತಹ ಪ್ರೇಮ ಪತ್ರಗಳ ಸಂಖ್ಯೆಯು ಹೆಚ್ಚಿದೆ’ ಎಂದು ಹೇಳಿದರು.



ಸಂಜಯ್ ರಾವುತ್

‘ಬಿಜೆಪಿ ನಾಯಕರು ಪರಬ್ ಅವರನ್ನು ಗುರಿಯಾಗಿಸಿಕೊಂಡಿದ್ದಾರೆ. ಪರಬ್ ಅವರು ನೋಟಿಸ್‌ಗೆ ಪ್ರತಿಕ್ರಿಯಿಸಲಿದ್ದಾರೆ ಮತ್ತು ಇ.ಡಿಗೆ ಸಹಕರಿಸಲಿದ್ದಾರೆ’ ಎಂದು ರಾವುತ್ ವರದಿಗಾರರಿಗೆ ತಿಳಿಸಿದರು.

ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಸೇರಿದಂತೆ ಇತರರ ವಿರುದ್ಧದ ಇ.ಡಿಯು ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿಯು ಪರಬ್‌ಗೆ ಮಂಗಳವಾರ ಸಮನ್ಸ್ ಜಾರಿ ಮಾಡಿದೆ. ‘ಇ.ಡಿ ಕಚೇರಿಯಲ್ಲಿ ಬಿಜೆಪಿಗೆ ಸೇರಿದ ವ್ಯಕ್ತಿ ಕೆಲಸ ಮಾಡುತ್ತಿದ್ದಾರೆ. ಇಲ್ಲವಾದ್ದಲ್ಲಿ ಇ.ಡಿ ಅಧಿಕಾರಿ ಬಿಜೆಪಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ’ ಎಂದು ಅವರು ಲೇವಡಿ ಮಾಡಿದರು.


ಮೊಡೆರ್ನಾ ಲಸಿಕೆ: ಮತ್ತೆ ಕಲ್ಮಶ ಪತ್ತೆ

ಟೋಕಿಯೊ (ರಾಯಿಟರ್ಸ್): ಮೊಡೆರ್ನಾ ಐಎನ್‌ಸಿಸ್ ಕೋವಿಡ್‌–19 ಲಸಿಕೆಗಳಲ್ಲಿ ಕಲ್ಮಶ ಕಂಡುಬಂದಿದ್ದ ಕಾರಣ ಜಪಾನ್ ಹಲವಾರು ಡೋಸ್ ಲಸಿಕೆಗಳನ್ನು ತಡೆಹಿಡಿದಿತ್ತು. ಈಗ ಆ ಸಮಸ್ಯೆ ಮತ್ತಷ್ಟು ದೊಡ್ಡದಾಗಿದೆ. ಲಸಿಕೆಯ ಹಲವು ತಂಡಗಳಲ್ಲೂ ಕಲ್ಮಶಗಳು ಕಂಡುಬಂದಿರುವ ಮತ್ತು ಇಬ್ಬರು ಮೃತಪಟ್ಟಿರುವ ಕಾರಣ ಸುಮಾರು 10 ಲಕ್ಷ ಲಸಿಕೆಗಳನ್ನು ತಡೆ ಹಿಡಿಯಲಾಗಿದೆ.

ಈವರೆಗೂ ಒಟ್ಟು 26 ಲಕ್ಷ ಡೋಸ್ ಲಸಿಕೆಗಳನ್ನು ತಡೆ ಹಿಡಿದಂತಾಗಿದೆ.

ಡೆಲ್ಟಾ ತಳಿಯಿಂದ ಉಂಟಾಗಿರುವ ಅತ್ಯಂತ ಅಪಾಯಕಾರಿ ಕೋವಿಡ್ ಅಲೆಯ ಜೊತೆ ಜಪಾನ್ ಹೋರಾಟ ಮಾಡುತ್ತಿರುವಾಗಲೇ ಈ ಬೆಳವಣಿಗೆಗಳು ನಡೆದಿವೆ. ನಿಧಾನ ಗತಿಯ ಲಸಿಕೆ ಅಭಿಯಾನದ ನಡುವೆ ಪ್ರತಿ ದಿನ ಜಪಾನ್‌ನಲ್ಲಿ ಸೋಂಕಿತರ ಸಂಖ್ಯೆ 25,000 ಮೀರುತ್ತಿದೆ.

ಮುಖ್ಯಾಂಶಗಳು
- **ಲಸಿಕೆಯಿಂದ ಇಬ್ಬರು ಮೃತಪಟ್ಟ ಶಂಕೆ**
- **ಸುಮಾರು 26 ಲಕ್ಷ ಡೋಸ್ ಲಸಿಕೆಗೆ ತಡೆ**



ಗುನ್ಮ ಮತ್ತು ಓಕಿನಾವ ಪ್ರಾಂತ್ಯದಲ್ಲಿ ಬಳಸಲು ಉದ್ದೇಶಿಸಿದ್ದ ಲಸಿಕೆಯಲ್ಲಿ ಕಲ್ಮಶ ಪತ್ತೆಯಾಗಿದೆ ಎಂದು ಭಾನುವಾರ ವರದಿಯಾಗಿದೆ. ಗುನ್ಮದಲ್ಲಿ ಲಸಿಕೆಯ ಶೀಶೆಯಲ್ಲಿ ಚಿಕ್ಕದಾದ ಕಪ್ಪು ವಸ್ತು ಪತ್ತೆಯಾಗಿದೆ. ಓಕಿನಾವದಲ್ಲಿ ಸಿರಿಂಜ್ ಮತ್ತು ಒಂದು ಶೀಶೆಯಲ್ಲಿ ಕಪ್ಪು ವಸ್ತು ಕಂಡಬಂದಿದೆ. ಮತ್ತೊಂದು ಸಿರಿಂಜ್‌ನಲ್ಲಿ ಗುಲಾಬಿ ಬಣ್ಣದ ವಸ್ತು ಕಂಡುಬಂದಿದೆ ಎಂದು ಪ್ರಾಂತ್ಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಿರಿಂಜ್‌ಗಳನ್ನು ಶೀಶೆಗೆ ಸರಿಯಾದ ಕ್ರಮದಲ್ಲಿ ಹಾಕದಿದ್ದಾಗ ಅಥವಾ ಶೀಶೆಗಳ ರಬ್ಬರ್ ಬುರುಡೆಗಳನ್ನು ತೆಗೆಯುವ ಕ್ರಮದಲ್ಲಿ ವ್ಯತ್ಯಾಸವಾಗಿ ಈ ರೀತಿ ಕಲ್ಮಶಗಳು ಕಂಡು ಬಂದಿರಬಹುದು. ಬೇರೆ ಶೀಶೆಗಳಲ್ಲಿರುವ ಲಸಿಕೆಯನ್ನು ಬಳಸಬಹುದು ಎಂದು ಜಪಾನ್ ಆರೋಗ್ಯ ಸಚಿವರು ಸೋಮಮವಾರ ಹೇಳಿದ್ದಾರೆ.

ಸುರಕ್ಷತೆ ಮತ್ತು ದಕ್ಷತೆ ಕುರಿತು ಯಾವುದೇ ಅನುಮಾನ ಮೂಡಿಲ್ಲ. ಲಸಿಕೆಗಳನ್ನು ತಡೆ ಹಿಡಿದಿರುವುದು ಮುನ್ನೆಚ್ಚರಿಕಾ ಕ್ರಮವಾಗಿ ಎಂದು ಜಪಾನ್ ಸರ್ಕಾರ ಹೇಳಿದೆ. ಲಸಿಕೆಯಲ್ಲಿ ಕಲ್ಮಶ ಇದ್ದ ಕಾರಣ ಸಾವು ಸಂಭವಿಸುವುದಿಲ್ಲ ಎಂದು ಲಸಿಕೆ ಮಾಹಿತಿ ತಂಡದ ಉಪಾಧ್ಯಕ್ಷ ತಾಕಹಿರೊ ಕಿನೊಶಿತ ಹೇಳಿದ್ದಾರೆ.

ಮಹಾರಾಷ್ಟ್ರ: ಪರಬ್ ಕಚೇರಿ ಮೇಲೆ ದಾಳಿ

ಮುಂಬೈ: ಮಹಾರಾಷ್ಟ್ರದ ಸಾರಿಗೆ ಸಚಿವ ಅನಿಲ್ ಪರಬ್ ಮತ್ತು ಶಿವಸೇನಾ ಸಂಸದೆ ಭಾವನಾ ಗವಳಿ ಅವರಿಗೆ ಸಂಬಂಧಿಸಿದ ವಿವಿಧ ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯದ(ಇ.ಡಿ) ಅಧಿಕಾರಿಗಳು ಸೋಮವಾರ ದಾಳಿ ನಡೆಸಿದ್ದಾರೆ.

ಮುಂಬೈ ಮತ್ತು ವಿದರ್ಭ ಪ್ರದೇಶದ ವಿವಿಧೆಡೆ ಈ ದಾಳಿ ನಡೆಸಲಾಗಿದೆ. ಮಂಗಳವಾರ ಜಾರಿ ನಿರ್ದೇಶನಾಲಯದ ಮುಂಬೈ ಕಚೇರಿಯಲ್ಲಿ ಹಾಜರಾಗುವಂತೆ ಪರಬ್ ಅವರಿಗೆ ಸೂಚಿಸಲಾಗಿದೆ.

ಪರಬ್ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಆಪ್ತರಾಗಿದ್ದು, ಮಹಾ ವಿಕಾಸ್ ಅಘಾಡಿ ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕೇಂದ್ರ ಸಚಿವ ನಾರಾಯಣ್ ರಾಣೆ ಅವರನ್ನು ಬಂಧಿಸುವಂತೆ ಪೊಲೀಸ್‌ರಿಗೆ ಸೂಚನೆ ನೀಡುತ್ತಿರುವ ವಿಡಿಯೊ ದೃಶ್ಯಾಳಿಗಳು ಕಳೆದ ವಾರ ಹರಿದಾಡಿದ್ದವು.

ಭಾವನಾ ಗವಳಿ ಅವರು ಐದು ಬಾರಿ ಸಂಸದರಾಗಿದ್ದಾರೆ. ವಾಶೀಂನಲ್ಲಿರುವ ಬಿಎಎಂಎಸ್ ಕಾಲೇಜು, ಮಹಿಳಾ ಉತ್ಕರ್ಷ ಪ್ರತಿಷ್ಠಾನ ಸೇರಿದಂತೆ ಹಲವೆಡೆ ಇ.ಡಿ. ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ನಿತೀಶ್ ಪ್ರಧಾನಿ ಅಭ್ಯರ್ಥಿ ಜೆಡಿಯು ಪ್ರತಿಪಾದನೆ

ಪಟ್ನಾ: ಬಿಹಾರ ಮುಖ್ಯಮಂತ್ರಿ ಮತ್ತು ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರಿಗೆ ಪ್ರಧಾನಿಯಾಗುವ ಸಾಮರ್ಥ್ಯವಿದೆ ಎಂದು ಪಕ್ಷವು ಪ್ರತಿಪಾದಿಸಿದೆ.



ಒಂದು ತಿಂಗಳ ಅವಧಿಯಲ್ಲಿ ಜೆಡಿಯು ಇದೇ ಮಾತನ್ನು ಎರಡು ಬಾರಿ ಹೇಳಿದೆ. ಆಗಸ್ಟ್ 1ರಂದು ಉಪೇಂದ್ರ ಕುಶ್ವಾಹ ಅವರು, ‘ನಿತೀಶ್ ಪ್ರಧಾನಿ ಆಗುವುದಾದರೆ, ಸಂಖ್ಯಾಬಲ ಒಂದು ಸಮಸ್ಯೆಯೇ ಅಲ್ಲ’ ಎಂದು ಹೇಳಿದ್ದರು.

ಸೋಮವಾರ ಇಲ್ಲಿ ನಡೆದ ಪಕ್ಷದ ರಾಷ್ಟ್ರೀಯ ಸಮಾಲೋಚನಾ ಸಮಿತಿ ಸಭೆಯಲ್ಲಿ, ಜೆಡಿಯು ಪ್ರಧಾನ ಕಾರ್ಯದರ್ಶಿ ಕೆ.ಸಿ. ತ್ಯಾಗಿ ಅವರು, ‘ನಿತೀಶ್ ಕುಮಾರ್ ಅವರು ಪ್ರಧಾನಿ ಅಭ್ಯರ್ಥಿ ಅಲ್ಲ. ಆದರೆ ಅವರಿಗೆ ಆ ಸಾಮರ್ಥ್ಯವಿದೆ.’ ಎಂದು ಹೇಳಿದ್ದಾರೆ.

ಈ ಮೂಲಕ ಎನ್‌ಡಿಎಯಲ್ಲಿನ ಬಿರುಕು ಮತ್ತು ನಿತೀಶ್ ಕುಮಾರ್ ಅವರ ಮುಂದಿನ ಕಾರ್ಯಯೋಜನೆಗಳ ಬಗ್ಗೆ ಪಕ್ಷವು ಸುಳಿವು ನೀಡುತ್ತಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. 2015-16ರ ಸಮಯದಲ್ಲಿ ನಿತೀಶ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರತಿಸ್ಪರ್ಧಿ ಎಂದು ಬಿಂಬಿಸಲಾಗಿತ್ತು. ನಂತರ ಅವರು ವಿರೋಧ ಪಕ್ಷಗಳ ಮಹಾ ಮೈತ್ರಿಯನ್ನು ತೊರೆದು, ಬಿಜೆಪಿ ನೇತೃತ್ವದ ಎನ್‌ಡಿಎ ಸೇರಿದರು. ಈಗ ಬಿಹಾರದಲ್ಲಿ ಎನ್‌ಡಿಎ ಸರ್ಕಾರವೇ ಇದೆ.

> **ಯಾರಾದರೂ ಪ್ರಧಾನಿ ಆಗಬೇಕೆಂದರೆ 272 ಸಂಸದರ ಬೆಂಬಲ ಬೇಕು. ಜೆಡಿಯುನಿಂದ ಅಷ್ಟೊಂದು ಸಂಸದರು ಆಯ್ಕೆಯಾಗಿ ಬರುವ ಸಾಧ್ಯತೆಯೇ ಇಲ್ಲ**
> **ಬಿಹಾರ ಬಿಜೆಪಿ ಘಟಕ**


> **ಜನರು ಈಗ ಕಪೋಲಕಲ್ಪಿತ ಭವಿಷ್ಯದ ಬಗ್ಗೆ ಹೆಚ್ಚು ಮಾತನಾಡುತ್ತಿದ್ದಾರೆ. ಅದು ಸಾಧ್ಯವಾಗುತ್ತದೆ ಎಂದಾದರೆ, ಅಸಾಧ್ಯವಾದುದು ಯಾವುದೂ ಇಲ್ಲ**
> **ಉಪೇಂದ್ರ ಕುಶ್ವಾಹ,** ಜೆಡಿಯು ನಾಯಕ

ಆದರೆ, ಜೆಡಿಯು ಹಲವು ವಿಚಾರಗಳಲ್ಲಿ ಬಿಜೆಪಿಯ ನಿಲುವುಗಳಿಗೆ ವಿರುದ್ಧವಾದ ನಿಲುವುಗಳನ್ನು ಪ್ರತಿಪಾದಿಸಿದೆ. ಬಿಜೆಪಿಯಿಂದ ಅಂತರ ಕಾಯ್ದುಕೊಳ್ಳಲು ಜೆಡಿಯು ಯತ್ನಿಸುತ್ತಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

‘ನಿತೀಶ್ ಪ್ರಧಾನಿ ಮೆಟೀರಿಯಲ್’ ಎಂಬ ಹೇಳಿಕೆಯಿಂದ ಬಿಹಾರ ಬಿಜೆಪಿ ನಾಯಕರಿಗೆ ಕಿರಿಕಿರಿಯಾಗಿದೆ. ಬಿಹಾರ ಬಿಜೆಪಿಯು, ‘ಜೆಡಿಯು ಕನಸು ಕಾಣಬಾರದು’ ಎಂದು ಹೇಳಿದೆ. ಜೆಡಿಯು ಸಹ ಅದಕ್ಕೆ ಖಾರವಾಗಿಯೇ ಪ್ರತಿಕ್ರಿಯೆ ನೀಡಿದೆ.

ರೈತರ ಪ್ರತಿಭಟನೆ: ಪಂಜಾಬ್, ಹರಿಯಾಣ ಸಿ.ಎಂಗಳ ವಾಗ್ವಾದ

ನವದೆಹಲಿ: ಕೃಷಿ ಕಾಯ್ದೆಗಳನ್ನು ವಿರೋಧಿಸಿ ಕರ್ನಾಲ್‌ನಲ್ಲಿ ರೈತರು ನಡೆಸಿದ ಪ್ರತಿಭಟನೆ ವಿಷಯ ಈಗ ಪಂಜಾಬ್ ಮತ್ತು ಹರಿಯಾಣ ಮುಖ್ಯಮಂತ್ರಿಗಳ ವಾಗ್ವಾದಕ್ಕೆ ಕಾರಣವಾಗಿದೆ.



ಮನೋಹರ್



ಅಮರಿಂದ್ರ ಸಿಂಗ್

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ರೈತರ ವಿರುದ್ಧ ಕಠಿಣ ಕ್ರಮ ಅಗತ್ಯವಾಗಿತ್ತು ಎಂದು ಹೇಳಿಕೆ ನೀಡಿರುವ ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪಂಜಾಬ್ ಮುಖ್ಯಮಂತ್ರಿ ಅಮರಿಂದ್ರ ಸಿಂಗ್ ಒತ್ತಾಯಿಸಿದ್ದಾರೆ.

‘ಹರಿಯಾಣದ ಬಿಜೆಪಿ–ಜೆಜೆಪಿ ಸರ್ಕಾರ ರೈತ ವಿರೋಧಿಯಾಗಿದೆ. ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿರುವವರ ಮೇಲೆ ಸರ್ಕಾರವೇ ಪೊಲೀಸ್‌ರಿಂದ ಹಲ್ಲೆ ನಡೆಸಿದೆ.’ ಎಂದು ಕಿಡಿಕಾರಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಖಟ್ಟರ್ ಅವರು, ‘ನನ್ನ ರಾಜೀನಾಮೆ ಕೇಳಲು ಅವರು ಯಾರು? ದೆಹಲಿಯಲ್ಲಿ ಪಂಜಾಬ್ ರೈತರು ಪ್ರತಿಭಟನೆ ಮಾಡುತ್ತಿರುವುದರಿಂದ ಅವರೇ ರಾಜೀನಾಮೆ ನೀಡಲಿ’ ಎಂದು ಹೇಳಿದ್ದಾರೆ.’

ಸಂಕ್ಷಿಪ್ತ ಸುದ್ದಿ

ಉ.ಪ್ರ: ಕಾಂಗ್ರೆಸ್‌ಗೆ ಇಬ್ಬರು ಹಿರಿಯ ನಾಯಕರ ರಾಜೀನಾಮೆ

ಬಲಿಯಾ (ಉತ್ತರ ಪ್ರದೇಶ): ಎಐಸಿಸಿ ಸದಸ್ಯರಾಗಿದ್ದ ಉತ್ತರ ಪ್ರದೇಶದ ಇಬ್ಬರು ಹಿರಿಯ ಕಾಂಗ್ರೆಸ್ ಮುಖಂಡರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ಶೈಲೇಂದ್ರ ಸಿಂಗ್ ಮತ್ತು ರಾಜೇಶ್ ಸಿಂಗ್ ರಾಜೀನಾಮೆ ನೀಡಿದ ಮುಖಂಡರು. ಭಾನುವಾರ ತಮ್ಮ ರಾಜೀನಾಮೆ ಪತ್ರವನ್ನು ಉತ್ತರ ಪ್ರದೇಶ ಕಾಂಗ್ರೆಸ್ ಸಮಿತಿ (ಯುಪಿಸಿಸಿ) ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ಅವರಿಗೆ ಕಳುಹಿಸಿದ್ದಾರೆ.

ಹೋಟೆಲ್‌ಗೆ ಹಿಂದೂ ಹೆಸರಿಟ್ಟಿದ್ದಕ್ಕೆ ಬೆದರಿಕೆ: ಬಂಧನ

ಮಥುರಾ (ಪಿಟಿಐ): ದೋಸೆ ಮಾರಾಟ ಅಂಗಡಿಗೆ ಹಿಂದೂ ದೇವರ ಹೆಸರು ಇಟ್ಟಿದ್ದ ಮುಸಲ್ಮಾನ ವ್ಯಕ್ತಿಗೆ ಬೆದರಿಕೆ ಒಡ್ಡಿದ ಆರೋಪದಡಿ ಪೊಲೀಸರು ವ್ಯಕ್ತಿಯೊಬ್ಬನನ್ನು ಬಂಧಿಸಿದ್ದಾರೆ.ಬಂಧಿತ ಶ್ರೀಕಾಂತ್ ಇಲ್ಲಿನ ಚಂದ್ರಲೋಕ ಬಡಾವಣೆಯ ನಿವಾಸಿ. ಆತ ತನ್ನ ತಪ್ಪು ಒಪ್ಪಿಕೊಂಡಿದ್ದಾನೆ ಎಂದು ಕೊತ್ವಾರಿ ಠಾಣೆಯ ಅಧಿಕಾರಿ ತಿಳಿಸಿದ್ದಾರೆ.

ತಿರಂಗಾ ಯಾತ್ರೆ: ಎಎಪಿಯ ಮುಖಂಡರ ವಿರುದ್ಧ ದೂರು

ಆಗ್ರಾ (ಪಿಟಿಐ): ತಿರಂಗಾ ಯಾತ್ರೆ ಕೈಗೊಂಡಿದ್ದ ವೇಳೆ ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿದ ಆರೋಪದಡಿ ಆಮ್ ಆದ್ಮಿ ಪಕ್ಷದ 17 ಮುಖಂಡರ ವಿರುದ್ಧ ಉತ್ತರಪ್ರದೇಶದ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ದೆಹಲಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯ, ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಇವರಲ್ಲಿ ಸೇರಿದ್ದಾರೆ. ಭಾನುವಾರ ನಡೆದ ಯಾತ್ರೆಯಲ್ಲಿ ಸುಮಾರು 500 ಜನ ಭಾಗವಹಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. 50 ಜನರ ಉಪಸ್ಥಿತಿಯಲ್ಲಿ, ಕೋವಿಡ್ ಮಾರ್ಗಸೂಚಿಯಡಿ ತಿರಂಗಾ ಯಾತ್ರೆ ಆಯೋಜಿಸಲು ಅನುಮತಿ ಪಡೆಯಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಪಶ್ಚಿಮಬಂಗಾಳ: ಬಿಜೆಪಿ ಶಾಸಕ ಟಿಎಂಸಿಗೆ ಸೇರ್ಪಡೆ

ಕೋಲ್ಕತ್ತ (ಪಿಟಿಐ): ವಿಷ್ಣುಪುರದ ಶಾಸಕ ತನ್ಮಯ್ ಘೋಷ್ ಅವರು ಸೋಮವಾರ ಬಿಜೆಪಿ ತೊರೆದು ತೃಣಮೂಲ ಕಾಂಗ್ರೆಸ್ ಸೇರ್ಪಡೆಯಾದರು.ಸುದ್ದಿಗಾರರೊಂದಿಗೆ ಮಾತನಾಡಿದ ಘೋಷ್, ‘ಬಿಜೆಪಿ ಸೇಡು ತೀರಿಸಿಕೊಳ್ಳುವ ರಾಜಕೀಯದಲ್ಲಿ ತೊಡಗಿದೆ. ಪಶ್ಚಿಮ ಬಂಗಾಳದ ಜನರಲ್ಲಿ ಗೊಂದಲ ಸೃಷ್ಟಿಸಲು ಪ್ರಯತ್ನಿಸುತ್ತಿದೆ’ ಎಂದು ಆರೋಪಿಸಿದರು.

‘ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ಕೈಗಳನ್ನು ಬಲಪಡಿಸುವ ಅವಶ್ಯಕತೆ ಇದೆ. ಪಶ್ಚಿಮ ಬಂಗಾಳದ ಕಲ್ಯಾಣಕ್ಕಾಗಿ ಟಿಎಂಸಿ ಸೇರುವಂತೆ ಎಲ್ಲರಿಗೂ ನಾನು ಮನವಿ ಮಾಡುತ್ತೇನೆ’ ಎಂದರು.

ನಾರಾಯಣ ರಾಣೆ ವಿಚಾರಣೆಗೆ ಗೈರು

ಅಲಿಬಾಗ್: ‘ಅನಾರೋಗ್ಯದ ಕಾರಣ ಕೇಂದ್ರ ಸಚಿವ ನಾರಾಯಣ ರಾಣೆ ಅವರಿಗೆ ವಿಚಾರಣೆಗೆ ಹಾಜರಾಗಲು ಸಾಧ್ಯವಾಗಿಲ್ಲ’ ಎಂದು ರಾಣೆ ಪರ ವಕೀಲ ಸಂದೇಶ್ ಚಿಕ್ನೆ ಅವರು ತಿಳಿಸಿದ್ದಾರೆ. ರಾಣೆ ಪರವಾಗಿ ವಕೀಲ ಸಂದೇಶ್ ಚಿಕ್ನೆ ಅವರು ಸ್ಥಳೀಯ ಅಪರಾಧ ವಿಭಾಗದ ಇನ್‌ಸ್ಪೆಕ್ಟರ್ ದಯಾನಂದ ಗಾವಡೆ ಅವರ ಕಚೇರಿಗೆ ಹಾಜರಾಗಿದ್ದರು.

ರಾಣೆ ಅವರ ಆರೋಗ್ಯ ಸರಿಯಿಲ್ಲ. ಹಾಗಾಗಿ ಅವರಿಗೆ ಬರಲು ಸಾಧ್ಯವಾಗಿಲ್ಲ ಎಂದು ಅವರು ಪೊಲೀಸರಿಗೆ ತಿಳಿಸಿದರು. ಸಂದೇಶ್ ಚಿಕ್ನೆ ಅವರ ಜತೆಗೆ ಕೆಲವು ಬಿಜೆಪಿ ನಾಯಕರೂ ಬಂದಿದ್ದರು.

‘ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಕೆನ್ನೆಗೆ ಬಾರಿಸುತ್ತೇನೆ’ ಎಂದು ಹೇಳಿಕೆ ನೀಡಿದ್ದ ರಾಣೆ ಅವರನ್ನು ಮಂಗಳವಾರ ಮಧ್ಯಾಹ್ನ ಬಂಧಿಸಲಾಗಿತ್ತು..

ಬಾಲಕಿ ಗರ್ಭಿಣಿ ಪ್ರಕರಣ: ಯುವಕನ ಮೇಲೆ ಅತ್ಯಾಚಾರ ಆರೋಪ

ಡಿಎನ್‌ಎ ಪರೀಕ್ಷೆ: ಸುಳ್ಳು ಸಾಬೀತು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಬಾಲಕಿ ಮೇಲೆ ಅತ್ಯಾಚಾರವೆಸಗಿ, ಗರ್ಭಿಣಿಯಾಗಲು ಕಾರಣನಾಗಿದ್ದಾನೆ ಎನ್ನುವ ಆರೋಪದ ಮೇಲೆ ಯುವಕನೊಬ್ಬ 35 ದಿನಗಳ ಜೈಲು ವಾಸ ಅನುಭವಿಸಿದ ಘಟನೆ ಕೇರಳದಲ್ಲಿ ನಡೆದಿದೆ. ಆದರೆ, ಡಿಎನ್‌ಎ ಪರೀಕ್ಷೆಯಲ್ಲಿ ಬಾಲಕಿ ಗರ್ಭಿಣಿಯಾಗಲು ಈತ ಕಾರಣ ಅಲ್ಲ ಎನ್ನುವುದು ಸಾಬೀತಾಗಿದ್ದರಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಲಪ್ಪುರಂ ಜಿಲ್ಲೆಯ 18 ವರ್ಷದ ಯುವಕ ಶ್ರೀನಾಥ್ ಎಂಬಾತನನ್ನು ಬಂಧಿಸಲಾಗಿತ್ತು. ಈತನ ಮನೆ ಸಮೀಪದ ಪ್ರದೇಶದಲ್ಲಿದ್ದ 17 ವರ್ಷದ ಬಾಲಕಿ ಮಾಡಿದ ಆರೋಪದ ಕಾರಣಕ್ಕೆ ಪೊಲೀಸರು ಕಳೆದು ತಿಂಗಳು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದರು. ಪೊಕ್ಸೊ ಕಾಯ್ದೆ ಅಡಿಯಲ್ಲಿ ಈ ಪ್ರಕರಣ ದಾಖಲಾಗಿದ್ದರಿಂದ ಯುವಕನಿಗೆ ಜಾಮೀನು ದೊರೆತಿರಲಿಲ್ಲ. ಆದರೆ, ತಾನು ತಪ್ಪು ಮಾಡಿಲ್ಲ ಎಂದು ಶ್ರೀನಾಥ್ ಪ್ರತಿಪಾದಿಸಿದ್ದ. ಹೀಗಾಗಿ, ಡಿಎನ್‌ಎ ಪರೀಕ್ಷೆ ಕೈಗೊಳ್ಳಲಾಗಿತ್ತು. ಬಾಲಕಿ ಗರ್ಭಿಣಿಯಾಗಲು ಶ್ರೀನಾಥ್ ಕಾರಣ ಅಲ್ಲ ಎನ್ನುವುದು ಪರೀಕ್ಷೆಯಲ್ಲಿ ಗೊತ್ತಾಗಿದ್ದರಿಂದ ನ್ಯಾಯಾಲಯ ಜಾಮೀನು ನೀಡಿದೆ.

‘ಕಾರ್ಮಿಕರ ಕುಟುಂಬದ ಶ್ರೀನಾಥ್ 12ನೇ ತರಗತಿ ಓದುತ್ತಿದ್ದಾನೆ. ಇಂತಹ ಸುಳ್ಳು ಆರೋಪ ಜೀವನವನ್ನೇ ಹಾಳು ಮಾಡುತ್ತದೆ. ಆರೋಪಗಳು ಬಂದ ಮೇಲೆ ಹಲವರು ಕುಟುಂಬದಿಂದ ದೂರವಾಗಿದ್ದಾರೆ’ ಎಂದು ಶ್ರೀನಾಥ್ ಅವರ ಚಿಕ್ಕಪ್ಪ ಸುರೇಶ್ ಕುಮಾರ್ ತಿಳಿಸಿದ್ದಾರೆ.


‘ಬಾಲಕಿ ಆರೋಪ ಮಾಡಿದ ಮೇಲೆ ಪೊಲೀಸರು ತಾಳ್ಮೆಯಿಂದ ಪರಿಶೀಲನೆ ಕೈಗೊಂಡಿದ್ದರೆ ನಮಗೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಶ್ರೀನಾಥ್ ಬಲವಂತದಿಂದ ಆಕೆಯನ್ನು ಮನೆಗೆ ಕರೆದೊಯ್ದು ಅತ್ಯಾಚಾರವೆಸಗಿದ ಎಂದು ಬಾಲಕಿ ಆರೋಪಿಸಿದ್ದಳು. ಬಾಲಕಿ ಭಾನುವಾರ ಈ ಕೃತ್ಯ ನಡೆದಿದೆ ಎಂದು ತಿಳಿಸಿದ್ದಳು. ಆದರೆ, ಸಾಮಾನ್ಯವಾಗಿ ಭಾನುವಾರ ಮನೆಯಲ್ಲಿ ಕುಟುಂಬದ ಇತರ ಸದಸ್ಯರು ಸಹ ಇರುತ್ತಾರೆ’ ಎಂದಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪೊಲೀಸ್ ಅಧಿಕಾರಿಗಳು, ‘ಬಾಲಕಿ ನೀಡಿದ ಹೇಳಿಕೆ ಅನ್ವಯ ಪೊಕ್ಸೊ ಅಡಿಯಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. ಆರೋಪಿಯನ್ನು ಗುರುತಿಸಲು ಬಾಲಕಿಯನ್ನು ಮತ್ತೆ ಕೌನ್ಸೆಲಿಂಗ್ ಮಾಡಲಾಗುವುದು. ಬಾಲಕಿ ಗರ್ಭಿಣಿಯಾಗಲು ಶ್ರೀನಾಥ್ ಕಾರಣ ಅಲ್ಲ ಎನ್ನುವುದು ಮಾತ್ರ ಡಿಎನ್‌ಎ ಪರೀಕ್ಷೆಯಲ್ಲಿ ಗೊತ್ತಾಗಿದೆ. ಒಂದು ವೇಳೆ, ಬಾಲಕಿ ತನ್ನ ಆರೋಪಕ್ಕೆ ಬದ್ಧವಾಗಿಯೇ ಉಳಿದರೆ ಶ್ರೀನಾಥ್ ವಿರುದ್ಧ ಅತ್ಯಾಚಾರದ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ಮುಂದುವರಿಸಲಾಗುವುದು’ ಎಂದು ತಿಳಿಸಿದ್ದಾರೆ.

ನಿಧನ ವಾರ್ತೆ

ಬುದ್ಧದೇವ್ ಗುಹಾ

ಕೋಲ್ಕತ್ತ: ‘ಕೋವಿಡ್ ನಂತರದ ಸಮಸ್ಯೆಗಳಿಂದ ಬಳಲುತ್ತಿದ್ದ ಪ್ರಸಿದ್ಧ ಬಂಗಾಳಿ ಲೇಖಕ ಬುದ್ಧದೇವ್ ಗುಹಾ ಅವರು(85) ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ರಾತ್ರಿ 11.25ಕ್ಕೆ ಹೃದಯಾಘಾತದಿಂದ ನಿಧನರಾದರು’ ಎಂದು ಅವರ ಕುಟುಂಬದ ಸದಸ್ಯರು ತಿಳಿಸಿದರು.



ಉಸಿರಾಟದ ತೊಂದರೆ ಮತ್ತು ಮೂತ್ರಕೋಶ ಸೋಂಕು ಕಾಣಿಸಿಕೊಂಡ ಕಾರಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗುಹಾ ಅವರ ಪತ್ನಿ 2011ರಲ್ಲಿ ನಿಧನರಾಗಿದ್ದರು. ಇಬ್ಬರು ಹೆಣ್ಣುಮಕ್ಕಳು ಇದ್ದಾರೆ. ‘ಮಧುಕರಿ’ ಕೃತಿ ಗುಹಾ ಅವರಿಗೆ ಖ್ಯಾತಿ ತಂದುಕೊಟ್ಟಿತ್ತು. ಅವರ ಕಾದಂಬರಿಗಳು ಮತ್ತು ಸಣ್ಣಕತೆಗಳು ಕೂಡ ಜನಪ್ರಿಯವಾಗಿವೆ. ಅವರು ಆನಂದ್ ಪುರಸ್ಕಾರ್, ಶಿರೋಮನ್ ಪುರಸ್ಕಾರ್ ಮತ್ತು ಶರತ್ ಪುರಸ್ಕಾರ್ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಲೇಖರಾಗೆ ಆತ್ಮವಿಶ್ವಾಸ ತುಂಬಿದ ಅಭಿನವ್ ಬಿಂದ್ರಾ ಆತ್ಮಚರಿತ್ರೆ; ದೇವೇಂದ್ರ 3 ಪದಕಗಳ ಒಡೆಯ

ಮನೋಬಲ ಪಡೆದವರ ಛಲ

ಟೋಕಿಯೊ/ಜೈಪುರ (ಪಿಟಿಐ/ಎಎಫ್‌ಪಿ): ಕಾರು ಅಪಘಾತದಲ್ಲಿ ಸೊಂಟಕ್ಕಿಂತ ಕೆಳಭಾಗದ ಸ್ವಾಧೀನ ಕಳೆದುಕೊಂಡ ಅವನಿ ಲೇಖರಾ, ಮರ ಏರುವಾಗ ವಿದ್ಯುತ್ ತಂತಿ ತಾಗಿ ಎಡಗೈ ಕಳೆದುಕೊಂಡ ದೇವೇಂದ್ರ ಜಜಾರಿಯ, ಬೈಕ್ ಅಪಘಾತದಲ್ಲಿ ಕಾಲು ಕಳೆದುಕೊಂಡ ಸುಮಿತ್ ಅಂಟಿಲ್, 'ಏಕಲವ್ಯ'ನಂತೆ ಅಭ್ಯಾಸ ಮಾಡಿದ ಯೋಗೇಶ್ ಕಥೂನಿಯಾ..

ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಸೋಮವಾರ ಪದಕಗಳನ್ನು ಗಳಿಸಿಕೊಟ್ಟ ಕ್ರೀಡಾಪಟುಗಳು ಸಂಕಷ್ಟದಲ್ಲೇ ಬೆಳೆದು ಛಲ ಹಾಗೂ ಆತ್ಮವಿಶ್ವಾಸ ಬೆಳೆಸಿಕೊಂಡವರು.

2012ರಲ್ಲಿ ಸಂಭವಿಸಿದ ಕಾರು ಅಪಘಾತದಲ್ಲಿ ಅವನಿ ನಂತರ ಎಲ್ಲದಕ್ಕೂ ಎಲ್ಲರಲ್ಲೂ ಕೋಪ ಮಾಡಿಕೊಳ್ಳುತ್ತಿದ್ದರು. ಅವರ ಮನಸ್ತಾಪ ತಣಿಸಲು ತಂದೆ ಪ್ರವೀಣ್ ಅವರು ಜೈಪುರದ ಶೂಟಿಂಗ್ ರೇಂಜ್‌ಗೆ ಕರೆದುಕೊಂಡು ಹೋದರು. ಆ ಭೇಟಿ ಅವರ ಬದುಕಿನ ಹಾದಿಗೆ ಮಹತ್ವದ ತಿರುವು ನೀಡಿತು. ಐತಿಹಾಸಿಕ ಚಿನ್ನದ ಪದಕದವರೆಗೆ ಅವರನ್ನು ಕರೆದುಕೊಂಡು ಹೋಯಿತು.

ಶೂಟಿಂಗ್ ರೇಂಜ್‌ನಲ್ಲಿ ಅಭ್ಯಾಸದಲ್ಲಿ ತೊಡಗಿದ್ದವರನ್ನು ಹುರಿದುಂಬಿಸುತ್ತಿದ್ದ ಅವನಿ ಅವರಿಗೆ ನಂತರ ಒಲಿಂಪಿಕ್ ಚಾಂಪಿಯನ್ ಶೂಟರ್ ಅಭಿನವ್ ಬಿಂದ್ರಾ ಅವರ ಆತ್ಮಚರಿತ್ರೆಯ ಪುಸ್ತಕ ಸಿಕ್ಕಿತು. ಅದನ್ನು ಓದಿದ ನಂತರ ಶೂಟಿಂಗ್‌ನಲ್ಲಿ ಸಾಧನೆ ಮಾಡುವ ಮನಸ್ಸಾಯಿತು. 2015ರಲ್ಲಿ ಅಭ್ಯಾಸ ಆರಂಭವಾಯಿತು.

ಮೂರು ಪದಕಗಳ ಒಡೆಯ: 2004 ಮತ್ತು 2016ರ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ದೇವೇಂದ್ರ ಜಜಾರಿಯ ಇದೀಗ ಮೂರನೇ ಪದಕದೊಂದಿಗೆ ದೇಶದ ಶ್ರೇಷ್ಠ ಪ್ಯಾರಾ ಅಥ್ಲೀಟ್ ಎನಿಸಿಕೊಂಡಿದ್ದಾರೆ. ಕಳೆದ ವರ್ಷ ತಂದೆಯನ್ನು ಕಳೆದುಕೊಂಡ ನಂತರ ಕುಗ್ಗಿ ಹೋಗಿದ್ದ ಅವರು ಟೋಕಿಯೊದಲ್ಲಿ ಗೆದ್ದ ಬೆಳ್ಳಿ ಪದಕವನ್ನು ತಂದೆಗೆ ಅರ್ಪಿಸಿದ್ದಾರೆ. 'ಅವರಿಂದಾಗಿ ಈ ಮಟ್ಟಕ್ಕೆ ಬೆಳೆದೆ. ಅವರಿಲ್ಲದೇ ಇರುವುದರಿಂದ ದೊಡ್ಡ ಶೂನ್ಯ ಆವರಿಸಿದೆ' ಎಂದು ದೇವೇಂದ್ರ ಹೇಳಿದರು.

8ನೇ ವಯಸ್ಸಿನಲ್ಲಿ ಪಾರ್ಶ್ವವಾಯು ಸಮಸ್ಯೆಗೆ ಒಳಗಾದ ಯೋಗೇಶ್ ಅವರಿಗೆ ನಂತರ ಕೃತಕ ಅಂಗಗಳನ್ನು ಜೋಡಿಸಲಾಗಿತ್ತು. ಸೈನಿಕನ ಮಗನಾಗಿರುವ ದೆಹಲಿ ನಿವಾಸಿ ಯೋಗೇಶ್, ಬಿಕಾಂ ಪದವೀಧರ. ಲಾಕ್‌ಡೌನ್‌ನಿಂದಾಗಿ ಕ್ರೀಡಾಂಗಣಗಳು ಬಂದ್ ಆಗಿದ್ದುದರಿಂದ ಪ್ಯಾರಾಲಿಂಪಿಕ್ಸ್‌ಗೆ ಕೋಚ್ ಇಲ್ಲದೇ ಅಭ್ಯಾಸ ಮಾಡಿದ್ದರು.

ಕುಸ್ತಿಪಟುವಾಗಿದ್ದ ಹರಿಯಾಣದ ಸೋನೆಪತ್ ನಿವಾಸಿ ಸುಮಿತ್ 2015ರಲ್ಲಿ ಅಪಘಾತದಿಂದ ಜರ್ಜರಿತರಾಗಿದ್ದರು. ದೆಹಲಿಯ ರಾಮ್ಜಾಸ್ ಕಾಲೇಜು ವಿದ್ಯಾರ್ಥಿಯಾಗಿರುವ 23 ವರ್ಷದ ಸುಮಿತ್, ಗ್ರಾಮದ ಪ್ಯಾರಾ ಅಥ್ಲೀಟ್ ಒಬ್ಬರ ನೆರವಿನಿಂದ ಈ ಹಂತಕ್ಕೆ ಬೆಳೆದಿದ್ದಾರೆ.


ಜನ್ಮಾಷ್ಟಮಿಯ 'ಸುಂದರ' ಗಳಿಗೆ: ರಾಜಸ್ತಾನದ ಕರೌಲಿ ಜಿಲ್ಲೆಯ ದೆವ್ಲೆನ್ ಗ್ರಾಮದ ಸುಂದರ್ ಸಿಂಗ್ ಅವರಿಗೆ ಇಬ್ಬರು ಮಕ್ಕಳು. ಅವರ ಪೈಕಿ ಒಂದು ಮಗು ಜನಿಸಿದ್ದು ಶ್ರೀಕೃಷ್ಣ ಜನ್ಮಾಷ್ಟಮಿಯ ದಿನ. ಸುಂದರ್ ಸಿಂಗ್ ಜನ್ಮಾಷ್ಟಮಿಯ ದಿನವೇ ಪದಕ ಗೆದ್ದಿದ್ದಾರೆ. ಸುಂದರ್ ಅವರ ತಾಯಿ ಸ್ಥಳೀಯ ಗ್ರಾಮ ಪಂಚಾಯಿತಿಯ ಸರ್ಪಂಚ್ ಆಗಿದ್ದಾರೆ.



ಅವನಿ ಲೇಖರಾ–ಪಿಟಿಐ ಚಿತ್ರ

ಆರಂಭದಲ್ಲಿ ಫಿಜಿಯೊ ಒಬ್ಬರ ನೆರವಿನಿಂದ ವ್ಯಾಯಾಮ ಮತ್ತು ಸ್ಟ್ರೆಚಿಂಗ್ ಮಾಡುತ್ತಿದ್ದೆ. ಕ್ರಮೇಣ ತಂದೆ ತಾಯಿಯೇ ನನ್ನ ವ್ಯಾಯಾಮದ ಗುರುಗಳಾದರು.
ಅವನಿ ಲೇಖರಾ
ಚಿನ್ನದ ಗೆದ್ದ ಶೂಟಿಂಗ್ ಪಟು

ಕ್ರೀಡೆಯಲ್ಲಿ ಏಳು-ಬೀಳು ಸಹಜ. ನನ್ನಿಂದ ಎಷ್ಟು ಸಾಧ್ಯವೋ ಅಷ್ಟು ಸಾಮರ್ಥ್ಯ ಹೂಡಿ ಜಾವೆಲಿನ್ ಎಸೆದಿದ್ದೇನೆ. ವೈಯಕ್ತಿಕ ಶ್ರೇಷ್ಠ ಸಾಧನೆಯೂ ಆಗಿದೆ
ದೇವೇಂದ್ರ ಜಜಾರಿಯ ಬೆಳ್ಳಿ ಗೆದ್ದ ಜಾವೆಲಿನ್ ಪಟು



ದೇವೇಂದ್ರ ಜಜಾರಿಯ – ಪಿಟಿಐ ಚಿತ್ರ



ಯೋಗೇಶ್ ಕಥೂನಿಯ –ಪಿಟಿಐ ಚಿತ್ರ

ಚೀನಾದ 'ಬಾಲಕಿ'ಗೆ ದಾಖಲೆ ಸಂಭ್ರಮ


ಚೀನಾವನ್ನು ಪ್ರತಿನಿಧಿಸಿರುವ ಅತಿ ಕಿರಿಯ ಕ್ರೀಡಾಪಟು ಜಿಯಾಂಗ್ ಯುಯಾನ್ ತಮ್ಮದೇ ಹೆಸರಿನಲ್ಲಿದ್ದ ವಿಶ್ವ ದಾಖಲೆ ಮುರಿದು ಚಿನ್ನ ಗಳಿಕೆಯತ್ತ ಸಾಗಿದರು. 16 ವರ್ಷ ವಯಸ್ಸಿನ ಈಜುಪಟು ಜಿಯಾಂಗ್ ಅವರು ಎಸ್–6 ವಿಭಾಗದ 50 ಮೀಟರ್ಸ್ ಬಟರ್‌ಫ್ಲೈನಲ್ಲಿ 34.56 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ಮೂಲಕ 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮಾಡಿದ ದಾಖಲೆಯನ್ನು ಉತ್ತಮಪಡಿಸಿಕೊಂಡಿದ್ದರು.

ಹಿಂದಿನ ದಾಖಲೆಗಿಂತ 0.30 ಸೆಕೆಂಡುಗಳಷ್ಟು ಮೊದಲು ಅವರು ಗುರಿ ಸೇರಿದರು.

ಲಾಕ್‌ಡೌನ್‌ನಲ್ಲಿ ಸೌಲಭ್ಯಗಳಿಂದ ವಂಚಿತನಾಗಿದ್ದೆ. ಹಿಂದಿನ 18 ತಿಂಗಳು ತುಂಬ ಕಷ್ಟಕರವಾಗಿದ್ದವು. ಬೆಳ್ಳಿ ಗೆಲ್ಲಲು ಸಾಧ್ಯವಾದದ್ದು ಅಪಾರ ಖುಷಿ ತಂದಿದೆ. ಯೋಗೇಶ್ ಕಥೂನಿಯಾ
ಬೆಳ್ಳಿ ಪದಕ ಗೆದ್ದ ಕ್ರೀಡಾಪಟು



ಸುಮಿತ್ ಅಂಟಿಲ್ ಸಂಭ್ರಮ – ರಾಯಿಟರ್ಸ್ ಚಿತ್ರ



ಸುಂದರ್ ಸಿಂಗ್ ಗುರ್ಜರ್ –ರಾಯಿಟರ್ಸ್ ಚಿತ್ರ

ಸರ್ಕಾರದಿಂದ ಬಹುಮಾನ

ರಾಜಸ್ತಾನ್ ಸರ್ಕಾರ ಪದಕಗಳನ್ನು ಗೆದ್ದ ತನ್ನ ರಾಜ್ಯದ ಕ್ರೀಡಾಪಟುಗಳಿಗೆ ಬಹುಮಾನ ಘೋಷಿಸಿದೆ. ಚಿನ್ನ ಗೆದ್ದ ಅವನಿಗೆ ₹ 3 ಕೋಟಿ, ಬೆಳ್ಳಿ ಗಳಿಸಿದ ದೇವೇಂದ್ರ ಜಜಾರಿಯಗೆ ₹ 2 ಕೋಟಿ ಮತ್ತು ಕಂಚಿನ ಪದಕ ವಿಜೇತ ಸುಂದರ್ ಸಿಂಗ್ ಗುರ್ಜರ್‌ಗೆ ₹ 1 ಕೋಟಿ ನೀಡುವುದಾಗಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋತ್ ಟ್ವೀಟ್ ಮಾಡಿದ್ದಾರೆ.

ರಣಜಿ ಕ್ರಿಕೆಟ್: ಒಂದೇ ಗುಂಪಿನಲ್ಲಿ ಕರ್ನಾಟಕ, ಮುಂಬೈ, ದೆಹಲಿ

ನವದೆಹಲಿ (ಪಿಟಿಐ): ಮುಂದಿನ ವರ್ಷದ ಜನವರಿ 5ರಂದು ಪ್ರಾರಂಭವಾಗಲಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಗೆ ತಂಡಗಳನ್ನು ವಿಂಗಡಿಸಲಾಗಿದ್ದು ಬಲಿಷ್ಠ ಕರ್ನಾಟಕ, ದೆಹಲಿ ಮತ್ತು ಮುಂಬೈ ಒಂದೇ ಗುಂಪಿನಲ್ಲಿವೆ.

ಈ ಮೂರು ತಂಡಗಳು ಹೈದರಾಬಾದ್, ಮಹಾರಾಷ್ಟ್ರ ಮತ್ತು ಉತ್ತರಾಖಂಡ ಇರುವ ಎಲೀಟ್ 'ಸಿ' ಗುಂಪಿನಲ್ಲಿ ಸ್ಥಾನ ಪಡೆದಿವೆ.

ಸೌರಾಷ್ಟ್ರ, ತಮಿಳುನಾಡು, ರೈಲ್ವೇಸ್, ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್ ಹಾಗೂ ಗೋವಾ ತಂಡಗಳು ಎಲೀಟ್ 'ಡಿ' ಗುಂಪಿನಲ್ಲಿವೆ. ಎಲೀಟ್ 'ಬಿ' ಗುಂಪಿನಲ್ಲಿ ಬಂಗಾಳ, ವಿದರ್ಭ, ಹರಿಯಾಣ, ಕೇರಳ, ತ್ರಿಪುರ ಮತ್ತು ರಾಜಸ್ಥಾನ ತಂಡಗಳಿದ್ದು, ಎಲೀಟ್ 'ಎ' ಗುಂಪಿನಲ್ಲಿ ಗುಜರಾತ್, ಪಂಜಾಬ್, ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಸರ್ವಿಸಸ್ ಮತ್ತು ಅಸ್ಸಾಂ ಇವೆ. ಎಲೀಟ್ 'ಇ' ಗುಂಪು ಆಂಧ್ರ, ಉತ್ತರ ಪ್ರದೇಶ, ಬರೋಡಾ, ಒಡಿಶಾ, ಛತ್ತೀಸಗಡ ಮತ್ತು ಪುದುಚೇರಿ ತಂಡಗಳನ್ನು ಒಳಗೊಂಡಿದೆ.

ಅಕ್ಟೋಬರ್‌ನಲ್ಲಿ ಹಾಕಿ ಟೂರ್ನಿ ಆರಂಭ

ನವದೆಹಲಿ (ಪಿಟಿಐ): ಬಹುನಿರೀಕ್ಷಿತ ದೇಶಿ ಹಾಕಿ ಟೂರ್ನಿಗಳು ಈ ವರ್ಷದ ಅಕ್ಟೋಬರ್‌ನಲ್ಲಿ ಪುನರಾರಂಭಭವಾಗಲಿವೆ. ಕೋವಿಡ್ ಬಿಕ್ಕಟ್ಟಿನ ಕಾರಣ ಏಳು ತಿಂಗಳುಗಳ ಕಾಲ ಸ್ಥಗಿತಗೊಂಡಿದ್ದವು.

ಟೂರ್ನಿ ಅಯೋಜಿಸುವ ರಾಜ್ಯ ಸಂಸ್ಥೆಗಳು ಮತ್ತು ಭಾಗವಹಿಸುವ ತಂಡಗಳಿಗೆ ಕಟ್ಟುನಿಟ್ಟಿನ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವಂತೆ ಮತ್ತು ಗೃಹ ಸಚಿವಾಲಯ ಮತ್ತು ಆಯಾ ರಾಜ್ಯ ಸರ್ಕಾರಗಳು ಜಾರಿಗೊಳಿಸಿರುವ ಎಲ್ಲಾ ಕೋವಿಡ್ ಮಾರ್ಗಸೂಚಿಗಳನ್ನು ನಿರ್ವಹಿಸುವಂತೆ ಹಾಕಿ ಇಂಡಿಯಾ ಸೂಚಿಸಿದೆ.

ಅಕ್ಟೋಬರ್ 4ರಿಂದ 13ರವರೆಗೆ ಭೋಪಾಲ್‌ನಲ್ಲಿ ನಿಗದಿಯಾಗಿರುವ ಪುರುಷರ ಸಬ್ ಜೂನಿಯರ್ ಅಕಾಡೆಮಿ ಚಾಂಪಿಯನ್‌ಷಿಪ್‌ನೊಂದಿಗೆ ಟೂರ್ನಿಗಳು ಆರಂಭವಾಗಲಿವೆ. ಬಳಿಕ ಇದೇ ತಾಣದಲ್ಲಿ ಅಕ್ಟೋಬರ್ 18ರಿಂದ 27ರವರೆಗೆ ಜೂನಿಯರ್ ಚಾಂಪಿಯನ್‌ಷಿಪ್ ನಡೆಯಲಿದೆ.

ಕ್ರಿಕೆಟ್‌ಗೆ ಸ್ಟುವರ್ಟ್ ಬಿನ್ನಿ ವಿದಾಯ

ಪ್ರಜಾವಾಣಿ ವಾರ್ತೆ


ಸ್ಟುವರ್ಟ್ ಬಿನ್ನಿ

ಬೆಂಗಳೂರು: 'ಕರ್ನಾಟಕ ಮತ್ತು ಭಾರತ ತಂಡದಲ್ಲಿ ಆಡುವ ಅವಕಾಶ ಲಭಿಸಿದ್ದು ನನ್ನ ಜೀವನದ ಹೆಮ್ಮೆಯ ಸಂಗತಿ. ಹಲವು ಏರಿಳಿತಗಳ ನಡುವೆಯೂ ಯಶಸ್ಸು ಗಳಿಸಲು ಬೆಂಬಲಿಸಿದ ಎಲ್ಲರಿಗೂ ನಾನು ಅಭಾರಿ'..

ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್, ಬೆಂಗಳೂರಿನ ಸ್ಟುವರ್ಟ್ ಬಿನ್ನಿ ಅವರ ಮಾತುಗಳಿವು. ಅವರು ಸೋಮವಾರ ಬೆಳಿಗ್ಗೆ ಪ್ರಥಮ ದರ್ಜೆ ಕ್ರಿಕೆಟ್‌ಗೆ ವಿದಾಯ ಘೋಷಿಸಿದರು.

'ನನ್ನಲ್ಲಿ ಇನ್ನೂ ಕೆಲಕಾಲ ಕ್ರಿಕೆಟ್ ಆಡುವ ಸಾಮರ್ಥ್ಯ ಇದೆ. ಈ ಹೊತ್ತಿನಲ್ಲಿ ಇಂತಹ ನಿರ್ಧಾರ ತೆಗೆದುಕೊಳ್ಳುವುದು ಕಷ್ಟ. ಆದರೂ ಅನಿವಾರ್ಯ' ಎಂದು ಬಿನ್ನಿ ಹೇಳಿದ್ದಾರೆ.

1983ರ ವಿಶ್ವಕಪ್ ವಿಜೇತ ರೋಜರ್ ಬಿನ್ನಿ ಅವರ ಮಗ ಎಂಬ ಖ್ಯಾತಿಯ ಜೊತೆಗೆ ತಮ್ಮ ಆಟದ ಮೂಲಕವೂ ಹೆಸರು ಮಾಡಿಕೊಂಡವರು ಸ್ಟುವರ್ಟ್. ಆರು ಟೆಸ್ಟ್ ಮತ್ತು 14 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. 2014ರಲ್ಲಿ ಬಾಂಗ್ಲಾದೇಶ ವಿರುದ್ಧ (4.4-2-4-6) ಅವರು ಮಾಡಿದ ಸಾಧನೆಯು ಭಾರತೀಯ ಬೌಲರ್‌ನಿಂದ ಮೂಡಿಬಂದ ಸರ್ವಶ್ರೇಷ್ಠ ದಾಖಲೆಯಾಗಿದೆ.

ದೇಶಿ ಕ್ರಿಕೆಟ್‌ನಲ್ಲಿ ಕರ್ನಾಟಕ ಮತ್ತು ನಾಗಾಲ್ಯಾಂಡ್ ತಂಡಗಳನ್ನು ಪ್ರತಿನಿಧಿಸಿದ್ದರು. 95 ಪ್ರಥಮ ದರ್ಜೆ ಪಂದ್ಯಗಳಲ್ಲಿ ಅವರು 4,796 ರನ್ ಗಳಿಸಿದ್ದರು. ಮಧ್ಯಮವೇಗಿಯಾಗಿದ್ದ ಸ್ಟುವರ್ಟ್ 148 ವಿಕೆಟ್‌ಗಳನ್ನೂ ಗಳಿಸಿದ್ದರು. ಕರ್ನಾಟಕ ತಂಡದ 'ಡಬಲ್–ಟ್ರಿಪಲ್' ಸಾಧನೆಯಲ್ಲಿ ಸ್ಟುವರ್ಟ್ ಪಾತ್ರವೂ ಮಹತ್ವದ್ದಾಗಿತ್ತು.

ಆದರೆ ಅವರ ವೃತ್ತಿಜೀವನವು ಬಹಳಷ್ಟು ಏಳು ಬೀಳುಗಳಿಂದ ಕೂಡಿದ್ದು ಸುಳ್ಳಲ್ಲ. ಇಂಡಿಯನ್ ಕ್ರಿಕೆಟ್ ಲೀಗ್ (ಐಸಿಎಲ್)ನಲ್ಲಿ ಅವರು ಆಡಿದ್ದರು. ಅದರಿಂದಾಗಿ ಬಿಸಿಸಿಐ ಕೆಂಗಣ್ಣಿಗೂ ಗುರಿಯಾಗಿದ್ದರು. ನಂತರ ಐಸಿಎಲ್ ಬಿಟ್ಟು ಮರಳಿದ ಸ್ಟುವರ್ಟ್ ಕರ್ನಾಟಕ ತಂಡದಲ್ಲಿ ತಮ್ಮ ಛಾಪು ಒತ್ತಲು ಬಹಳಷ್ಟು ಕಾಲ ಶ್ರಮಪಡಬೇಕಾಯಿತು.

'ನಾನು ವೈಫಲ್ಯ ಅನುಭವಿಸಿ ಮರಳಿದಾಗಲೆಲ್ಲ ಮತ್ತೆ ಮತ್ತೆ ಸಾಮರ್ಥ್ಯ ಸಾಬೀತು ಮಾಡಿದ್ದೇನೆ. ಕರ್ನಾಟಕ ಮತ್ತು ಭಾರತ ತಂಡದಲ್ಲಿ ಅವಕಾಶ ಸಿಕ್ಕಾಗಲೆಲ್ಲ ಸಂಪೂರ್ಣ ಸಾಮರ್ಥ್ಯ ಪಣಕ್ಕೊಡ್ಡಿದ್ದೇನೆ. ಆ ತೃಪ್ತಿ ನನಗಿದೆ' ಎಂದು 37 ವರ್ಷದ ಬಿನ್ನಿ ಹೇಳಿದ್ದಾರೆ.

ಸ್ಟುವರ್ಟ್ ಬಿನ್ನಿ ನಿವೃತ್ತಿಯ ನಂತರ ಕೋಚಿಂಗ್ ನೀಡಲು ಆರಂಭಿಸುವುದಾಗಿ ತಿಳಿಸಿದ್ದಾರೆ. ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಲೆವಲ್ 2 ಕೋಚ್ ಆಗಿದ್ದಾರೆ. ಮೂರನೇ ಸರ್ಟಿಫಿಕೆಟ್‌ಗೆ ಪ್ರಯತ್ನಿಸುತ್ತಿದ್ದಾರೆ. ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ತಂಡದಲ್ಲಿಯೂ ಆಡುವ ನಿರೀಕ್ಷೆ ಇದೆ.

ಸ್ಟಾರ್ ಸ್ಪೋರ್ಟ್ಸ್ ಕ್ರೀಡಾ ವಾಹಿನಿಯ ವೀಕ್ಷಕ ವಿವರಣೆಗಾರ್ತಿಯಾಗಿರುವ ಮಯಾಂತಿ ಲ್ಯಾಂಗರ್ ಸ್ಟುವರ್ಟ್ ಬಿನ್ನಿಯವರ ಪತ್ನಿ.

ಐಪಿಎಲ್‌ಗೆ ಸುಂದರ್ ಅಲಭ್ಯ


ಸುಂದರ್

ನವದೆಹಲಿ (ಪಿಟಿಐ): ಬೆರಳಿನ ಗಾಯ ಸಂಪೂರ್ಣ ವಾಸಿಯಾಗದ ಕಾರಣ ವಾಷಿಂಗ್ಟನ್ ಸುಂದರ್ ಅವರು ಯುಎಇಯಲ್ಲಿ ನಿಗದಿಯಾಗಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿಲ್ಲ. ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ನಡೆದ ಫಿಟ್‌ನೆಸ್ ಪರೀಕ್ಷೆಯಲ್ಲಿ ಅವರು ವಿಫಲರಾಗಿದ್ದು, ಟಿ–20 ವಿಶ್ವಕಪ್ ಟೂರ್ನಿಗೆ ಆಯ್ಕೆಯಾಗುವುದೂ ಸಂದೇಹವಾಗಿದೆ.

ಐಪಿಎಲ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಪರ ಆಡುವ ಆಲ್‌ರೌಂಡರ್ ಸುಂದರ್, ಭಾರತ ಕ್ರಿಕೆಟ್ ತಂಡದೊಂದಿಗೆ ಇಂಗ್ಲೆಂಡ್ ಪ್ರವಾಸಕ್ಕೆ ತೆರಳಿದ್ದರು. ಈ ಸಂದರ್ಭದಲ್ಲಿ ಅಭ್ಯಾಸ ಪಂದ್ಯವೊಂದನ್ನು ಆಡುವ ವೇಳೆ ಮೊಹಮ್ಮದ್ ಸಿರಾಜ್ ಅವರ ಎಸೆತದಲ್ಲಿ ಗಾಯಗೊಂಡಿದ್ದರು. ಸುಂದರ್ ಬದಲಿಗೆ ಆಕಾಶದೀಪ್ ಅವರನ್ನು ಆರ್‌ಸಿಬಿ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಬಾಕ್ಸಿಂಗ್: ಚಿನ್ನ ಗೆದ್ದ ವಿಶಾಲ್

ನವದೆಹಲಿ (ಪಿಟಿಐ): ವಿಶ್ವ ಯೂತ್ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ ವಿಶ್ವಾಮಿತ್ರ ಚೋಂಗಥಮ್ ಮತ್ತು ವಿಶಾಲ್ ಅವರ ಅವರು ದುಬೈನಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾರೆ.

ವಿಶ್ವಾಮಿತ್ರ ಅವರು ತೀವ್ರ ಪೈಪೋಟಿ ನಡೆದ 51 ಕೆಜಿ ವಿಭಾಗದ ಫೈನಲ್ ಹಣಾಹಣಿಯಲ್ಲಿ 4–1ರಿಂದ ಉಜ್ಬೆಕಿಸ್ತಾನದ ಕುಜಿಬೊಯ್ ಅಹಮದ್‌ಜೊನ್ ಅವರನ್ನು ಮಣಿಸಿದರು. ಪ್ರಶಸ್ತಿ ಸುತ್ತಿನ ಬೌಟ್‌ನಲ್ಲಿ ವಿಶಾಲ್ (80 ಕೆಜಿ) ಅವರು 5–0ಯಿಂದ ಕಿರ್ಗಿಸ್ತಾನದ ಅಕ್ಮತೊವ್ ಸಂಜಾರ್ ಎದುರು ಜಯ ಸಾಧಿಸಿದರು.

ವಿಶ್ವನಾಥ್ ಸುರೇಶ್ (48 ಕೆಜಿ) ಬೆಳ್ಳಿ ಪದಕ ಗಳಿಸಿದರು. ಚಿನ್ನದ ಪದಕದ ಸುತ್ತಿನ ಹಣಾಹಣಿಯಲ್ಲಿ ಅವರು 0–5ರಿಂದ ಹಾಲಿ ಯೂತ್ ವಿಶ್ವ ಚಾಂಪಿಯನ್, ಕಜಕಸ್ತಾನದ ಸಂಜಾರ್ ತಷ್ಕೆನ್‌ಬಾಯ್ ಎದುರು ಎಡವಿದರು. ವಂಶರಾಜ್ (63.5 ಕೆಜಿ) ಮತ್ತು ಜಯದೀಪ್ ರಾವತ್ (71 ಕೆಜಿ) ಕೂಡ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಇದಕ್ಕೂ ಮೊದಲು ಜೂನಿಯರ್ ವಿಭಾಗದ ಸ್ಪರ್ಧೆಯಲ್ಲಿ ಭಾರತದ ಮಹಿಳೆಯರು ಅರ್ಧ ಡಜನ್ ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು.

ಬೆಂಗಳೂರಿನಲ್ಲಿ ಐ–ಲೀಗ್ ಅರ್ಹತಾ ಟೂರ್ನಿ

ನವದೆಹಲಿ (ಪಿಟಿಐ): ದೇಶಿ ಫುಟ್‌ಬಾಲ್ ಟೂರ್ನಿಗಳು ಅಕ್ಟೋಬರ್‌ನಲ್ಲಿ ಐ–ಲೀಗ್ ಅರ್ಹತಾ ಪಂದ್ಯಗಳೊಂದಿಗೆ ಬೆಂಗಳೂರಿನಲ್ಲಿ ಆರಂಭವಾಗಲಿವೆ. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ 10 ತಂಡಗಳು ಸೆಣಸಲಿವೆ.

ಏಳು ತಂಡಗಳು ಮೊದಲ ಬಾರಿ ಕಣಕ್ಕಿಳಿಯಲಿವೆ. ಹೈದರಿಯಾ ಸ್ಪೋರ್ಟ್ಸ್ ಎಫ್‌ಸಿ (ಜಮ್ಮು ಮತ್ತು ಕಾಶ್ಮೀರ), ಕಾರ್ಬೆಟ್ ಎಫ್‌ಸಿ (ಉತ್ತರಾಖಂಡ), ಡೆಲ್ಲಿ ಎಫ್‌ಸಿ, ಮದನ್ ಮಹಾರಾಜ್ ಎಫ್‌ಸಿ (ಮಧ್ಯಪ್ರದೇಶ), ರಾಜಸ್ಥಾನ ಯುನೈ ಟೆಡ್, ಕೇರಳ ಯುನೈಟೆಡ್ ಮತ್ತು ರೈನಿತ್ ಎಸ್‌ಸಿ (ಮೇಘಾಲಯ) ಹೊಸ ತಂಡಗಳು.

ಎಆರ್‌ಎ ಎಫ್‌ಸಿ (ಗುಜರಾತ್), ಕೆಂಕರೆ ಎಫ್‌ಸಿ (ಮಹಾರಾಷ್ಟ್ರ) ಮತ್ತು ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡಗಳು ಈಗಾಗಲೇ ಆಡಿರುವ ತಂಡಗಳಾಗಿವೆ.

ಅಮೆರಿಕ ಓಪನ್: ಹಲೆಪ್ ಮುನ್ನಡೆ


ಸಿಮೊನಾ ಹಲೆಪ್


ನ್ಯೂಯಾರ್ಕ್ (ಎಎಫ್‌ಪಿ): ಎರಡು ಬಾರಿಯ ಗ್ರ್ಯಾಂಡ್‌ಸ್ಲಾಮ್ ಚಾಂಪಿಯನ್ ಸಿಮೊನಾ ಹಲೆಪ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಎರಡನೇ ಸುತ್ತಿಗೆ ಕಾಲಿಟ್ಟಿದ್ದಾರೆ.

ಸೋಮವಾರ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ 12ನೇ ಶ್ರೇಯಾಂಕದ ರುಮೇನಿಯಾದ ಆಟಗಾರ್ತಿ 6-4, 7-6 (7/3)ರಿಂದ ಇಟಲಿಯ ಕ್ಯಾಮಿಲಾ ಜಿಯೊರ್ಗಿ ಅವರನ್ನು ಸೋಲಿಸಿದರು. ಮುಂದಿನ ಸುತ್ತಿನಲ್ಲಿ ಅವರು ಸ್ಲೊವೇಕಿಯಾದ ಕ್ರಿಸ್ಟಿನಾ ಕುಸೊವಾ ಎದುರು ಸೆಣಸುವರು.

ಪ್ರೊ ಕಬಡ್ಡಿ ಆಟಗಾರರ ಹರಾಜು: ರೋಹಿತ್, ಸುರ್ಜೀತ್‌ಗೂ ಉತ್ತಮ ಬೆಲೆ

ಪ್ರದೀಪ್, 'ಬಾಹುಬಲಿ'ಗೆ ಕೋಟಿ ಬೆಲೆ

ಪ್ರಜಾವಾಣಿ ವಾರ್ತೆ



ಪ್ರದೀಪ್ ನರ್ವಾಲ್ –ಎಎಫ್‌ಪಿ ಚಿತ್ರ

ಬೆಂಗಳೂರು: ಡುಬ್ಕಿ ಕಿಂಗ್, ರೈಡರ್ ಪ್ರದೀಪ್ ನರ್ವಾಲ್ ಮತ್ತು 'ಬಾಹುಬಲಿ' ಸಿದ್ಧಾರ್ಥ್ ದೇಸಾಯಿ ಅವರು ಪ್ರೊ ಕಬಡ್ಡಿ ಲೀಗ್ ಎಂಟನೇ ಆವೃತ್ತಿಯ ಆಟಗಾರರ ಹರಾಜಿನಲ್ಲಿ ಗರಿಷ್ಠ ಬೆಲೆ ಪಡೆದುಕೊಂಡರು. ಮುಂಬೈನಲ್ಲಿ ನಡೆಯುತ್ತಿರುವ ಹರಾಜಿನ ಎರಡನೇ ದಿನವಾದ ಸೋಮವಾರ ₹ 1 ಕೋಟಿ 65 ಲಕ್ಷ ನೀಡಿ ಪ್ರದೀಪ್ ಅವರನ್ನು ಯು.ಪಿ.ಯೋಧಾ ಪಡೆದುಕೊಂಡಿತು. ಇದು ಲೀಗ್‌ನಲ್ಲಿ ದಾಖಲೆ ಬೆಲೆ. ₹ 1 ಕೋಟಿ 30 ಲಕ್ಷ ವ್ಯಯಿಸಿ ಸಿದ್ಧಾರ್ಥ್ ಅವರನ್ನು ತೆಲುಗು ಟೈಟನ್ಸ್ ಉಳಿಸಿಕೊಂಡಿತು.

ರೈಡರ್‌ಗಳಾದ ಮಂಜೀತ್, ಸಚಿನ್, ಆಲ್‌ರೌಂಡರ್ ರೋಹಿತ್ ಗುಲಿಯ ಮತ್ತು ಡಿಫೆಂಡರ್ ಸುರ್ಜೀತ್ ಸಿಂಗ್ ಅವರಿಗೂ ಉತ್ತಮ ಬೆಲೆ ಲಭಿಸಿತು. ಮಂಜೀತ್ ₹ 92 ಲಕ್ಷಕ್ಕೆ ತಮಿಳ್ ತಲೈವಾಸ್ ಪಾಲಾದರೆ ಸಚಿನ್ ₹ 84 ಕೋಟಿ ಮೊತ್ತಕ್ಕೆ ಪಟ್ನಾ ಮತ್ತು ರೋಹಿತ್ ₹ 83 ಲಕ್ಷ ಮೊತ್ತಕ್ಕೆ ಹರಿಯಾಣ ಸ್ಟೀಲರ್ಸ್ ಪಾಲಾದರು. ₹ 75 ಲಕ್ಷ ವ್ಯಯಿಸಿ ಸರ್ಜೀತ್ ಸಿಂಗ್ ಅವರನ್ನು ತಮಿಳ್ ತಲೈವಾಸ್ ಪಡೆದುಕೊಂಡಿತು.

ಡಿಫೆಂಡರ್ ರವೀಂದ್ರ ಪೆಹಲ್ ಅವರನ್ನು ಗುಜರಾತ್ ಜೈಂಟ್ಸ್ ₹ 74 ಲಕ್ಷ ಮೊತ್ತಕ್ಕೆ ತನ್ನ ತೆಕ್ಕೆಗೆ ಹಾಕಿಕೊಂಡಿತು. ₹ 71 ಲಕ್ಷಕ್ಕೆ ರೈಡರ್ ಪ್ರಪಂಚನ್ ಅವರನ್ನು ತಮಿಳ್ ತಲೈವಾಸ್ ಪಡೆದುಕೊಂಡಿತು. ಬಲದೇವ್ ಸಿಂಗ್ ಮತ್ತು ವಿಶಾಲ್ ಭಾರದ್ವಾಜ್ ತಲಾ ₹ 60 ಲಕ್ಷಕ್ಕೆ ಪುಣೇರಿ ಪಲ್ಟನ್ ಪಾಲಾದರು. ದೀಪಕ್ ನಿವಾಸ್ ಹೂಡ ಮತ್ತು ಸುರೇಂದರ್ ಸಿಂಗ್ ತಲಾ 55 ಲಕ್ಷಕ್ಕೆ ಕ್ರಮವಾಗಿ ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ತೆಲುಗು ಟೈಟನ್ಸ್ ಪಾಲಾದರು.

ವಿದೇಶಿ ಆಟಗಾರರ ಪೈಕಿ ಇರಾನ್‌ನ ಮೊಹಮ್ಮದ್ ರೇಜಾ ಮತ್ತು ಅಬೊಜೆರ್ ಮಿಘಾನಿ ಗೆಚ್ಚು ಬೆಲೆ ಪಡೆದುಕೊಂಡರು. ಆಲ್‌ರೌಂಡರ್ ಮೊಹಮ್ಮದ್ ರೇಜಾ ₹ 31 ಲಕ್ಷ ಮೊತ್ತಕ್ಕೆ ಪಟ್ನಾ ಪೈರೇಟ್ಸ್ ಪಾಲಾದರೆ ಡಿಫೆಂಡ ರ್ಅಬೊಜೆರ್ ₹ 30.5 ಲಕ್ಷಕ್ಕೆ ಬೆಂಗಾಲ್ ವಾರಿಯರ್ಸ್ ಪಾಲಾದರು. ಕೊರಿಯಾದ ರೈಡರ್ ಜಂಗ್ ಕುನ್ ಲೀ ಅವರನ್ನು ₹ 20.5 ಲಕ್ಷಕ್ಕೆ ಪಟ್ನಾ ಪೈರೇಟ್ಸ್, ಇರಾನ್‌ನ ಹಾದಿ ಅವರನ್ನು ₹ 20 ಲಕ್ಷಕ್ಕೆ ಗುಜರಾತ್ ಜೈಂಟ್ಸ್ ಮತ್ತು ಇರಾನ್‌ನ ರೈಡರ್ ಮಹಮ್ಮದ್ ಮಗ್ಸೊಡ್ಲು ಅವರನ್ನು ₹ 13.2 ಲಕ್ಷಕ್ಕೆ ಹರಿಯಾಣ ಸ್ಟೀಲರ್ಸ್ ಪಡೆದುಕೊಂಡಿತು.

ಕ್ರಿಕೆಟ್ ಕೋಚ್ ವಾಸು ಪರಾಂಜಪೆ ನಿಧನ

ಮುಂಬೈ (ಪಿಟಿಐ): ಖ್ಯಾತ ಕ್ರಿಕೆಟ್ ಕೋಚ್ ಹಾಗೂ ಮುಂಬೈ ತಂಡದ ಮಾಜಿ ಆಟಗಾರ ವಾಸು ಪರಾಂಜಪೆ (82) ಸೋಮವಾರ ನಿಧನರಾದರು. ಅವರಿಗೆ ಪತ್ನಿ, ಭಾರತ ತಂಡದ ಮಾಜಿ ಆಟಗಾರ ಹಾಗೂ ಆಯ್ಕೆ ಸಮಿತಿ ಸದಸ್ಯ ಪುತ್ರ ಜತಿನ್ ಮತ್ತು ಇಬ್ಬರು ಪುತ್ರಿಯರಿದ್ದಾರೆ.

ವಾಸುದೇವ್ ಪರಾಂಜಪೆ ಅವರು ಭಾರತ ಕ್ರಿಕೆಟ್‌ನಲ್ಲಿ ಅದರಲ್ಲೂ ವಿಶೇಷವಾಗಿ ಮುಂಬೈ ಕ್ರಿಕೆಟ್‌ನಲ್ಲಿ ಕೋಚ್, ಅಯ್ಕೆಗಾರ, ಸಲಹೆಗಾರ ಸೇರಿದಂತೆ ಹಲವು ಹುದ್ದೆಗಳನ್ನು ಅವರು ನಿಭಾಯಿಸಿದ್ದರು. ಖ್ಯಾತ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಅವರಿಗೆ 'ಸನ್ನಿ' ಎಂದು ಮೊದಲ ಬಾರಿ ಕರೆದವರು ವಾಸು.

29 ಪ್ರಥಮದರ್ಜೆ ಪಂದ್ಯಗಳಲ್ಲಿ ಆಡಿದ್ದ ಅವರು 785 ರನ್ ಗಳಿಸಿದ್ದರು.